THE BOOK WAS DRENCHED

TEXT FLY WITHIN THE BOOK ONLY

TEXT PROBLEM WITHIN THE BOOK ONLY

UNIVERSAL LIBRARY
OU_198548
UNIVERSAL LIBRARY

# ಜೀರ್ಣವಿಜಯನಗರದರ್ಶನ.

K954
R89J

ರಾಮಸ್ವಾಮಯ್ಯಂಗಾರ್.

Series No. 74.

# ಜೀರ್ಣವಿಜಯನಗರಾದರ್ಶನಂ

ಬೆಂಗಳೂರು ಡಿಸ್ಟ್ರಿಕ್ಟ್ ತ್ಯಾಮಗುಂಡ್ಲು

ಎ. ವಿ. ಸ್ಕೂಲ್ ಹೆಡ್ಮಾಸ್ಟರ್

ಕೆ. ರಾಮಸ್ವಾಮಯ್ಯಂಗಾರ್

ರವರಿಂದ ವಿರಚಿತವಾದುದು.

THE G. T. A. PRESS

MYSORE

1916

# ಜೀರ್ಣವಿಜಯನಗರಾದರ್ಶನಂ

## ಪೂರ್ವಭಾಗ.

ಅತಿತ್ವರ್‍ಯದಲ್ಲಿಯೇ ಅಭಿವೃದ್ಧಿಯನ್ನು ಪಡೆದು ಅಚಿರಕಾಲದಲ್ಲಿಯೇ ಕ್ಷೀಣದಶೆಯನ್ನು ಹೊಂದಿ ಅಸ್ತಮಿಸಿದ ರಾಜ್ಯಗಳಲ್ಲಿ, ವಿಜಯನಗರದ ರಾಜ್ಯವು ಒಂದಾಗಿದೆ. ಲವರಾರಮ ಮುನ್ನೂರು ಸಂವತ್ಸರಗಳು ಈ ರಾಜ್ಯವು ಅತಿವೈಭವದಿಂದ ಮೆರೆಯುತಿತ್ತು. ಪ್ರಸಿದ್ಧಯಾತ್ರಾಸ್ಥಾನವಾದ ಹಂಪೆಯು ಈ ವಿಜಯನಗರರಾಜ್ಯಕ್ಕೆ ಮುಖ್ಯಪಟ್ಟಣವಾಗಿದ್ದುದು. ಒಂದಾನೊಂದು ಕಾಲದಲ್ಲಿ ಈ ಪ್ರಪಂಚದ ನಗರಗಳಲ್ಲೆಲ್ಲಾ ಸಕಲ ವಿಧಗಳಲ್ಲಿಯೂ ಅಗ್ರಗಣ್ಯವಾಗಿ ಕಡುಪ್ರಖ್ಯಾತಿಯನ್ನು ತಳೆದಿದ್ದುದು ಈ ವಿಜಯನಗರವೇ. ಈ ನಗರರಾಜ್ಯವು ಪ್ರಕೃತದಲ್ಲಿ ಶಿಥಿಲರೂಪದಿಂದ ಆಯಾ ಚಿಹ್ನೆಗಳನ್ನು ತೋರಿಸುತ್ತಲಿದೆ. ಈ ಜೀರ್ಣವಿಜಯನಗರವನ್ನೂ, ಅದರಲ್ಲಿನ ವಿಷಯಗಳನ್ನೂ ವರ್ಣಿಸತೊಡಗುವುದಕ್ಕೆ ಮೊದಲು ವಿಜಯನಗರ ಸಾಮ್ರಾಜ್ಯವನ್ನು ಕುರಿತ ಇತಿಹಾಸವನ್ನು ಸಂಗ್ರಹವಾಗಿ ತಿಳಿಸುವುದು ಅಗತ್ಯ.

ಉತ್ತರಹಿಂದೂಸ್ಥಾನದಿಂದ ಮಹಾಪ್ರವಾಹವಾಗಿ ಹೊರಟು, ದಕ್ಷಿಣ ಹಿಂದೂದೇಶದಲ್ಲಿನ ಹಿಂದೂಮತವನ್ನೂ, ಹಿಂದೂರಾಜ್ಯವನ್ನೂ ರೂಂಪಳಿಸುವುದಕ್ಕೆ ಸಿದ್ಧವಾಗಿದ್ದ ಮಹಮ್ಮದೀಯರೆಂಬ ಮಹಾನದಿಯನ್ನು ಇನ್ನೂರಯ್ವತ್ತು ವರುಷಗಳವರೆಗೆ ಅಡಗಿಸಿ, ಹಿಂದೂಮತವನ್ನೂ, ಹಿಂದುಗಳ ಸ್ವಾತಂತ್ರ್ಯಗಳನ್ನೂ ರಕ್ಷಿಸಿದ ವಿಜಯನಗರಸಾಮ್ರಾಜ್ಯವನ್ನು ವರ್ಣಿಸಲಿಕ್ಕೆ ಸಹಸ್ರಜಿಹ್ವನಾದ ಆದಿಶೇಷನೂ ಶಕ್ತನಾಗನು. ಕ್ರಿ. ಶ. 1307 ರಲ್ಲಿ

ಮುಹಮ್ಮದೀಯರು ದೇವಗಿರಿರಾಜರನ್ನು ಸೆರೆಹಿಡಿದರು. 1310 ರಲ್ಲಿ ದ್ವಾರಸಮುದ್ರದಲ್ಲಿನ ಬಲ್ಲಾಳರಾಜರ ಹೆಸರಡಗಿಸಿದರು. 1323 ರಲ್ಲಿ ಓರಗಲ್ಲಿನ ಪ್ರತಾಪರುದ್ರರಾಜನನ್ನು ದೆಹಲಿಗೆ ಹಿಡಿದೊಯ್ದರು. ಹೀಗೆ ದಕ್ಷಿಣದೇಶದಲ್ಲಿನ ಹಿಂದೂರಾಜ್ಯಗಳೆಲ್ಲವೂ ತಳಹತ್ತಿದ್ದರಿಂದ ಹಿಂದೂಮತಕ್ಕೂ ದೇಶಸ್ವಾತಂತ್ರ್ಯಕ್ಕೂ ಆಧಾರಸ್ತಂಭವೇ ಇಲ್ಲದೆ ಹೋಯಿತು. ಹಿಂದೂದೇಶಕ್ಕೆ ಅಂತಹ ವಿಪನ್ನಾವಸ್ಥೆಯು ಪ್ರಾಪ್ತವಾದ ಸಂದರ್ಭದಲ್ಲಿ ಅದನ್ನುದ್ಧರಿಸುವುದಕ್ಕೆ ಅವತರಿಸಿದ ರಾಜ್ಯವೇ ಈ ವಿಜಯನಗರಸಾಮ್ರಾಜ್ಯವು. ಆಕಾಲದಲ್ಲಿ ಈ ಪ್ರಭುತ್ವವು ಹುಟ್ಟದೆ ಹೋಗಿದ್ದರೆ ಹದಿನಾಲ್ಕನೆಯ ಶತಾಬ್ದದಲ್ಲಿಯೇ ಅಂದರೆ ಈಗ್ಗೆ 500 ಸಂವತ್ಸರಗಳಿಗಿಂತ ಮುಂಚೆಯೇ ದಕ್ಷಿಣಹಿಂದೂದೇಶವೆಲ್ಲವೂ ಸಂಪೂರ್ಣವಾಗಿ ತುರುಷ್ಕರಪಾಲಾಗಿ ಹಿಂದೂಮತವೆಲ್ಲವೂ ತಳಹತ್ತಿ ನಾವೆಲ್ಲರೂ ಮುಹಮ್ಮದೀಯರಾಗಿ ಹೋಗುತ್ತಿದ್ದೆವೆಂದು ಹೇಳಿದರೂ ಅತಿಶಯೋಕ್ತಿಯೆನ್ನಿಸದೆಂದು ವಿಜ್ಞಾನಚಂದ್ರಿಕಾ ಗ್ರಂಥಮಾಲೆಯು ಮುಹಮ್ಮದೀಯಮಹಾಯುಗದಲ್ಲಿ ಕಂಠೋಕ್ತವಾಗಿ ಉಪಪಾದಿಸಿರುವರು. ಸತನೀಯ ಚರಿತ್ರಗ್ರಂಥಗಳು ಕೆಲವು ಈ ವಿಷಯವನ್ನು ಬಹುಸಂಕ್ಷೇಪವಾಗಿ ವಿವರಿಸಿರುವುದರಿಂದ ಇದರ ಸಮಗ್ರಚರಿತ್ರೆಯನ್ನು ನಾವು ಶೋಧಿಸಿತಿಳಿಯದೆ ಉದಾಸೀನದಿಂದ ಇರುವುದು ತುಂಬಾ ಶೋಚನೀಯವು.

ವಿಜಯನಗರವು ಬಳ್ಳಾರಿ ಡಿಸ್ಟ್ರಿಕ್ಟಿನ ಹೊಸಪೇಟೆಗೆ ಸಮೀಪದಲ್ಲಿ ತುಂಗಭದ್ರಾನದಿಯ ದಕ್ಷಿಣತೀರದಲ್ಲಿ ಕಟ್ಟಲ್ಪಟ್ಟಿತ್ತು. ಈ ನದಿಯ ಆಚೆಯ ದಡದಲ್ಲಿ ರಾಮನ ಕಾಲದಿಂದಲೂ, ಕಿಷ್ಕಿಂಧೆಯೆಂದು ಪ್ರಸಿದ್ಧಿಯನ್ನು ಹೊಂದಿ ಆನೆಗೊಂದಿ ಎಂದು ಹೆಸರುಗೊಂಡ ಪಟ್ಟಣವಿರುವುದು. 700 ವರುಷಗಳಿಂದಲೂ, ಆನೆಗೊಂದಿ ರಾಜ್ಯವನ್ನು ಹಿಂದುಗಳೇ ಆಳುತ್ತಿರುವರು.

ಸಂಗಮನೆಂಬ ರಾಜಕುಮಾರನ ಮಕ್ಕಳಾದ ಹರಿಹರ, ಬುಕ್ಕರಾಯರೆಂಬುವರು ಓರುಗಲ್ಲು ರಾಜರ ಹತ್ತಿರ ಕೋಶಾಧ್ಯಕ್ಷರಾಗಿದ್ದು 1323 ರಲ್ಲಿ ಮುಹಮ್ಮದೀಯರು ಓರಗಲ್ಲನ್ನು ಹಾಳುಮಾಡಿದಾಗ ಈ ಓರಗಲ್ಲನ್ನು ಬಿಟ್ಟು, ಆನೆಗೊಂದಿ ಸಂಸ್ಥಾನಾಧಿಪತಿಯ ಹತ್ತಿರಕ್ಕೆ ಬಂದರು. ಹರಿಹರನು ಆ ಸಂಸ್ಥಾನಕ್ಕೆ ಮಂತ್ರಿಯಾದನು. ಬುಕ್ಕರಾಯನು ಕೋಶಾಧ್ಯಕ್ಷನಾದನು. ದೆಹಲೀಶ್ವರನಾದ ಮುಹಮ್ಮದ್ ತೊಗಲಖನ ಸೋದರಳಿಯನು ತನ್ನ ಸೋದರಮಾವನ ಆಗ್ರಹಕ್ಕೆ ಪಾತ್ರನಾದುದರಿಂದ ಆತನಿಗೆ ಹೆದರಿ ದೆಹಲಿಯಿಂದ ಓಡಿಬಂದು ಆನೆಗೊಂದಿರಾಜನನ್ನು ಆಶ್ರಯಿಸಿದನು. ಇದರಿಂದ ಆ ದೆಹಲೀಶ್ವರನು ಅತ್ಯಂತ ಕೋಪಾವಿಷ್ಟನಾಗಿ 1334 ರಲ್ಲಿ ಆನೆಗೊಂದಿಯ ಮೇಲೆ ದಂಡೆತ್ತಿ ಬಂದನು. ಆನೆಗೊಂದಿಯ ಅರಸನು ತನಗೆ ಪರಾಭವವಾಗುವುದು ನಿಜವೆಂದು ತಿಳಿದು, ಅದರಿಂದುಂಟಾಗುವ ಅಪಮಾನಗಳನ್ನು ಸಹಿಸಲಾರದೆ ತನ್ನ ಭಾರ್ಯಾಪುತ್ರಾದಿಗಳನ್ನು ತನ್ನ ಕೈಗಳಿಂದಲೇ ಸಂಹರಿಸಿ, ಕೋಟೆಯಿಂದ ಹೊರಟು ಬಂದು ರಣಭೂಮಿಯಲ್ಲಿ ಘೋರವಾಗಿ ಕಾದಿ, ವೀರಶಯ್ಯವನೆಯ್ದಿದನು. ದೆಹಲೀಶ್ವರನು ಈ ರೀತಿಯಲ್ಲಿ ಸ್ವಾಧೀನಪಡಿಸಿಕೊಂಡ ರಾಜ್ಯದಲ್ಲಿ ತನ್ನ ಕಡೆಯ ಅಧಿಕಾರಿಯನ್ನೊಬ್ಬನನ್ನಿರಿಸಿ ದೆಹಲಿಗೆ ಹೋದನು. ಆನೆಗೊಂದಿಯ ಪ್ರಜೆಗಳೆಲ್ಲರೂ ಈ ಮುಹಮ್ಮದೀಯರ ಆಳಿಕೆಯನೊಲ್ಲದೆ ಆ ಅಧಿಕಾರಿಯ ಮೇಲೆ ತಿರುಗಿಬಿದ್ದರು. ದೆಹಲೀಶ್ವರನು ಇದನ್ನು ಕೇಳಿ ಆನೆಗೊಂದಿರಾಜ್ಯವನ್ನು ಪಾಲಿಸುವುದು ತನಗೆ ಅತಿ ದುರ್ಘಟವೆಂದು ತಿಳಿದು, ಆನೆಗೊಂದಿ ರಾಜವಂಶಸ್ಥರು ಒಬ್ಬರೂ ಇಲ್ಲದ್ದರಿಂದ ಅದುವರೆಗೆ ತಾನು ಹಿಡಿದುಕೊಂಡುಹೋಗಿ ಸೆರೆಯಲ್ಲಿಟ್ಟಿದ್ದ ಆರುಜನ ರಾಜಕುಮಾರರನ್ನು ಕರೆಯಿಸಿ, ಆನೆಗೊಂದಿ ರಾಜನಹತ್ತಿರ ಅದುವರೆಗೂ ಮಂತ್ರಿಪದವಿಯನ್ನು ಹೊಂದಿದ್ದ ಹರಿಹರರಾಯನಿಗೆ ರಾಜ್ಯವನ್ನಿತ್ತು ಆತನನ್ನು ತನ್ನ ಸಾಮಂತರಾಜನನ್ನಾಗಿ ಒಡಂಬಡಿಸಿಕೊಂಡು, ಅವನ ತಮ್ಮ

ನಾದ ಬುಕ್ಕರಾಯನಿಗೆ ಮಂತ್ರಿಪದವಿಯನ್ನಿತ್ತು, ಉಳಿದ ನಾಲ್ವರನ್ನೂ ದೊಡ್ಡ ಅಧಿಕಾರಿಗಳನ್ನಾಗಿ ನಿಯಮಿಸಿ ಕಳುಹಿಸಿಕೊಟ್ಟನು. ಹರಿಹರನು ರಾಜನಾಗಿಯೂ ಬುಕ್ಕರಾಯನು ಮಂತ್ರಿಯಾಗಿಯೂ ಇದ್ದರು. ಅವರು ಒಂದಾನೊಂದುದಿನ ಚತುರಂಗಬಲಸಮೇತರಾಗಿ ಮೃಗಯಾವಿನೋದಕ್ಕೋಸ್ಕರ ತುಂಗಭದ್ರಾನದಿಯ ದಕ್ಷಿಣತೀರಕ್ಕೆ ಹೊರಟು, ಅಲ್ಲಿನ ಕಾಡುಗಳಲ್ಲಿ ಬೇಟೆಯಾಡುತ್ತಿರುವಾಗ ಮೊಲಗಳೇ ತಮ್ಮ ಬೇಟೆನಾಯಿಗಳನ್ನು ಅಟ್ಟಿಕೊಂಡು ಬಂದುವಂತೆ! ಈ ವಾರ್ತೆಯನ್ನು ತಮ್ಮ ಕುಲಗುರುಗಳಾದ ವಿದ್ಯಾರಣ್ಯರಿಗೆ ವಿಜ್ಞಾಪಿಸಲು, ಅವರು ಅಲ್ಲಿ ಒಂದುಪಟ್ಟಣವನ್ನು ನಿರ್ಮಿಸಿದರೆ ಅದು ಜಯಪ್ರದವಾಗುವುದೆಂದು ಹೇಳಿ ಅಲ್ಲಿ ಒಂದು ನಗರವನ್ನು ನಿರ್ಮಾಣಗೊಳಿಸಿದರು. ಆ ಪ್ರದೇಶವು ನೈಸರ್ಗಿಕಪ್ರಾಕಾರಪ್ರಾಂಗಣವಾಗಿ ಸುತ್ತಿಕೊಂಡಿರುವ ಬೆಟ್ಟಗಳುಳ್ಳದಾಗಿ ಶಾತ್ರವದುರ್ಭೇದ್ಯವಾಗಿರುವುದು. ಕ್ರಿ. ಶ 1336 ಕ್ಕೆ ಸರಿಯಾದ ಶಾಲಿವಾಹನಶಕೆ 1258 ನೇ ಧಾತು ಸಂವತ್ಸರ ವೈಶಾಖ ಶುದ್ಧ ಪಂಚಮಿಯದಿನ ಈ ನಗರವು ನಿರ್ಮಿಸಲ್ಪಟ್ಟಿತು. ಹರಿಹರರಾಯನು 1339 ರಿಂದ 1350 ರ ವರೆಗೆ ಈ ವಿಜಯನಗರವನ್ನು ಪಾಲಿಸಿದನು. ಈತನು ತನ್ನ ತಮ್ಮನ ಸಹಾಯದಿಂದ ತನ್ನ ರಾಜ್ಯವನ್ನು ಬಹಳವಾಗಿ ವಿಸ್ತರಿಸಿದನು, ಈತನ ರಾಜ್ಯಭಾರದ ಕಾಲದಲ್ಲಿಯೇ ವಿಜಯನಗರ ಸಾಮ್ರಾಜ್ಯಕ್ಕೆ ಅಂಕುಶಪ್ರಾಯವಾದ ಭಾಮಿನೀರಾಜ್ಯವು ಸ್ಥಾಪಿಸಲ್ಪಟ್ಟಿತು. ಈ ಭಾಮಿನೀರಾಜರಿಗೂ ವಿಜಯನಗರದರಾಜರಿಗೂ ಎಡೆಬಿಡದ ಯುದ್ಧವು ಜರುಗುತ್ತಲೇ ಇತ್ತು

ಹರಿಹರರಾಯನಿಗೆ ಸಂತಾನವಿಲ್ಲದ್ದರಿಂದ ಆತನ ಮರಣಾನಂತರ ಅವನ ಮಂತ್ರಿಯೂ ಯುವರಾಜನೂ ಸಹೋದರನೂ ಆದ ಬುಕ್ಕರಾಯನೇ ದೊರೆತನಕ್ಕೆ ಬಂದನು. ಈತನ ಆಳ್ವಿಕೆಯಲ್ಲಿಯೇ ತುಂಗಭದ್ರಾನದಿಗೆ ದಕ್ಷಿಣದಲ್ಲಿರುವ ರಾಜ್ಯವೂ, ಓಢ್ರ, ಕಳಿಂಗ, ದೇಶಗಳೂ ಜಯಿಸಲ್ಪಟ್ಟು

ಇದಕ್ಕೆ ಪ್ರತ್ಯರ್ಥಿಯಾದ ಭಾಮಿನೀ ರಾಜ್ಯಕ್ಕಿಂತ ಮಹೋನ್ನತಸ್ಥಿತಿಗೆ ಬಂತು. ಈ ಬುಕ್ಕಭೂಪಾಲನು ವಿಜಯನಗರದಲ್ಲಿ ಅನೇಕ ದಿವ್ಯಮಂದಿರ ಗಳನ್ನೂ, ತಲಾಶಾಲೆಗಳನ್ನೂ, ವಿಪಣಿಮಾರ್ಗವನ್ನೂ, ದೇವಾಲಯಗಳನ್ನೂ ಕಟ್ಟಿಸಿ ರಮಣೀಯವಾಗಿಯೂ, ವಿಸ್ತಾರವಾಗಿಯೂ ಇರುವಂತೆ ಮಾಡಿ ದನು. ಈ ಮಹಾಮಹನ ಮಂತ್ರಿಶೇಖರನಾದ ಬುಚ್ಚಿರಾಜನು ತನ್ನೊಡೆ ಯನ ಗೌರವಾರ್ಥವಾಗಿ ಬುಕ್ಕಸಾಗರ, ಅನಂತಸಾಗರ ಎಂಬ ಎರಡು ದೊಡ್ಡ ಕೆರೆಗಳನ್ನು ಕಟ್ಟಿಸಿದನು. ಹರಿಹರರಾಯನ ತಮ್ಮನಾದ ಕಂಪ ಭೂಪಾಲನು ರಾಜನಾಗದೆ ಬುಕ್ಕರಾಯನೇ ಅರಸನಾದುದಕ್ಕೆ ಆತನಶೌರ್ಯವೇ ಕಾರಣವೆಂದು ತೋರುವುದು. ಅದಲ್ಲದೆ ಹರಿಹರರಾಯನ ಜೀವಿತ ದಲ್ಲಿಯೇ ಬುಕ್ಕಭೂಪತಿಗೆ ಯುವರಾಜ್ಯಪಟ್ಟಾಭಿಷೇಕವಾದಂತೆ ವಾಚ ಕರು ಮೊದಲೇ ಓದಿರುವರಷ್ಟೆ! ಬುಕ್ಕ ಭೂಪಾಲನ ತರುವಾಯ ಆತನ ಮಗನಾದ ಎರಡನೆಯ ಹರಿಹರರಾಯನೇ ರಾಜನಾದನು ಈತನು 1377 ರಲ್ಲಿ ಪಟ್ಟಾಭಿಷಿಕ್ತನಾದನು. ಮೈಸೂರು, ಧಾರ್ವಾಡ, ಕಾಂಚೀ, ಚೆಂಗಲ್ಪಟ್ಟು, ತಿರುಚನಾಪಲ್ಲಿ ಮೊದಲಾದ ದೇಶಗಳಲ್ಲಿ ಈತನರಾಜದ ಕಾಲ ದಲ್ಲಿನ ಶಾಸನಗಳು ಕಾಣಬರುತ್ತಿರುವುದರಿಂದ ಈತನ ರಾಜ್ಯವು ವಿಸ್ತಾರ ವಾಗಿ ಇದ್ದಂತೆಯೂ, ಪೂರ್ವದನರಪತಿಗಳು ಧರಿಸುತ್ತಿದ್ದ "ಮಂಡಲೇಶ್ವರ, ಒಡೆಯ" ಎಂಬ ಮಾಂಡಲಿಕರಾಜರಿಗೆ ತಕ್ಕ ಬಿರುದುಗಳನ್ನು ಬಿಟ್ಟು, "ಮಹಾರಾಜಾಧಿರಾಜ ರಾಜಪರಮೇಶ್ವರ" ಎಂಬ ಬಿರುದನ್ನು ವಹಿಸಿದ್ದು ದರಿಂದಲೂ, ಈ ಮಹನೀಯನಿಗೆ ಚಕ್ರವರ್ತಿತ್ವವು ಬಂದಂತೆಯೂ ವಿಶದ ವಾಗುವುದು. ಈತನು 1404 ರ ವರೆಗೆ ರಾಜ್ಯವನ್ನಾಳಿದನು.

ವಿಜಯನಗರನಿರ್ಮಾಣಕ್ಕೆ ಕಾರಣಭೂತರಾಗಿ ಹರಿಹರ, ಬುಕ್ಕ, ದ್ವಿತೀಯ ಹರಿಹರರಿಗೆ ಹಿತಬೋಧಕರಾಗಿ ವಿಜಯನಗರದ ಸಾಮ್ರಾಜ್ಯ ವನ್ನು ಪ್ರಾಭವವೈಭವಗಳುಳ್ಳಂತೆ ಮಾಡಿದ ಮಹನೀಯರಾದ ವಿದ್ಯಾರಣ್ಯರ

ಚರಿತ್ರೆಯನ್ನು ಸ್ವಲ್ಪಮಟ್ಟಿಗೆ ತಿಳಿಸುವುದು ಆವಶ್ಯಕವಾದುದರಿಂದ ಅದನ್ನಿಲ್ಲಿ ಸಂಗ್ರಹವಾಗಿ ತಿಳಿಸುವೆವು. ಸನ್ಯಾಸಾಶ್ರಮಸ್ವೀಕಾರಕ್ಕೆ ಮುಂಚೆ ಈ ಮಹನೀಯನಿಗೆ ಮಾಧವಾಚಾರ್ಯನೆಂದು ಹೆಸರು. ಈ ಮಾಧವಾಚಾರ್ಯರು ಕ್ರಿ. ಶ. 1321 ನೆಯ ಸಂವತ್ಸರದಲ್ಲಿ ಸನ್ಯಾಸಾಶ್ರಮವನ್ನು ಸ್ವೀಕರಿಸಿದರು. ಇದರಿಂದ ವಿಜಯನಗರನಿರ್ಮಾಣಕಾಲಕ್ಕೆ ಈ ಮಹಾನುಭಾವರು ಸನ್ಯಾಸಾಶ್ರಮವನ್ನು ಸ್ವೀಕರಿಸಿ ಹದಿನೈದು ವರುಷಗಳಾಗಿದ್ದವೆಂದು ತಿಳಿಯಬಹುದು.

ಇವರು ಶ್ರೀಭುವನೇಶ್ವರಿಯ ಅನುಗ್ರಹದಿಂದ ವಿಜಯನಗರದಮೇಲೆ ಮೂರುಗಳಿಗೆಯಹೊತ್ತು ಸುವರ್ಣವೃಷ್ಟಿಯನ್ನು ಸುರಿಸಿದರಂತೆ!! ಯತ್ಯಾಶ್ರಮ ಸ್ವೀಕಾರದಿಂದ ಐಹಿಕ ಸುಖಗಳಲ್ಲಿ ಸ್ವಲ್ಪವೂ ಇಚ್ಛೆಯಿಲ್ಲದವರಾಗಿದ್ದರೂ, ದೇಶವೆಲ್ಲವೂ ತುರುಷ್ಕರಿಂದ ಅರಾಜಕವಾದುದನ್ನೂ, ಶ್ರೌತಸ್ಮಾರ್ತಕರ್ಮಗಳೆಲ್ಲವೂ ನಶಿಸುತ್ತಿರುವುದನ್ನೂ, ನೋಡಿ, ಸ್ವದೇಶಸ್ವಮತಗಳನ್ನುದ್ಧರಿಸುವದಕ್ಕಾಗಿ ಕೇವಲ ನಿರಪೇಕ್ಷಾಬುದ್ಧಿಯಿಂದ ಈ ಮಹಾನುಭಾವರು ವಿಜಯನಗರವೆಂಬ ಹಿಂದೂರಾಜ್ಯವನ್ನು ನಿರ್ಮಿಸಿದುದನ್ನು ನೋಡಿದರೆ ಇವರು ಅದ್ವಿತೀಯ ಮಹಾಪುರುಷರೆಂದು ಹೇಳಬೇಕಾಗಿದೆ. ಈ ಮಾಧವಾಚಾರ್ಯರು ಅಪ್ರತಿಮ ವಿದ್ವಾಂಸರು. ಇವರ ತಮ್ಮನಾದ ಸಾಯಣನ ಸಹಾಯದಿಂದ ಇವರು ಧರ್ಮಶಾಸ್ತ್ರ, ವೇದಾಂತ, ಜ್ಯೋತಿಶ್ಶಾಸ್ತ್ರ, ವೈದ್ಯ, ವ್ಯಾಕರಣ ಮೊದಲಾದ ಹಲವು ವಿಷಯಗಳಮೇಲೆ ಉದ್ಗ್ರಂಥಗಳನ್ನು ಬರೆದು ಲೋಕೋಪಕಾರವನ್ನು ಮಾಡಿದರು. ಇವರು 1395 ನೆಯ ಇಸವಿಯಲ್ಲಿ ನೂರುವರುಷಗಳಿಗೆ ಮೀರಿದ ವಯಸ್ಸಿನಲ್ಲಿದ್ದಾಗ ಸಿದ್ಧಿಯನ್ನು ಹೊಂದಿದರು.

ಎರಡನೆಯ ಹರಿಹರರಾಯನ ತರುವಾಯ ಎರಡನೆಯ ಬುಕ್ಕರಾಯನು 1404 ನೆಯ ವರುಷದಲ್ಲಿ ಪಟ್ಟಾಭಿಷಿಕ್ತನಾದನು. ಈ ರಾಜನು

ತನ್ನ ತಂದೆತಾತಂದಿರಂತೆಯೇ ಈ ವಿಜಯನಗರದ ಸಾಮ್ರಾಜ್ಯವನ್ನು ವಿಸ್ತರಿಸಿದನು. ಈ ನರಪಾಲನು ನಗರದಲ್ಲಿದ್ದ ಅನೇಕ ತಗ್ಗುಪ್ರದೇಶಗಳನ್ನು ಮುಚ್ಚಿಸಿ, ಪ್ರಾಕಾರಗಳನ್ನು ಕಟ್ಟಿಸಿದನು. ಈ ಪ್ರಾಕಾರಗಳು ಈಗ ಶಿಥಿಲರೂಪವನ್ನು ಹೊಂದಿವೆ. ತುಂಗಭದ್ರಾನದಿಗೆ ಅಣೆಕಟ್ಟೆಯನ್ನು ಕಟ್ಟಿಸಿ, ಪಟ್ಟಣದೊಳಕ್ಕೆ ಕಾಲುವೆಗಳನ್ನು ತಿರುಗಿಸಿ, ನಗರದಲ್ಲಿ ಯಾವಾಗಲೂ ಜಲಸಮೃದ್ಧಿಯಾಗಿರುವಂತೆ ಮಾಡಿದುದೇ ಈ ಮಹಾಪಟ್ಟಣಕ್ಕೆ ಈ ರಾಜನು ಮಾಡಿದ ಮಹದುಪಕಾರವಾಗಿರುವುದು. ಹೀಗೆ ಪಟ್ಟಣದಲ್ಲಿ ಜಲಸಮೃದ್ಧಿಯಾಗಿರುವುದರಿಂದ ಎಲ್ಲಿನೋಡಿದರಲ್ಲಿ ಲತಾನಿಕುಂಜಗಳೂ, ಪುಷ್ಪೋದ್ಯಾನಗಳೂ, ದ್ರಾಕ್ಷಾ ತಾಂಬೂಲಾದಿವನಗಳೂ ಸಮೃದ್ಧಿಯಾಗಿ ವೃದ್ಧಿಯಾಗಿ, ಜನರಿಗೆ ಸಂಪದಭಿವೃದ್ಧಿಯಾದುದರಿಂದ ಪ್ರಭುವಿಗೆ ನೂತನವಾಗಿ ಹನ್ನೆರಡುಲಕ್ಷ ವರಹಗಳ ಆದಾಯ ಉಂಟಾಯಿತಂತೆ! ಈ ಕಾಲುವೆಯು ಈಗಲೂ ಅಭಿವೃದ್ಧಿಸ್ಥಿತಿಯಲ್ಲಿಯೇ ಇದೆ. ಈತನು 1422 ರ ವರೆಗೆ ರಾಜ್ಯವನ್ನಾಳಿದನು.

ಎರಡನೆಯ ಬುಕ್ಕರಾಯನ ತರುವಾಯ ಈತನ ಮೊಮ್ಮಗನಾದ ಎರಡನೆಯ ದೇವರಾಯ ಅಥವಾ ಇಮ್ಮಡಿ ದೇವರಾಯನೆಂಬುವನು ಪಟ್ಟಕ್ಕೆ ಬಂದನು. ಈತನ ಆಳ್ವಿಕೆ 1423 ರಿಂದ 1446 ರ ವರೆಗೆ ಇತ್ತು. ಈತನು ಹಲವು ದಿಗ್ವಿಜಯಗಳನ್ನು ಮಾಡಿ ಘನತೆಯನ್ನು ಪಡೆದನು. ಈ ನರಪಾಲನಿಗೆ ಸಿಂಹಳ, ಕ್ವಿಲನ್, ಮೊದಲಾದ ಅನೇಕ ದೇಶಾಧೀಶರು ಸಾಮಂತರಾಗಿ ಪೊಗುದಿಯನ್ನು ಕೊಡುತ್ತಿದ್ದರಂತೆ! 1443 ರಲ್ಲಿ ಈ ರಾಜಧಿರಾಜನ ಬಳಿಗೆ ಪ್ರಷ್ಯಾಚಕ್ರವರ್ತಿಯು ಒಬ್ಬರಾಯಭಾರಿಯನ್ನು ಕಳುಹಿಸಿದ್ದನಂತೆ! ಇದರಿಂದ ಈ ಮಹಸೀಯನ ಸಾಮ್ರಾಜ್ಯವೈಭವವು ಪ್ರಕಾಶಪಡುವುದು.

ಎರಡನೆಯ ದೇವರಾಯನಿಗೆ ಸಿಂಹಳದೇವಿಯಿಂದ ಮಲ್ಲಿಕಾರ್ಜುನನು ಹುಟ್ಟಿದನು. ರಾಜನತರುವಾಯ ಈ ಮಲ್ಲಿಕಾರ್ಜುನನೇ ಅರಸನಾದನು. ಈತನ ಆಳ್ವಿಕೆಯಲ್ಲಿ ರಾಜ್ಯದ ಕಲಹಗಳು ಯಾವುವೂ ಇರಲಿಲ್ಲ. ತಿಮ್ಮಣ್ಣ ಧಣಾಯಕನು ಈತನ ಮಂತ್ರಿಯಾಗಿದ್ದನು. ಈ ನರಪಾಲನು 1446 ರಿಂದ 1465 ರ ತನಕ ರಾಜವನ್ನಾಳಿದನು. ಈತನಿಗೊಬ್ಬ ಮಗನಿದ್ದನು.

ಮಲ್ಲಿಕಾರ್ಜುನನ ತರುವಾಯ ಇವನ ತಮ್ಮನಾದ ವಿರೂಪಾಕ್ಷರಾಯನು ಪಟ್ಟವನ್ನೇರಿದನು. ಮಲ್ಲಿಕಾರ್ಜುನನ ಮಗನಿದ್ದರೂ ಈತನ ತಮ್ಮನೇ ರಾಜ್ಯಾಧಿಪತಿಯಾದುದರಿಂದ ಆ ಮಗನ ಗತಿ ಏನಾಯಿತೆಂಬುವದು ವಿಶದವಾಗಿತಿಳಿಯದು. ವಿರೂಪಾಕ್ಷರಾಯನು 1465 ರಿಂದ 1478 ರ ತನಕ ಆಳಿದನು. ಈತನು ಸುರಾಪಾನಮತ್ತನಾಗಿ, ಪ್ರಜೆಗಳಿಗೆ ಅಗೋಚರನಾಗಿ, ಯಾವಾಗಲೂ ಅಂತಃಪುರದಲ್ಲಿಯೇ ಇರುತ್ತಿದ್ದನು. ಈತನು ಅತಿ ಮೂರ್ಖನಾಗಿ ದಂಡನಾಯಕರಲ್ಲಿ ವಿರೋಧವನ್ನು ಕಟ್ಟಿಕೊಂಡುದರಿಂದ ಈತನ ರಾಜ್ಯದಲ್ಲಿ ತುರುಷ್ಕರು ಪ್ರವೇಶಮಾಡಿ ಅನೇಕ ದುರ್ಗಗಳನ್ನು ಸ್ವಾಧೀನಪಡಿಸಿಕೊಂಡರು. ವಿಷಯಾಸಕ್ತನಾದ ಈ ನರಪಾಲನನ್ನು ಇವನ ಹಿರಿಯ ಮಗನಾದ ರಾಜಶೇಖರರಾಯನು ಕೊಲ್ಲಿಸಿದನು. 1478 ರಲ್ಲಿ ಇವನ ತಮ್ಮನಾದ ಎರಡನೆಯ ವಿರೂಪಾಕ್ಷರಾಯನು ಈತನನ್ನು ಅಂತ್ಯಗೊಳಿಸಿದನು.

ಆದರೂ ಇಂತಹ ದುಷ್ಟನ ಆಳ್ವಿಕೆಯು ಪ್ರಜೆಗಳಿಗೆ ಅಸಹ್ಯವಾಗಿತ್ತು. ಬುಕ್ಕರಾಯನ ವಂಶಸ್ಥರಿಗೆ ಬಂಧುವಾಗಿಯೂ ಸಾಳುವವಂಶಜಾತನಾಗಿಯೂ ಇರುವ ಸಾಳುವ ನರಸಿಂಹರಾಜನು ನಗರದಲ್ಲಿಯ ಪ್ರಜೆಗಳ ವಿಶ್ವಾಸಪಾತ್ರನಾಗಿದ್ದುದರಿಂದ ಆ ರಾಜನನ್ನು ಹೊರಡಿಸಿ, ತಾನೇ ರಾಜ್ಯಾರೂಢನಾಗಿ ವಿಜಯನಗರ ಸಾಮ್ರಾಜ್ಯಕ್ಕೆ ಪ್ರಭುವಾದನು ಇದಕ್ಕೆ ಮುಂಚೆ

ಪರರಾಯರಿಗೆ ಸ್ವಾಧೀನವಾಗಿ ಇವರಿಗೆ ಕೈತಪ್ಪಿಹೋಗಿದ್ದ ದೇಶಗಳನ್ನು ಪರಾಕ್ರಮಧುರಂಧರನಾದ ಈ ರಾಜನು ಮರಳಿ ಜಯಿಸಿ ಸ್ವಾಧೀನಮಾಡಿ ಕೊಂಡನು. ಈತನಿಗೆ ಅಷ್ಟರಲ್ಲಿಯೇ ಅವಸಾನಕಾಲವು ಸಮೀಪವಾದುದ ರಿಂದ ಉದಯಗಿರಿ, ರಾಯಿಚೂರು, ಕೊಂಡವೀಡು ಎಂಬ ಮೂರು ದುರ್ಗ ಗಳನ್ನು ಮಾತ್ರ ಹಿಡಿದುಕೊಳ್ಳಲು ಅವಕಾಶತಪ್ಪಿತು. ಈ ಮಹಾರಾಜನಿಗೆ ಇಬ್ಬರು ಮಕ್ಕಳಿದ್ದರು. ಈತನ ಅಂತ್ಯಕಾಲದಲ್ಲಿ ತನ್ನ ಸೇನಾಪತಿ ಯಾಗಿಯೂ, ಈಶ್ವರರಾಜನ ಪುತ್ರನಾಗಿಯೂ, ಭಗವದ್ಭಕ್ತಿಪರಾಯಣ ನಾಗಿಯೂ, ಅತ್ಯಂತ ಪರಾಕ್ರಮಶಾಲಿಯಾಗಿಯೂ ಇದ್ದ ಸಾಳವ ನರಸ ರಾಜನನ್ನು ಕರೆಯಿಸಿ, ತನ್ನ ಪುತ್ರದ್ವಯವನ್ನೂ, ವಿಜಯನಗರದ ಸಾಮ್ರಾ ಜ್ಯವನ್ನೂ ಆತನ ಸ್ವಾಧೀನಮಾಡಿ, ಕೀರ್ತಿಶೇಷನಾದನು. ಈ ಸಾಳುವ ನರಸಿಂಹರಾಯನು 1487 ರಿಂದ 1490 ರ ವರೆಗೆ ಆಳಿದನು.

ಈ ಸಾಳವ ನರಸಿಂಹರಾಜನು ಲೋಕಾಂತರವನ್ನೈದಿದ ತರು ವಾಯ ಇವನ ಜ್ಯೇಷ್ಠಪುತ್ರನಾದ ನರಸರಾಜನಿಗೆ ಪಟ್ಟವನ್ನು ಕಟ್ಟಿ ಈತನು ಅಪ್ರಾಪ್ತವಯಸ್ಕನಾದುದರಿಂದ ತುಳುವ ನರಸರಾಜನೇ ರಾಜ ಕಾರ್ಯಗಳನ್ನು ನೋಡಿಕೊಳ್ಳುತ್ತಿದ್ದನು. ಆ ಕಾಲದಲ್ಲಿಯೇ ಯಾರೋ ಒಬ್ಬ ದುಷ್ಟನು ಬಾಲರಾಜನನ್ನು ಕೊಂದುಹಾಕಿ ಆ ತುಳವ ನರಸರಾಜನ ಮೇಲೆ ಅಪವಾದನನ್ನು ಹೊರಿಸಿದನು. ಆ ನರಸರಾಜನು ಈ ಅಪವಾದ ವನ್ನು ತಪ್ಪಿಸಿಕೊಳ್ಳಲೋಸುಗ ಆ ಬಾಲರಾಜನ ತಮ್ಮನಿಗೇನೆ ಪಟ್ಟವನ್ನು ಕಟ್ಟಿದನು. ಈ ಬಾಲರಾಜನು ತಮ್ಮಣ್ಣನನ್ನು ಕೊಂದುಹಾಕಿದ ದುಷ್ಟ ನನ್ನೇ ಗೌರವಿಸಿದುದರಿಂದ ಇವನನ್ನು ಸೆರೆಯಲ್ಲಿಟ್ಟು ನರಸರಾಜನೇ ಅರಸ ನಾದನು. ಆ ಬಾಲರಾಜನ ವಿಷಯವೇನಾಯಿತೆಂಬುವುದು ಗೊತ್ತಾಗಲಿಲ್ಲ. ಈ ತುಳುವ ನರಸರಾಜನು ಆಂಧ್ರಕವಿಗಳನ್ನಾದರಿಸಿದನು. ಈತನ ಆಸ್ಥಾ ನದಲ್ಲಿದ್ದ ನಂದಿಮಲ್ಲಯ್ಯ ಘಂಟಸಿಂಗಯ್ಯ ವರಾಹ ಪುರಾಣ, ಪ್ರಬೋಧ

ಚಂದ್ರೋದಯ ಎಂಬೆರಡು ಗ್ರಂಥಗಳನ್ನು ತೆಲುಗಿಸಿದರು. ಈ ನರಸಭೂಪಾಲನಿಗೆ ತಿಪ್ಪಾಜಿ, ನಾಗಲಾಂಬಿಕೆ, ಓಬಾಂಬಿಕೆ, ಎಂಬ ಮೂವರು ಪತ್ನಿಯರಿದ್ದರು. ಇವರಲ್ಲಿ ತಿಪ್ಪಾಜಿಯಿಂದ ವೀರನರಸಿಂಹರಾಜನೂ, ನಾಗಲಾಂಬಿಕೆಯಿಂದ ಕೃಷ್ಣರಾಯನೂ, ಓಬಾಂಬಿಕೆಯಿಂದ ಅಚ್ಯುತರಾಜನೂ ಜನಿಸಿದರು. ಈ ನರಸರಾಜನ ತರುವಾಯ ಇವನ ಹಿರಿಯಮಗನಾದ ವೀರನರಸಿಂಹರಾಯನು ಕೆಲವುಕಾಲ ರಾಜ್ಯವನ್ನಾಳಿದನು.

ಈ ನರನಾಥನು ಪೂಜ್ಯವಾದ ರಾಜ್ಯವನ್ನಾಳುತ್ತಿದ್ದು ತನ್ನ ಅವಸಾನಕಾಲವು ಸಮೀಪವಾಗಲು, ತನ್ನ ತರುವಾಯ ಈ ರಾಜ್ಯವನ್ನು ಎಂಟು ವರುಷದವನಾದ ತನ್ನ ಮಗನಿಗೆ ಆಗಗೊಳಿಸದೆ ಸಹೋದರನಾದ ಕೃಷ್ಣರಾಯನು ಆಕ್ರಮಿಸಿಕೊಳ್ಳುವನೆಂದೆಣಿಸಿ, ಸಕಲವಿಧಗಳಲ್ಲಿಯೂ ತನಗೆ ಸಹಾಯಕನಾಗಿಯೂ, ಪರಮ ವಿಧೇಯನಾಗಿಯೂ, ಅನುಜಾತನಾಗಿಯೂ ಇದ್ದ ಕೃಷ್ಣರಾಯನ ಮೇಲೆ ಅಸೂಯೆಗೊಂಡು, ತನ್ನ ಮಂತ್ರಿಶ್ರೇಷ್ಠನಾದ ತಿಮ್ಮರಸನನ್ನು ಕರೆಯಿಸಿ, ಕೃಷ್ಣರಾಯನ ಎರಡು ಕಣ್ಣುಗಳನ್ನು ತಂದುಕೊಟ್ಟಹೊರತು ಈ ಪ್ರಾಣಗಳು ಶಾಂತವಾಗಿ ಹೋಗಲಾರವೆಂದು ಹೇಳಿ ದುಃಖಿಸಲು, ಆ ಮಂತ್ರಿ ಪುಂಗವನು ಪಟುಪರಾಕ್ರಮ ಧುರಂಧರನಾದ ಕೃಷ್ಣರಾಯನನ್ನು ಕೊಲ್ಲಿಸಿ ರಾಜ್ಯಲಕ್ಷ್ಮಿಯು ಪಡುವ ಸಂಕಟವನ್ನು ನೋಡಲೊಲ್ಲದೆ, ಕೃಷ್ಣರಾಯನನ್ನು ಗುಟ್ಟಾಗಿ ಮರಸಿಟ್ಟು, ಹುಲ್ಲೆಯ ಕಣ್ಣುಗಳೆರಡನ್ನು ತರಿಸಿ ಆ ರಾಜನಿಗೆ ತೋರಿಸಲು ಅವು ತನ್ನ ತಮ್ಮನ ನೇತ್ರಗಳೇ ಎಂದು ನಂಬಿ ರಾಜನು ಸ್ವರ್ಗಸ್ಥನಾದನು.

ಕೃಷ್ಣದೇವರಾಯನು (ಕೃಷ್ಣರಾಯ) ದಕ್ಷಿಣ ಹಿಂದೂದೇಶವನ್ನಾಳಿದ ರಾಜರುಗಳಲ್ಲೆಲ್ಲ ಶ್ರೇಷ್ಠನೆನ್ನಬಹುದು. ಆತನ ಜನ್ಮದಿನವು ಇಂತಹುದೆಂದು ಹೇಳಲು ಆಧಾರಗಳು ಯಾವುವೂ ದೊರೆತಿಲ್ಲವಾದರೂ ಕ್ರಿ. ಶ 1465 ಕ್ಕೆ ಸರಿಯಾದ ಶಾಲಿವಾಹನಶಕೆ 1387 ನೇ ವಿಕೃತಿಸಂವತ್ಸರ

ಪುಷ್ಯ ಬಹುಳ ೧೦ ಶುಕ್ರವಾರದದಿನ ಜನ್ಮಿಸಿದಂತೆ ರಾಯಬಹದ್ದೂರ್ ಕೆ. ವೀರೇಶಲಿಂಗಂ ಪಂಡಿತರು ನಿರ್ದಿಷ್ಟ ಮಾಡಿರುವರು.

ವೀರನರಸಿಂಹನು ಮೃತನಾದತರುವಾಯ ಕೃಷ್ಣರಾಯನು ತನ್ನ ತಮ್ಮನಾದ ಅಚ್ಯುತರಾಯನನ್ನೂ, ತನ್ನ ಅಣ್ಣನಮಗನಾದ ತಿಮ್ಮರಾಯನನ್ನೂ ಚಂದ್ರಗಿರಿ ದುರ್ಗಕ್ಕೆ ಕಳುಹಿ ತಾನು ಶಾಲಿವಾಹನಶಕೆ 1430 ನೇ ಶುಕ್ಲ ಸಂವತ್ಸರ ಮಾಘಶುದ್ಧ ೧೪ ಗೆ ಸರಿಯಾದ ಕ್ರಿ. ಶ 1506 ವರುಷದ ಫಿಬ್ರವರಿ 4 ನೇತಾರೀಕಿನಲ್ಲಿ ಪಟ್ಟಾಭಿಷಿಕ್ತನಾದನು.

ಕೃಷ್ಣರಾಯನು ಬಹಳ ಕುಳ್ಳ, ನಿಡುವೂ ಇಲ್ಲದ ಸಾಮಾನ್ಯವಾದ ಎತ್ತರ ಉಳ್ಳವನಾಗಿಯೂ, ಸುಂದರಾಕಾರನಾಗಿಯೂ ದೃಢಕಾಯನಾಗಿಯೂ,ತೇಜಃಪುಂಜವಾದ ಮುಖವುಳ್ಳವನಾಗಿಯೂ ಇದ್ದನು. ಅವನ ಮುಖದಮೇಲೆ ಸಿಡುಬಿನ ಕಲೆಗಳು ಕಾಣಬರುತ್ತಿದ್ದವು. ಸುಂದರವಾದ ದಿವನ ವದನಕಮಲವನ್ನು ನೋಡುವವರಿಗೆ ಆತನಲ್ಲಿ ಪೂಜ್ಯಬುದ್ಧಿ ಹುಟ್ಟುತ್ತಿತ್ತು. ನಾನಾವಿಧವಾದ ಗರಡಿ ಸಾಧನೆಗಳನ್ನೂ, ಧನುರ್ವಿದ್ಯೆಯನ್ನೂ, ಕತ್ತಿಗಳ ಸಾಧನೆಯನ್ನೂ, ಚೆನ್ನಾಗಿ ಕಲಿತಿದ್ದನು. ಈತನ ವಂಶದವರೂ ಈತನೂ ವೈಷ್ಣವರು. ಇವನು ವಿಷ್ಣುಭಕ್ತನಾಗಿದ್ದರೂ ಶಿವದ್ವೇಷಿಯಲ್ಲ. ಇವನು ದಯಾಮಯನಾಗಿದ್ದರೂ ಒಂದೊಂದುವೇಳೆ ಇವನಿಗೆ ಅಧಿಕವಾಗಿ ಕೋಪಬರುತ್ತಿತ್ತಂತೆ !

ಈತನು ಆಂಧ್ರದೇಶದವನೆಂದು ಕೆಲವರೂ, ಕರ್ಣಾಟಕನೆಂದು ಕೆಲವರೂ ಹೇಳುತ್ತಿರುವರು. ಇವನು ಯಾವದೇಶೀಯನೇ ಆಗಿರಲಿ, ಇವನ ಕಾಲದಲ್ಲಿ ಆಂಧ್ರಭಾಷೆಯು ಮಹೋನ್ನತಸ್ಥಿತಿಗೆ ಬಂತು. ಇವನು ಆ ಭಾಷೆಯನ್ನು ಬಹಳವಾಗಿ ಆದರಿಸಿದನು. ಆದುದರಿಂದ ಈತನನ್ನು ಆಂಧ್ರನೆಂದು ಹೇಳುವುದು ನ್ಯಾಯವಾಗಿದೆ. ಈತನ ತಂದೆ ತಾತಂದಿರು ದೊಡ್ಡ ವಿದ್ವಾಂಸರಾಗಿದ್ದು ಅನೇಕ ಕಾವ್ಯಗಳ ಕೃತಿಪತಿಗಳಾಗಿದ್ದರು. ಈತನು

ಸತ್ಕಾವ್ಯಗಳನ್ನು ಬಹಳವಾಗಿ ಬರೆಯಿಸಿದನೆಂಬುದನ್ನು ವಾಚಕರು ಮುಂದೆ ಗ್ರಹಿಸಬಲ್ಲರು.

ಕೃಷ್ಣರಾಯನು ಅಡಿಗಡಿಗೆ ತೊಡಕಿಲ್ಲದ ಜಯಗಳನ್ನೇ ಪಡೆಯುತ್ತಿದ್ದನು. ಆತನ ದಿಗ್ವಿಜಯಗಳನ್ನು ವಿವರಿಸಲಿಕ್ಕೆ ಮುಂಚೆ ಆ ದಿಗ್ವಿಜಯಗಳ ಕಾರಕನಾಗಿಯೂ, ರಾಯರಿಗೆ ಬಲಭುಜವಾಗಿಯೂ, ಪಿತೃತುಲ್ಯನಾಗಿಯೂ, ಈತನ ಅಮಾತ್ಯಶೇಖರನಾಗಿಯೂ ಇದ್ದ ತಿಮ್ಮರಸನ ವೃತ್ತಾಂತವನ್ನು ತಿಳಿದುಕೊಳ್ಳುವುದು ಅಗತ್ಯವಾದುದರಿಂದ ಅದನ್ನು ಸಂಗ್ರಹವಾಗಿ ತಿಳಿಸುವೆವು.

ಈತನು ಆರವೇಲು ಕುಲದವನು. ಮನೆತನದ ಹೆಸರು ಸಾಳುವರು, ತಂದೆ ರಾಚಯ್ಯ. ಈ ತಿಮ್ಮರಸನ ಕೀರ್ತಿಯು ಆಂಧ್ರದೇಶದ ಎಲ್ಲಾ ಕಡೆಗಳಲ್ಲಿಯೂ ಈಗಲೂ ಹರಡಿಕೊಂಡಿದೆ. ಈತನ ಬುದ್ಧಿವೈಭವಗಳನ್ನು ವಿಶದೀಕರಿಸುವ ಅನೇಕ ಕಥೆಗಳು ಆಂಧ್ರದೇಶದಲ್ಲಿ ಪ್ರಸಿದ್ಧಿಗೊಂಡಿವೆ. ಅವುಗಳಲ್ಲಿ ಒಂದು ಕಥೆಯನ್ನು ದೇಶವಾತೆಯಿಂದ ಉದ್ಧರಿಸಿ ಇಲ್ಲಿ ತಿಳಿಸುವೆವು.

ಒಬ್ಬ ಬ್ರಾಹ್ಮಣನು ಕಾಶೀಪಟ್ಟಣದಲ್ಲಿ ಬಹುಕಾಲದ ತನಕ ವಿದ್ಯಾಭ್ಯಾಸಮಾಡಿ ಜಗದೇಕಪಂಡಿತನೆಂದು ಹೆಸರುಪಡೆದನು. ಆ ಪಂಡಿತನು ನಮ್ಮ ಆರ್ಯಾವರ್ತದ ದೇಶಗಳಲ್ಲೆಲ್ಲಾ ಸಂಚರಿಸಿ, ಎಲ್ಲೆಲ್ಲಿ ಪಂಡಿತಸಭೆಗಳು ಇರುವುವೋ ಅಲ್ಲೆಲ್ಲಾ ಹೋಗಿ ಸಮಸ್ತ ಶಾಸ್ತ್ರಗಳಲ್ಲಿಯೂ ಪ್ರಸಂಗಗಳನ್ನು ಮಾಡಿ, ಜಯವನ್ನು ಹೊಂದಿ ಸನ್ಮಾನ ಪತ್ರಗಳನ್ನೂ, ಜಯದ ಬಿರುದುಗಳನ್ನೂ ಪಡೆಯುತ್ತಾ ಬಂದನು. ಈತನಿಗೆ ಅಪಜಯವೆಂಬುವುದು ಯಾವುದೊ ತಿಳಿಯದೆಂದು ಹೇಳಬಹುದು. ಈತನು ಎಂದಾದರೂ ಒಂದು ದಿನ ತನ್ನ ಸಭೆಗೆ ಬಂದಾನೇ ಎಂದು ಕೃಷ್ಣರಾಯನು ಅಂದುಕೊಳ್ಳುತ್ತಿದ್ದನು. ಹೀಗಿರುವಲ್ಲಿ ಒಂದು ದಿನ ಆ ಜಗದೇಕಪಂಡಿತನು ರಾಯನ

ಸಂದರ್ಶನವನ್ನು ಮಾಡಿಕೊಂಡನು. ಕೃಷ್ಣರಾಯನು ತನ್ನ ಪಂಡಿತಸಭೆಯು ಸೋತುಹೋಯಿತೆಂಬ ಶಾಶ್ವತವಾದ ಅಪಕೀರ್ತಿಯನ್ನು ಹೊಂದಲು ಇಷ್ಟ ಪಡದೆ ಪ್ರಸಂಗಮಾಡದೆಯೇ ಆ ದೊಡ್ಡಪಂಡಿತನನ್ನು ಸನ್ಮಾನಿಸಿ ಕಳುಹ ಬೇಕೆಂದು ಯೋಚಿಸಿ, ಅನೇಕ ಬಹುಮಾನಗಳನ್ನು ತರಿಸಿ ಆತನಿಗೆ ಕೊಟ್ಟು ಇವುಗಳನ್ನು ಸ್ವೀಕರಿಸೆಂದನು. ಅದಕ್ಕಾಪಂಡಿತನು ಒಡಂಬಡದೆ, "ಮಹಾ ರಾಜಾ! ತಮ್ಮ ದಯೆಯಿಂದ ಇಂತಹ ಬಹುಮಾನಗಳು ಅನೇಕವಾಗಿ ಬಂದಿವೆ. ನಾನೀ ಬಹುಮಾನಗಳಿಗಾಗಿ ಬಂದವನಲ್ಲ. ವಾದಭಿಕ್ಷವನ್ನು ಬಯಸಿ ಬಂದಿರುವೆನು" ಎಂದನು.

ಅದಕ್ಕೆ ರಾಯನು ನಿಮ್ಮ ಇಷ್ಟದಂತೆಯೇ ಆಗಬಹುದೆಂದು ಹೇಳಿ, ತನ್ನಸಭೆಯ ಪಂಡಿತರನ್ನೆಲ್ಲಾ ಕರೆಯಿಸಿ ಶಾಸ್ತ್ರವಾದಮಾಡಲು ಏರ್ಪಡಿಸಿ ದನು. ರಾಯನ ಆಸ್ಥಾನಪಂಡಿತರು ಹಿಂದೆಗೆಯದೆ ಹದಿನೈದುದಿನಗಳ ತನಕ ಆ ಜಗದೇಕಪಂಡಿತನ ಸಂಗಡ ಶಾಸ್ತ್ರವಾದಮಾಡಿ ಹೇಗೋ ಆ ಪಂಡಿತನನ್ನು ಸೋಲಿಸಿ ರಾಯರ ಎದುರಿಗೆ ಆತನ ಬಿರುದುಗಳನ್ನೆಲ್ಲಾ ತೆಗೆದು ಇರಿಸಿ, ನಾನು ಜಯಿಸಲ್ಪಟ್ಟೆನೆಂದು ಅನ್ನಿಸಿದರು. ರಾಯನು ಉದಾರಗುಣ ಸಂಪ ನ್ನನೂ, ನವರಸರಸಿಕನೂ ಆದುದರಿಂದ ಮೊದಲು ತರಿಸಿಟ್ಟಿದ್ದ ಬಹುಮಾನ ಗಳನ್ನೆಲ್ಲಾ ಆ ಪಂಡಿತನಿಗೆ ಕೊಟ್ಟು ಸನ್ಮಾನಮಾಡಿ ಕಳುಹಿಸಿದನು. ತರು ವಾಯ ಆ ಕೃಷ್ಣರಾಯನು ತನ್ನ ಆಸ್ಥಾನಪಂಡಿತರು ಇಂತಹ ಮಹಾಪಂಡಿತ ನನ್ನು ಜೈಸಿದರಲ್ಲಾ ಎಂಬ ಸಂತೋಷದಿಂದ "ನಿಮಗೆ ಬೇಕಾದುದನ್ನು ಕೇಳಿಕೊಳ್ಳಿರಿ ಕೊಡುವೆನು" ಎಂದು ತನ್ನ ಪಂಡಿತರಿಗೆ ಹೇಳಿದನು. ಈ ಪಂಡಿತರಲ್ಲಿ ಅನೇಕರಿಗೆ ತಮ್ಮ ವಿದ್ಯಾಪಾಂಡಿತ್ಯದ ಮದದಿಂದ ರಾಯರಲ್ಲಿ ಮಂತ್ರಿತ್ವವನ್ನು ಪಡೆಯಬೇಕೆಂಬ ಆಸೆಯು ಬಹುಕಾಲದಿಂದ ಬಲವಾಗಿ ನೆಲೆಗೊಂಡಿತ್ತು. ಇದಲ್ಲದೆ ಈ ಪಂಡಿತರಿಗೆ ರಾಯರ ಮಂತ್ರಿಯಾದ ತಿಮ್ಮ ರಸನ ಮೇಲೆ ಸ್ವಲ್ಪ ಅಸೂಯೆಯೂ ಮನಸ್ಸಿನಲ್ಲಿ ಬಾಧಿಸುತ್ತಿತ್ತು.

ಇಂತಹ ಪಂಡಿತರಲ್ಲಿ ನಾಲ್ಕಾರುಜನ ಸೇರಿ "ಮಹಾಪ್ರಭುವೇ? ತಮ್ಮ ದಿವಾನರು ತಿಮ್ಮರಸರು ಧರ್ಮಶಾಸ್ತ್ರವಿರುದ್ಧವಾಗಿ ರಾಜ್ಯಾಂಗಗಳನ್ನು ನೆರೆವೇರಿಸುತ್ತಿರುವರು. 'ರಾಜಾರಾಷ್ಟ್ರಕೃತಂ ಪಾಪಂ' ಎಂದರೆ ರಾಷ್ಟ್ರದಲ್ಲಿ ಬೆಳೆದಪಾಪವು ರಾಯನನ್ನು ಹೊಂದುವುದೆಂದು ಧರ್ಮಶಾಸ್ತ್ರಗಳು ಮೊರೆಯಿಡುತ್ತಿರುವುವು. ಆದುದರಿಂದ ಮಹಾಸ್ವಾಮಿಯವರು ನಮಗೆ ಮಂತ್ರಿಪದವಿಯನ್ನು ದಯಪಾಲಿಸಿದರೆ ಇದುವರೆಗೆ ಬೆಳೆದಿರುವ ಪಾಪಗಳನ್ನು ಪುಣ್ಯಕರ್ಮಗಳಿಂದ ಪರಿಹರಿಸಿ ನಮ್ಮ ರಾಷ್ಟ್ರದಲ್ಲಿ ಪಾಪಮಹಾದೇವತೆಯು ಅಡಿಯಿಡದಂತೆ ಧರ್ಮಶಾಸ್ತ್ರ ಸಮ್ಮತದಿಂದ ರಾಜ್ಯಪರಿಪಾಲನೆ ಮಾಡುತ್ತಾ ಬರುವೆವು." ಎಂದು ರಾಯರೊಂದಿಗೆ ಬಿನ್ನವಿಸಿದರು.

ಆಗ ರಾಯರು ತನ್ನಮನಸ್ಸಿನಲ್ಲಿ "ಓಹೊ, ಮೋಸವಾಯಿತಲ್ಲಾ! ನಾನು ಕೋರಿಕೊಳ್ಳರೆಂದು ಇವರಿಗೇಕೆ ಹೇಳಿದೆನು?" ಎಂದು ಸ್ವಲ್ಪ ಹೊತ್ತು ಚಿಂತಿಸಿ ಯಾವ ರೀತಿಯಿಂದಲಾದರೂ ಇವರಭಿಪ್ರಾಯವನ್ನು ಬಿಡಿಸಿ ನಾನು ತಪ್ಪಿಸಿಕೊಳ್ಳುವೆನೆಂದು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು "ಪಂಡಿತೋತ್ತಮರಿರಾ! ನಾನು ಪದವಿಯಿಂದ ತಿಮ್ಮರಸನನ್ನು ತಪ್ಪಿಸಬೇಕಾದ ಸಂದರ್ಭದಲ್ಲಿ ಹೊಸದಾಗಿ ಉದ್ಯೋಗದಲ್ಲಿ ಪ್ರವೇಶಿಸಲಿಷ್ಟವುಳ್ಳವರಿಗೆ ಒಂದು ಪ್ರಶ್ನೆಯನ್ನು ಕೊಡುವೆನು. ಅದಕ್ಕೆ ಸರಿಯಾದ ಉತ್ತರವನ್ನಿತ್ತರೆ ಅಂತವರಿಗೆ ನನ್ನ ಮಂತ್ರಿಪದವಿಯನ್ನು ಕೊಡುವೆನು. ಇಲ್ಲದಿದ್ದರೆ ಅಧಿಕಾರವನ್ನು ಕೊಡಲಾಗುವುದಿಲ್ಲ" ಎಂದು ಹೇಳಿದನು ನಮಗೆ ಆ ಪ್ರಶ್ನೆಯನ್ನು ಕೊಟ್ಟರೆ ನಾವು ಅದಕ್ಕೆ ಸರಿಯಾದ ಉತ್ತರವನ್ನು ಕೊಡಬಲ್ಲೆವೆಂದು ಪಂಡಿತರು ಕೇಳಿಕೊಂಡರು. ಎಷ್ಟಾದರೂ ರಾಯನು ಕ್ಷತ್ರಿಯೋತ್ತಮನೂ, ಸೂಕ್ಷ್ಮಬುದ್ಧಿಯುಳ್ಳವನೂ, ಧೀರನೂ ಆದುದರಿಂದ ಸ್ವಲ್ಪಹೊತ್ತು ಆಲೋಚಿಸಿ, ಪಂಡಿತರನ್ನು ಕುರಿತು "ಮಹನೀಯರುಗಳಿರಾ! (1) ಬದುಕಿದರೆ ಬದುಕುವವನು, (2) ಸತ್ತರೆ ಬದುಕುವವನು,

(3) ಅಧಮನು, (4) ಅಧಮಾಧಮನು, (5) ನೀಚನು ಇವರಯ್ವರನ್ನು ನೀವು ಕರೆದುಕೊಂಡು ಬಂದರೆ ತಪ್ಪದೆ ನನ್ನ ಮಂತ್ರಿತ್ವವನ್ನು ನಿಮಗೆ ನಿಮಗೆ ಕೊಡುವೆನು." ಎಂದು ಹೇಳಿದನು. ಆಗಲಾಪಂಡಿತರು, ಮಹಾಪ್ರಭುವೇ ಬುದ್ಧಿಯವರು ಕುಶಾಗ್ರಬುದ್ಧಿಯುಳ್ಳವರು. ತಾವು ಹಾಕಿರುವ ಪ್ರಶ್ನೆಗಳಿಗೆ ಉತ್ತರಗಳನ್ನು ಹೇಳುವುದು ಸುಲಭವಾದ ಕೆಲಸವಲ್ಲ. ಪ್ರಶ್ನೆಯು ಸ್ವಲ್ಪ ಕಠಿಣವಾಗಿಯೇ ಇರುವಂತೆ ಕಾಣುತ್ತಿದೆ. ಇದಕ್ಕೆ ತಕ್ಕ ಉತ್ತವನ್ನು ಹೇಳಬೇಕಾದರೆ ಕನಿಷ್ಠಪಕ್ಷ ಆರುತಿಂಗಳ ಅವಧಿ ಬೇಕಾಗುವುದೆಂದು ಅರಿಕೆಮಾಡಿಕೊಂಡರು. ರಾಯರು ಆ ಮಾತನ್ನು ಕೇಳಿ ಈ ಪಂಡಿತರು " ನಿತ್ಯವೂ ಏನು ಮಹಾರಾಯ ; ನಮ್ಮ ಮಂತ್ರಿತ್ವದ ವಿಷಯವೇನು ಮಾಡಿದೆ ?" ಎಂದು ಕೇಳುತ್ತಾ ಪೀಡಿಸದಂತೆ ಆರುತಿಂಗಳು ಕಳೆದುಹೋಗುವುದಲ್ಲವೆ ? ಆ ತರುವಾಯ ನೋಡಿಕೊಳ್ಳೋಣವೆಂದೆಣಿಸಿ ಹಾಗೆಯೇ ಆಗಬಹುದೆಂದು ಅವರಿಗೆ ಅಪ್ಪಣೆಕೊಟ್ಟು ಕಳುಹಿದನು.

ತರುವಾಯ ಪಂಡಿತರು ತಮ್ಮ ಮನೆಗೆ ಹೋಗಿ ಎರಡು ಮೂರು ದಿನಗಳು ಕಳೆದಮೇಲೆ ರಾಯರು ಕೊಟ್ಟ ಪ್ರಶ್ನೆಗಳನ್ನು ಬಿಡಿಸುವ ಆಲೋಚನೆಗಾಗಿ ಒಂದು ಮಹಾಸಭೆಯನ್ನು ಸಮಾವೇಶ ಮಾಡಿಸಿದರು. ಆ ಸಭೆಯಲ್ಲಿ ಮೊದಲನೆಯ ಪ್ರಶ್ನೆ " ಬದುಕಿದರೆ ಬದುಕತಕ್ಕವನು ಯಾವನು ?" ಎಂದು ಚರ್ಚೆ ಜರುಗಲಾರಂಭಿಸಿತು. ಅದಕ್ಕೆ ಹದಿನೆಂಟು ವರಷದ ಹರೆಯದ ಹುಡುಗನನ್ನು ಏರ್ಪಡಿಸಿ "ಇವನಿಗೇನು ಅಳಿಗಾಲಬಂದೀತೆ? ಬದುಕಿದರೆ ಬದುಕದೆ ಏನು ? ಇನ್ನೂ ಆರು ಮಾಸಗಳ ಅವಧಿ ಇರುವುದಲ್ಲವೇ ? ಅಷ್ಟರೊಳಗೆ ಅವನನ್ನು ಚೆನ್ನಾಗಿ ಪೋಷಿಸಿ ಇವನಿಂದ ದಂಡೆಗಳುತೆಗಿಸಿ ಒಳ್ಳೇಕಸರತ್ತು ಮಾಡಿಸಿದರೆ ಆರು ತಿಂಗಳವೇಳೆಗೆ ಕೋಣನಂತೆ ಬಲಿತು ರಾಜರಮುಂದೆ ಇಡಲಿಕ್ಕೆ ತಕ್ಕವನಾಗುವನು." ಎಂದು ನಿಶ್ಚಯಿಸಿದರು. ಇನ್ನು ಎರಡನೆಯ ಪ್ರಶ್ನೆ.

"ಸತ್ತರೆ ಬದುಕುವನು." ಆಹಾ! ಇದೆಲ್ಲಿಯಾದರೂ ಉಂಟೆ? ಸತ್ತರೆ ಅವನು ಬದುಕುವುದು ಹೇಗೆ. ಏನು ಪಂಡಿತರೇ? ಇದು ಬಹು ವಿಚಿತ್ರವಾಗಿದೆ. ಗ್ರಂಥಗಳನ್ನೆಲ್ಲಾ ಬಮ್ಮೆ ತಿರುವಿಹಾಕಿದಹೊರತು ಈ ಸಂದೇಹವು ತೀರದು." ಎಂದು ಪಂಡಿತರು ನಿಶ್ಚಯಿಸಿ, ಆ ವಿಷಯವನ್ನು ಹಾಗೆಯೇ ಉಳಿಸಿದರು. ಮೂರನೆಯ ಪ್ರಶ್ನೆ ಅಧಮನನ್ನು ಕುರಿತು---ಲೌಕೀಕ ವಿರುದ್ಧವಾಗಿ ತೋರುವ ಹೀನವೃತ್ತಿಗಳಲ್ಲಿ "ಸೀತಾರಾಮಾಭ್ಯಾನಮಃ" ಎಂದು ಮನೆಮನೆಗೂ ಹೋಗಿ ನಿತ್ಯಯಾತ್ರೆಮಾಡುವ ಉಂಛವೃತ್ತಿಯ ಬ್ರಾಹ್ಮಣನೊಬ್ಬನನ್ನು ನಿಯಮಿಸಿದರು. ಏತಕ್ಕೆಂದರೆ ಈತನಿಗಿಂತ ಕಡಿಮೆ ಅಂತಸ್ತಿನ ಅಧಮಾಧಮನೊಬ್ಬನಿರುವನು ಆದುದರಿಂದ ಅಧಮನಲ್ಲಿ ಅಕ್ಕಿ ಸಂಪಾದಿಸಿ ಅಟ್ಟುಣ್ಣುವ ಪ್ರಜ್ಞೆಯೊಂದು ಅತಿಶಯೋಕ್ತಿಯಾಗಿ ಪಂಡಿತರು ಭಾವಿಸಿದರು. ನಾಲ್ಕನೆಯವನು ಅಧಮಾಧಮನು—ಇವರು ಊರಲ್ಲಿರುವ ಹತ್ತುಮಂದಿ ಗೃಹಸ್ಥರ ಮನೆಗಳಲ್ಲಿ ಊಟದವೇಳೆಗೆ ಸರಿಯಾಗಿ ತನ್ನ ಭೋಜನನಿಮಿತ್ತವಾಗಿ ಮನೆಯಲ್ಲಿ ಬಂದು ಹಚ್ಚಿದೆಲೆಯನ್ನು ಅಣಿಮಾಡಿಟ್ಟು, ಜೋಳಿಗೆ ಕಟ್ಟಿಕೊಂಡುಹೋಗಿ "ಭವತಿಭಿಕ್ಷಾಂದೇಹಿ ಎಂದು ಬೀದಿಬೀದಿಯಲ್ಲಿ ಸಾರುತ್ತಾ ಮಾಧವಾಕರವೆತ್ತುವನೊಬ್ಬನನ್ನು ಏರ್ಪಡಿಸಿದರು. ಐದನೆಯವನು ನೀಚನು. ಬೀದಿಗಳಲ್ಲಿ ಬಿಸಾಡಿರುವ ಎಂಜಲೆಲೆಗಳಲ್ಲಿನ ಉಚ್ಛಿಷ್ಟಾನ್ನವನ್ನು ತಿನ್ನುವನೊಬ್ಬನನ್ನು ಏರ್ಪಡಿಸಿದರು.

ಪಂಡಿತರು ಆಗ್ಗೆ ಬಿಟ್ಟಿದ್ದ ಎರಡನೆಯ ಪ್ರಶ್ನೆ ಎಂದರೆ ಸತ್ತರೆ ಬದುಕುವನನ್ನು ಕುರಿತು ತಮ್ಮ ಮನೆಗಳಲ್ಲಿ ಗೆದ್ದಲು ತಿಂದುಹೋಗಿ ಉಳಿದಿರುವ ಪುರಾತನದ ತಾಳೇ ಓಲೆಯ ಪುಸ್ತಕಗಳನ್ನು ಅಹೋರಾತ್ರಿಗಳಲ್ಲಿಯೂ ಬೇಸರವಿಲ್ಲದೆ ಹುಡುಕಿನೋಡಿದರೂ ಎಲ್ಲಿಯೂ ಆ ವಿಚಾರವೆ ಬರೆದಿದಲಿಲ್ಲ. ಕುಯುಕ್ತಿಯು ಗ್ರಂಥಗಳಲ್ಲಿರುವುದೆ? ಎಂದು ಆ ಪಂಡಿತರು ಯೋಚಿಸಲಾರದೆಹೋದರು ಮತ್ತು ಸತ್ತರೆ ಬದುಕುವವನನ್ನು ತಮ್ಮರಸನೇ ಆಗಲಿ

ಅವರಪ್ಪನೇ ಆಗಲಿ ಯಾರೂ ತರಲಾರರೆಂತಲೂ ಅಂತವನು ಈ ಪ್ರಪಂಚ ದಲ್ಲಿ ಇರುವುದು ಅಸಾಧ್ಯವೆಂತಲೂ ಅವರು ನಿಶ್ಚಯಿಸಿದರು. ಹೀಗೆ ಆರು ತಿಂಗಳು ಕಳೆದುವು, ಪಂಡಿತರು ತಮಗೆ ರಾಯರು ಕೊಟ್ಟ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳೊಂದಿಗೆ ದರ್ಬಾರಿಗೆ ಬರಬೇಕೆಂದು ರಾಜಾಜ್ಞೆಯಾ ಯಿತು. ರಾಯರ ಪ್ರಶ್ನೆಗಳಿಗೆ ಪಂಡಿತರು ಕೊಡುವ ಉತ್ತರಗಳನ್ನು ಕೇಳುವುದಕ್ಕೆ ಪುರಜನರು ಹಲವರು ಗುಂಪುಗುಂಪಾಗಿ ರಾಜಸಭೆಗೆ ಬಂದು ಕಿಕ್ಕಿರಿದು ನಿಂತಿದ್ದರು. ಒಡ್ಡೋಲಗದಲ್ಲಿದ್ದ ರಾಯರು ಪಂಡಿತರ ಕುಶಲ ವನ್ನು ಕೇಳಿ ತರುವಾಯ ತಾವು ಕೊಟ್ಟಿದ್ದ ಪ್ರಶ್ನೆಗಳ ವಿಷಯವೇನಾ ಗಿದೆ ? ಎಂದು ಕೇಳಿದರು,

ಆಗಲಾಪಂಡಿತರು "ಬದುಕಿದರೆ ಬದುಕತಕ್ಕವನು" ಇವನು ಎಂದು ತಾವು ಕರೆದುತಂದಿದ್ದವನನ್ನು ರಾಯರ ಮುಂದೆ ನಿಲ್ಲಿಸಿ ಅವನ ಎದೆಯಮೇಲಣ ವಸ್ತ್ರವನ್ನು ತೊಲಗಿಸಿ "ಮಹಾಪ್ರಭುವೇ! ತೆರಣೆ ಹಿಡಿದ ಮಂಚದ ಕಾಲುಗಳ ಹಾಗೆ ಇವನ ತೋಳುಗಳು ಹೇಗಿವೆಯೋ ? ಬಲಿತಿರುವ ಇವನ ಎದೆಯು ಹೇಗಿದೆಯೋ? ಪರಾಂಬರಿಕೆಯಾಗಲಿ, ಬದು ಕಿದರೆ ಬದುಕದೆ ಇವನಿಗೇನು ತೆವುಲೇ? ಎಂದು ಬಿನ್ನವಿಸಿದರು, ಉಳಿದ ನಾಲ್ಕು ಪ್ರಶ್ನೆಗಳಿಗೆ ಬರತಕ್ಕ ಉತ್ತರಗಳ ಸ್ವಭಾವವನ್ನು ರಾಯರು ಕೂಡಲೇ ಗ್ರಹಿಸಿ ತಡೆಯಲಶಕ್ಯವಾಗಿ ಬರುತ್ತಿರುವ ನಗೆಯನ್ನು ಪ್ರಯಾ ಸದಿಂದ ತಡೆದುಕೊಂಡು "ಸತ್ತರೆ ಬದುಕುವನೆಲ್ಲಿ.?" ಎಂದು ಕೇಳಿದರು. ಅದಕ್ಕಾಪಂಡಿತರು ಅವನನ್ನು ತರಿಸುವುದಕ್ಕೆ ತಿಮ್ಮರಸನಿಗಲ್ಲ, ತ್ರಿನೇತ್ರನಿ ಗಾದರೂ ಶಕ್ಯವಲ್ಲವೆಂದು ಬಹು ಹಟದಿಂದ ತಿಳಿಸಿದರು. ಪಂಡಿತರ ಉತ್ತರ ಗಳನ್ನು ಸರಿಯಾಗಿ ಕೇಳದಿದ್ದರೆ ಅವರ ಮನಸ್ಸು ಕೊರಗಿ ಅವಮಾನ ಪಡುವರೆಂದು ತಿಳಿದು, ರಾಯರು ಉಳಿದ ಪ್ರಶ್ನೆಗಳಿಗೂ ಉತ್ತರಗಳನ್ನು ಕೇಳಿ ತಿಳಿದುಕೊಂಡರು. ಅವುಗಳೆಲ್ಲವೂ ಆಭಾಸವಾಗಿರುವುವೆಂದರೆ ಪಂಡಿ

ತರಿಗೆ ಕೋಪಬಂದೀತೆಂದು ತಿಳಿದು ರಾಯರು ಮಾತನಾಡದೆ ಇದ್ದರು. ಆಮೇಲೆ ಪಂಡಿತರ ಉತ್ತರಗಳು ಸಮಂಜಸವಾಗಿಲ್ಲವೆಂದು ರುಜು ಮಾಡಲಿಕ್ಕೆ ರಾಯರು ತಮ್ಮ ಮಂತ್ರಿವರ್ಯನಾದ ತಿಮ್ಮರಸನಿಗೆ ಹೇಳಿಕಳುಹಿದರು. ಆತನು ಒಡನೆಯೇ ಅಲ್ಲಿಗೆ ಬಂದನು. ರಾಯರು ಮಂತ್ರಿಗೆ ಆ ಪ್ರಶ್ನೆಗಳನ್ನು ಹೇಳಿ, ಅವರೈವರನ್ನು ಸಭೆಗೆ ಬರಮಾಡುವುದೆಂದು ವಿಜ್ಞಾಪಿಸಿದರು. ಕೂಡಲೇ ತಿಮ್ಮರಸನು ಅಲ್ಲಿದ್ದ ಒಬ್ಬ ಗುಮಾಸ್ತೆಯನ್ನು ಕರೆದು ಇಂತಿಂತವರನ್ನು ಕರೆದುಕೊಂಡು ಬಾ. ಎಂದು ಹೇಳಿಕಳುಹಿದನು. ಇಂತಹ ದೊಡ್ಡದಾದ ಸಭೆಗಳಲ್ಲಿ ಯಾವುದಾದರೂ ಒಂದು ಪ್ರಶ್ನೆಗೆ ಪೂರ್ಣವಾದ ಉತ್ತರ ಕೊಟ್ಟವರಲ್ಲಿ ಅರ್ಧಮರ್ಧವಾಗಿ ಉತ್ತರ ಹೇಳಿದವರಿಗೆ ಸ್ವಲ್ಪ ಕೋಪ ಅಸೂಯೆ, ದ್ವೇಷ ಮೊದಲಾದ ಕೆಲವು ಗುಣಗಳುಂಟಾಗುವುದು ಸಹಜ, ಹಾಗೆಯೇ ಪಂಡಿತರಿಗೆ ಮಂತ್ರಿಯಮೇಲೆ ತಡೆಯಕೂಡದ ಸಿಟ್ಟುಬಂದು ಅವರೇ ತೀವ್ರವಾಗಿ ಪ್ರಶ್ನೆಗಳನ್ನು ಕೇಳತೊಡಗಿದರು.

ತಿಮ್ಮರಸನ ಉತ್ತರಗಳು—(೧) ಬದುಕಿದರೆ ಬದುಕುವನು ವೈದ್ಯನು, ಏಕೆಂದರೆ, ರೋಗಿಗೆ ಬಂದರೋಗವನ್ನು ಕುದುರಿಸಿ ಆ ರೋಗಿಯಿಂದ ಹಣಸಂಪಾದಿಸಿ ಬದುಕತಕ್ಕವನು, ಆದ್ದರಿಂದ ರೋಗಿಯು ಬದುಕಿದ ಹೊರತು ವೈದ್ಯನಿಗೆ ಜೀವನ ಜರುಗಲಾರದೆಂದು ಅರ್ಥವು. (೨) ಸತ್ತರೆ ಬದುಕುವವನು ಇವನು ಅಪರ ಕರ್ಮವನ್ನು ಮಾಡಿಸತಕ್ಕ ಪುರೋಹಿತನು, ಊರಿನಲ್ಲಿ ಯಾರಾದರೂ ಸತ್ತುಹೋದಾಗ ಹೊರತು ಉಳಿದವೇಳೆಯಲ್ಲಿ ಇವನನ್ನು ಯಾರೂ ಕರೆಯರು, ಆದ್ದರಿಂದ ಒಬ್ಬನು ಸತ್ತಹೊರತು ಇವನಿಗೆ ಜೀವನವು ಜರುಗದು. (೩) ಅಧಮನು, ಇವನು ಏನೂ ಕೈಲಾಗದವನಾಗಿ ಅಕ್ಕತಂಗಿಯರ ಸಂರಕ್ಷಣೆಯಲ್ಲಿರುತ್ತಾ ಮನೆಯಲ್ಲಿ ಅವರು ಮಾಡಿಸುವ ಕೆಲಸಗಳನ್ನೆಲ್ಲಾ ಮಾಡುತ್ತಾ ಅವರಿಂದಲೂ ಭಾವಮೈದುನ

ರಿಂದಲೂ ಛೀಪೆಟ್ಟುಗಳನ್ನು ತಿನ್ನುತ್ತಿರುವನು. (೪) ಅಧಮಾಧಮನು, ಇವನು ತನಗೆ ಯಾವ ವಿಧವಾದ ಪ್ರಯೋಜನವೂ ಇಲ್ಲದೆ ಅತ್ತೆಮನೆಯ ವರ ಹತ್ತಿರ ಇದ್ದು ಹೊಟ್ಟೆಹೊರೆದುಕೊಳ್ಳುತ್ತಾ ತನ್ನ ಹೆಂಡತಿಯಿಂದಲೂ ಭಾವಮೈದುನ ಮೊದಲಾದವರಿಂದಲೂ ಮಾತುಗಳನ್ನು ಕೇಳುತ್ತಾ ಹೀನ ರಾಗಿ ಬದುಕುವನು. (೫) ನೀಚನು ಇವನು ತನ್ನ ತಾಯಿಯಿಂದಲೂ, ಅಕ್ಕತಂಗಿಯರಿಂದಲೂ, ಭಾರ್ಯೆಯರಿಂದಲೂ, ದ್ರವ್ಯಾರ್ಜನೆಗಾಗಿ ಹೇಳ ಬಾರದ ನೀಚಕೃತ್ಯಗಳನ್ನು ಮಾಡಿಸುವವನು.

ತಿಮ್ಮರಸನು ಈ ಮಾತುಗಳನ್ನು ವಿವರಿಸಿದಮೇಲೆ ಪಂಡಿತರ ಮೋರೆಗಳು ಚಿಕ್ಕದಾಗಿ ಅಂತಹ ಮಹಾಸಭೆಯಲ್ಲಿ ತಮಗೆ ಆದ ಅವ ಮಾನಕ್ಕೆ ಬಹಳ ನೊಂದುಕೊಂಡು ಖಿನ್ನರಾಗಿ ಏನೂಮಾತನಾಡದೆ ಮೌನ ವಾಗಿದ್ದರು. ಆಗ ರಾಯರು ಪಂಡಿತರ ಕಡೆಗೆ ತಿರುಗಿ ಇಂತೆಂದರು.

ಪಂಡಿತಶ್ರೇಷ್ಠರಿರಾ! ಲೌಕಿಕ ವ್ಯಾಪಾರಗಳಿಗೂ ಪಂಡಿತವ್ಯಾಪಾರಗ ಳಿಗೂ ಇರುವ ವ್ಯತ್ಯಾಸಕ್ಕೆ ಕೋಪಿಸುವಿರಾ! ಯಾವ ವೃತ್ತಿಯವರು ಯಾವ ಕೆಲಸಮಾಡಬೇಕೋ ಆ ವೃತ್ತಿಯನ್ನು ನಡಿಸಿದರೆ ಪ್ರಕಾಶಿಸು ವುದು, ತಿಮ್ಮರಸನು ನಿಮ್ಮ ಪಾಂಡಿತ್ಯಕೃತ್ಯಕ್ಕೆ ಕೈಹಾಕಿದರೂ, ನೀವು ಆತನ ಲೌಕಿಕ ವ್ಯಾಪಾರಗಳನ್ನು ನಡಿಸುವೆವೆಂದು ಯತ್ನಿಸಿದರೂ ಅಭಾಸ ವಾಗಿ ಹೋಗುವುದೆಂದು ಹೇಳಿ ಮಂತ್ರಿಪದವಿಯನ್ನು ಪಡೆಯಬೇಕೆಂದು ಪಂಡಿತರ ಮನಸ್ಸಿನಲ್ಲಿದ್ದ ಅಭಿಪ್ರಾಯವನ್ನು ತಿಮ್ಮರಸನ ಬುದ್ಧಿಬಲದಿಂದ ದೃಷ್ಟಾಂತಪೂರ್ವಕವಾಗಿ ಓಡಿಸಿಬಿಟ್ಟರು.

ವಾಚಕರೇ! ತಿಮ್ಮರಸನ ಬುದ್ಧಿವೈಭವವನ್ನು ಕೇಳಿದಿರಾ? ಇವರ ಬುದ್ಧಿವಿಶೇಷವನ್ನು ಕುರಿತು ಇನ್ನೂ ಹಲವು ಕಥೆಗಳು ಆಂಧ್ರ ದೇಶದಲ್ಲಿ ಈಗ್ಗ್ಯೂ ಪ್ರಚುರದಲ್ಲಿವೆ. ಈ ಮಂತ್ರಿಯು ತನ್ನ ಬಾಲ್ಯದಲ್ಲಿ ಬಹಳ ಬಡತನದಿಂದ ಕೆಲವು ದಿನಗಳ ತನಕ ದನಗಳನ್ನು ಮೇಯಿಸುತ್ತಿದ್ದು

ಗುತ್ತಿ, ಚಂದ್ರಗಿರಿ, ಪೆನಗೊಂಡೆ ಮೊದಲಾದ ಸ್ಥಳಗಳಲ್ಲಿ ಮಾಧೂಕ ವೃತ್ತಿಯಿಂದ ಜೀವಿಸುತ್ತ ವಿದ್ಯೆಯನ್ನು ಕಲಿತುಕೊಂಡು ಅಲ್ಲಿಯ ದುರ್ಗಾಧೀಶರನ್ನಾಶ್ರಯಿಸಿ ತನ್ನ ಮೇಧಾವಿಶೇಷದಿಂದ ಕ್ರಮೇಣ ದೊಡ್ಡ ಸಾಮ್ರಾಜ್ಯಕ್ಕೆ ಮಂತ್ರಿಯಾದನು. ಈ ಮಂತ್ರಿಶ್ರೇಷ್ಠನು ನರಸರಾಜ, ವೀರನರಸಿಂಗರಾಜ ಇವರ ಬಳಿಯಲ್ಲಿ ಮಂತ್ರಿಯಾಗಿದ್ದು ರಾಜ್ಯಭಾರವನ್ನೆಲ್ಲಾ ವಹಿಸಿಕೊಂಡು ರಾಜರ ಮತ್ತು ಪ್ರಜೆಗಳ ಗೌರವಕ್ಕೆ ಪಾತ್ರನಾದನು. ತರುವಾಯ ಕ್ರಮೇಣ ಕೃಷ್ಣರಾಯರ ಬಳಿಯಲ್ಲಿಯೂ ಮಂತ್ರಿಯಾಗಿ ರಾಯರಿಗೆ ಬಲಭುಜವಾಗಿದ್ದುಕೊಂಡು ತನ್ನ ಮನೋಬಲದಿಂದ ರಾಯರಿಗೆ ಸೌಖ್ಯವಿಜಯಗಳನ್ನೂ ಅಧಿಕವಾಗಿ ಪ್ರಖ್ಯಾತಿಯನ್ನೂ ಉಂಟು ಮಾಡಿದನು. ರಾಯರ ಈ ಅಮಾತ್ಯಶೇಖರನನ್ನು "ಅಪ್ಪಾಜಿ" ಎಂದು ಕರೆಯುತ್ತಿದ್ದರು,

ಕೃಷ್ಣರಾಯರು ಮೊದಲು ೧೫೧೦ನೇ ವರ್ಷದಲ್ಲಿ ದಕ್ಷಿಣದಿಗ್ವಿಜಯ ಯಾತ್ರೆಗಾಗಿ ಹೊರಟು ಮೈಸೂರು ಮಂಡಲದಲ್ಲಿನ ಶಿವನಸಮುದ್ರ, ಉಮ್ಮತ್ತೂರು, ಶ್ರೀರಂಗಪಟ್ಟಣ ಇವುಗಳನ್ನು ಜಯಿಸಿ, ತರುವಾಯ ಗಂಗವಂಶದ ರಾಜರನ್ನು ಸೋಲಿಸಿ ಮೈಸೂರು ದೇಶವನ್ನೆಲ್ಲಾ ಸ್ವಾಧೀನಪಡಿಸಿಕೊಂಡನು. ಈ ದೇಶವನ್ನು ಜಯಿಸಿದ ಸಂಗತಿ ಪಾರಿಜಾತಾಪಹರಣದಲ್ಲಿನ ಈ ಶ್ಲೋಕದಿಂದ ತಿಳಿಯಬಹುದು.

ಶಾ|| ಸಮ್ಮರ್ದಕ್ಷಮಧೀನಿಬಂಧನವಿಧಾ ಸಂಕ್ರಂದನಾಚಾರ್ಯಶಾ
ರಮ್ಮನ್ಯಾಚಲವಜ್ರಪಾತ ಜಗತೀ ರಕ್ಷಾಂಬುಜಾಕ್ಷಾಧಿರ |
ಥ್ಯಮ್ಮಾರ್ಗಸ್ಥದಶಾಸ್ಯರಾಜ್ಯಸಮುಸಹ್ಯಪ್ರೌಢರಾತೀವಭಾ
ಗುಮ್ಮತ್ತೂರಿಶಿವಂಸಮುದ್ರಪುರವಪ್ರೋನ್ಮೂಲನಾಡಂಬರಾ ||

ಮತ್ತು ಕರ್ಣಾಟರಾಜ್ಯದ ಸಣ್ಣಸಣ್ಣ ನಾಡುಗಳನ್ನು ಜಯಿಸಿ ತನಗೆ ಪ್ರತಿನಿಧಿಯಾಗಿ ಆಳಲು ಜಕ್ಕರಾಯನನ್ನು ನಿಯಮಿಸಿಕೊಂಡನು.

ಮಲಯಾಳ, ಚೇರ, ಚೋಳ, ಪಾಂಡ್ಯರಾಜ್ಯಗಳನ್ನು ಜಯಿಸಿ ಈ ದೇಶಗಳನ್ನು ಮೂರುಭಾಗಗಳಾಗಿ ವಿಭಜಿಸಿ, ಒಂದೊಂದುಭಾಗಕ್ಕೆ ಒಬ್ಬೊಬ್ಬನನ್ನು ತನ್ನ ಪ್ರತಿನಿಧಿಯಾಗಿ ನಿಯಮಿಸಿದನು.

೧೫೧೫ ನೆಯ ಸಂವತ್ಸರದಲ್ಲಿ ಪೂರ್ವದಿಗ್ವಿಜಯ ಯಾತ್ರೆ ಹೊರಟು ಕೊಂಡವೀಡು, ಬೆಲ್ಲಂಕೋಟೆ, ವಿನಕೊಂಡ, ಬೆಜವಾಡ, ಕೊಂಡಪಲ್ಲಿ, ವೇಗಿದೇಶದಲ್ಲಿರುವ ಜಮ್ಮುಲೋಯಿ, ತೋನಸೀಮೆ, ರಾಜಮಹೇಂದ್ರ, ಮೊದಲಾದ ದೇಶಗಳನ್ನು ಜಯಿಸಿ ೧೫೧೬ ನೇ ಸಂವತ್ಸರದಲ್ಲಿ ವಿಶಾಖ ಪಟ್ಟಣಮಂಡಲಕ್ಕೆ ಸೇರಿದ ಭೀಮುನಪಟ್ಟಣಕ್ಕೆ ಐದು ಹರಿದಾರಿ ದೂರವಲ್ಲಿ ರುವ ಬೊಟ್ಟನೂರಿನ ಹತ್ತಿರ ಒಂದು ಕಲ್ಲಿನ ಜಯಸ್ತಂಭವನ್ನು ನೆಡಿಸಿ ಆ ಮಂಡಲದಲ್ಲಿನ ವೀರಪಲ್ಲಿ ತಾಲೂಕಿನಲ್ಲಿದ್ದ ವಡ್ಡಾದಿಯನ್ನು ಜಯಿಸಿ ಉತ್ಕಲ ದೇಶದ ಕಟಕದತನಕ ಹೋಗಿ ಆ ಪಟ್ಟಣವನ್ನು ಸುಟ್ಟುಬಿಡಲು ಕಳಿಂಗದೇಶಾಧೀಶನಾಗಿ ಒತ್ರದೇಶವನ್ನು ಆಳುತ್ತಿದ್ದ ಪ್ರತಾಪರುದ್ರ ದೇವನು ತನ್ನ ಮಗಳಾದ ತಿರುಮಲಾದೇವಿಯನ್ನು ಮದುವೆ ಮಾಡಿಕೊಟ್ಟು ಸಂಧಿಮಾಡಿಕೊಂಡನು. ಇದರಿಂದ ಕೃಷ್ಣರಾಯರು ತಾವು ಜಯಿಸಿದ ರಾಜ ಮಹೇಂದ್ರದವರೆಗೂ ಇರುವ ಕಳಿಂಗದೇಶವನ್ನು ಮರಳಿ ಪ್ರತಾಪರುದ್ರ ದೇವನಿಗೆ ಕೊಟ್ಟು ಅದೇ ವರುಷದಲ್ಲಿ ಕಾಂಚೀ ಪುರವನ್ನು ಪ್ರವೇಶಿಸಿ ದರು. ಈ ಮಹಾರಾಯನೂ ಇವನ ಪಟ್ಟದರಸಿಯೂ ಹಲವುಕಡೆಗಳಲ್ಲಿ ತಮ್ಮ ವಿಜಯವನ್ನು ಪ್ರಕಾಶಿಸಿ, ದೊಡ್ಡದೊಡ್ಡ ಕ್ಷೇತ್ರಗಳಲ್ಲಿ ದಾನ ಧರ್ಮಗಳನ್ನು ಮಾಡಿದರು, ಹೀಗೆ ಮಾಡಿದ್ದಕ್ಕೆ ದೃಷ್ಟಾಂತವಾಗಿ ಈತನು ಸಿಂಹಾಚಲದ ದರ್ಶನಕ್ಕೆ ಬಂದಿದ್ದಾಗ ಭಾರ್ಯಾಸಹಿತನಾಗಿ ಮಾಡಿದ ದಾನ ಗಳ ವಿವರಣೆಯು ಸಿಂಹಾಚಲ ದೇವಾಲಯದ ಏಳನೆಯ ಸ್ಥಂಬದ ಮೇಲೆ ಕೆತ್ತಲ್ಪಟ್ಟಿರುವ ಶಾಸನದಿಂದ ಗೊತ್ತಾಗುವುದು. ಅದರ ಭಾಷಾಂತರವನ್ನು ಇಲ್ಲಿ ಉದ್ಧರಿಸಿದೆ.

ಶ್ರೀ ಮಹಾರಾಜಾಧಿರಾಜ ಪರಮೇಶ್ವರ ಮೂರುರಾಯರ ಗಂಡ ಆದಿರಾಯವಿಜಯ ಭಾಷಾಗೀತಪ್ರವರರಾಯ ಗಂಡ ಯವನರಾಜ್ಯಸಂಸ್ಥಾಪನಾಚಾರ್ಯ ಶ್ರೀ ವೀರಪ್ರತಾಪ ಕೃಷ್ಣದೇವಮಹಾರಾಜರು ವಿಜಯನಗರದಲ್ಲಿ ಸಿಂಹಾಸನಾರೂಢರಾಗಿ ಪೂರ್ವದಿಗ್ವಿಜಯಯಾತ್ರೆಗೆ ದಯಮಾಡಿ, ಉದಯಗಿರಿ, ಕೊಂಡವೀಡು, ಕೊಂಡಪಲ್ಲಿ, ರಾಜಮಹೇಂದ್ರ ಮೊದಲಾದ ದುರ್ಗಗಳನ್ನು ಸಾಧಿಸಿ ಸಿಂಹಾದ್ರಿಗೆ ದಯಮಾಡಿ, ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲೀವಾಹನಶಕ ವರ್ಷಗಳು ೧೪೩೮ ಕ್ಕೆ ಸರಿಯಾದ ಧಾತುನಾಮಸಂವತ್ಸರದ ಜ್ಯೇಷ್ಠಬಹುಳ ದ್ವಾದಶಿ ಸ್ಥಿರವಾರದಂದು ಸಿಂಹಾದ್ರಿನಾಥನ ದರ್ಶನ ಮಾಡಿ, ತಮ್ಮ ತಾಯಿ ನಾಗದೇವಮ್ಮನವರಿಗೂ ತಮ್ಮ ತಂದೆ ನರಸರಾಜರಿಗೂ ಪುಣ್ಯವಾಗಲೆಂದು ದೇವರಿಗೆ ಸಮರ್ಪಿಸಿದ ಕಂಠಮಾಲೆ ಒಂದಕ್ಕೆ ಮುತ್ತುಗಳು ೯೯ ವಜ್ರಮಾಣಿಕ್ಯಗಳ ಕಡಗಗಳ ಜತೆ ಒಂದು, ಶಂಖಚಕ್ರಗಳ ಪದಕ ಒಂದು, ಭಂಗಾರದ ತಟ್ಟೆ ಒಂದಕ್ಕೆ ತೂಕ ೪೪೨೯೦ ಗದ್ಯಾಣ, ಹೊನ್ನು ೨೦೧೦ ತಮ್ಮ ದೇವಿ ಚಿನ್ನಾದೇವಮ್ಮನವರಿಂದ ಸಮರ್ಪಿಸಿದ ಪದಕ ಒಂದಕ್ಕೆ ಗದ್ಯಾಣ ೩೪೦೦ ತಿರುಮಲದೇವಮ್ಮನವರಿಂದ ಸಮರ್ಪಿಸಿದ ಪದಕ ಒಂದಕ್ಕೆ ಗದ್ಯಾಣ ೩೪೦೦ ಇಷ್ಟನ್ನು ಸಮರ್ಪಿಸಿದ್ದಕ್ಕೆ ದಾನಶಾಸನ. ಕೃಷ್ಣದೇವರಾಯರು ಮೇಲಿನ ಶಾಸನದಲ್ಲಿ ಮೂರು ರಾಯರ ಗಂಡ ಎಂದು ಹೆಸರಿಸಲ್ಪಟ್ಟಿರುವನಲ್ಲವೆ? ಈತನು ಒಡ್ರರಾಜರಾದ ಗಜಪತಿಗಳನ್ನೂ, ತುರುಷ್ಕರಾಜರಾದ ಅಶ್ವಪತಿಗಳನ್ನೂ ಆಂಧ್ರರಾಜರಾದ ನರಪತಿಗಳನ್ನು ಜಯಿಸಿದುದರಿಂದ ಈತನಿಗೆ ಮೂರುರಾಯರ ಗಂಡನೆಂಬ ಬಿರುದುಬಂದಿದೆ, ಮತ್ತು ಈ ರಾಯನಿಗೆ ಅನೇಕ ಬಿರುದುಗಳಿದ್ದವು ಆದರೆ ಅವುಗಳನ್ನು ಇಲ್ಲಿ ವಿವರಿಸುವುದು ಅಪ್ರಕೃತವಾದುದು

ಈ ರಾಯರಿಗೆ ತಿರುಮಲಾದೇವಿ, ಅನ್ನಪೂರ್ಣಾದೇವಿ ಎಂಬ ಇಬ್ಬರು ರಾಣಿಯರು ಇದ್ದರು ಎಂಬುದು ಈತನ ವಿರಚಿಸಿದ ವಿಷ್ಣುಚಿತ್ತೀ

ಯದ ಒಂದು ಪದ್ಯದಿಂದ ಗೊತ್ತಾಗುವುದು. ಅನ್ನಪೂರ್ಣಾದೇವಿಗೆ ಚಿನ್ನಾ ದೇವಿ ಎಂಬ ಮತ್ತೊಂದು ಹೆಸರು ಇತ್ತು. ಈತನ ದಿಗ್ವಿಜಯವು ಹಲವು ಆಂಧ್ರಗ್ರಂಥಗಳಲ್ಲಿ ಬಹಳವಾಗಿ ಬಣ್ಣಿಸಲ್ಪಟ್ಟಿದೆ. ಅವುಗಳನ್ನೆಲ್ಲಾ ತೆಗೆದು ಬರೆಯುವುದು ಅನಾವಶ್ಯಕ.

ಈ ಮಹನೀಯನ ಪಾಂಡಿತ್ಯವನ್ನೂ ಈತನ ಆಸ್ಥಾನದಲ್ಲಿ ಅಷ್ಟ ದಿಗ್ಗಜಗಳೆಂದು ಪ್ರಸಿದ್ಧಿಗೊಂಡಿದ್ದ ಎಂಟುಮಂದಿ ಪಂಡಿತರ ಪಾಂಡಿತ್ಯ ವನ್ನೂ ಸಂಗ್ರಹವಾಗಿ ತಿಳಿಸುವೆವು ಈ ವಿಷಯವನ್ನು ಹೇಳುವುದಕ್ಕೆ ಮುಂಚೆ ಇವರ ಹಿಂದಿನ ದೊರೆಗಳ ಆಸ್ಥಾನದಲ್ಲಿದ್ದ ಪಂಡಿತರ ವಿಚಾರ ವಾಗಿ ಸ್ವಲ್ಪಮಟ್ಟಿಗೆ ತಿಳಿದುಕೊಳ್ಳೋಣ.

ನಮ್ಮ ಹಿಂದೂದೇಶದಲ್ಲಿನ ಉತ್ತಮಗ್ರಂಥಗಳೆಲ್ಲವೂ ಮೊತ್ತ ಮೊದಲು ಸಂಸ್ಕೃತಭಾಷೆಯಲ್ಲಿಯೇ ರಚಿಸಲ್ಪಟ್ಟವು. ಈ ಭಾಷೆಯಲ್ಲಿ ಐಹಿಕಾಮುಷ್ಮಿಕ ಸುಖಗಳನ್ನು ಉಂಟುಮಾಡತಕ್ಕ ಗ್ರಂಥರಾಜಿಗಳೂ ಸ್ಮೃತಿಸೂತ್ರಗಳೂ, ಇತಿಹಾಸಪುರಾಣಾದಿಗಳೂ, ಧರ್ಮಶಾಸ್ತ್ರಗಳೂ, ವೈದ್ಯಮಂತ್ರ ತಂತ್ರಾದಿಗಳೂ, ಗಣಿಸಲಶಕ್ಯಗಳಾಗಿವೆ.

ಅವುಗಳಲ್ಲಿ ಶ್ರೀಮದ್ರಾಮಾಯಣವೂ, ಮಹಾಭಾರತವೂ ಸಮಸ್ತ ಧರ್ಮಗಳನ್ನೂ, ಬೋಧಿಸತಕ್ಕವುಗಳಾದುದರಿಂದ ಪೂರ್ವದಲ್ಲಿದ್ದ ರಾಜ ರುಗಳು ಅವುಗಳನ್ನು ಇತರ ಭಾಷೆಗಳಲ್ಲಿ ದೊಡ್ಡ ಕವಿಗಳಿಂದ ಭಾಷಾಂ ತರಿಸುತ್ತಾ ಬಂದರು.

ರಾಜಮಹೇಂದ್ರ ನಗರಾಧಿಪನಾಗಿಯೂ ಕಾವ್ಯಗೀತಪ್ರಿಯನಾಗಿ ಯೂ ಇದ್ದ ರಾಜರಾಜನರೇಂದ್ರನೆಂಬ ವಿಷ್ಣುವರ್ಧನನು, ತನ್ನ ಆಸ್ಥಾನ ದಲ್ಲಿ ಬಹು ಜನ ಪಂಡಿತರನ್ನು ಸೇರಿಸಿಕೊಂಡಿದ್ದನು. ಈತನಿಗೆ ಯಾವಾ ಗಲೂ ಭಾರತವನ್ನು ಕೇಳುವುದರಲ್ಲಿ ಅಭಿರುಚಿ ಹೆಚ್ಚು. ಆದುದರಿಂದ ಹಲವು ಭಾಷೆಗಳಲ್ಲಿ ಹಲವು ವಿಧಗಳಾಗಿ ಬಹುಜನರಿಂದ ಹೇಳಲ್ಪಡು

ತ್ತಿದ್ದ ಮಹಾಭಾರತದ ಕಥೆಯನ್ನು ಕೇಳುತ್ತಲಿದ್ದರೂ ಈತನು ಅಷ್ಟ ರಿಂದ ತೃಪ್ತನಾಗದೆ ತೆಲುಗುಭಾಷೆಯಲ್ಲಿಯೂ ಕೇಳಬೇಕೆಂಬ ಆಶೆ ಹುಟ್ಟಿತು. ಆಗ ತನ್ನ ಸಭೆಯಲ್ಲಿದ್ದ ವಿದ್ವಜ್ಜನರಲ್ಲಿ ಬ್ರಾಹ್ಮಣೋತ್ತಮ ನಾಗಿಯೂ ವಿಫಲಶಬ್ದಶಾಸನನಾಗಿಯೂ, ಸಕಲಶಾಸ್ತ್ರಜ್ಞನಾಗಿಯೂ ಇದ್ದ ನನ್ನಯ ಭಟ್ಟನೆಂಬುವನನ್ನು ಕರೆದು ತನ್ನ ಅಭಿಪ್ರಾಯವನ್ನು ತಿಳಿಸಿ, ಮಹಾ ಭಾರತವನ್ನು ತೆಲುಗಿಸಬೇಕೆಂದು ಪ್ರಾರ್ಥಿಸಿದನು. ಆ ಮಹಾ ಪಂಡಿತನು ಅರಣ್ಯಪರ್ವದ ತನಕ ಬರೆದು ಮೃತನಾದನು, ಮತ್ತೊಬ್ಬ ಉದ್ದಾಮಪಂಡಿತನಾದ ತಿಕ್ಕನಸೋಮಯಾಜಿ ಎಂಬುವನು ಈ ಅರಣ್ಯ ಪರ್ವದ ಶೇಷವನ್ನು ಮಾತ್ರಬಿಟ್ಟು ವಿರಾಟಪರ್ವದಿಂದ ಪ್ರಾರಂಭಿಸಿ ಹದಿ ನೈದು ಪರ್ವಗಳನ್ನು ತೆಲುಗಿಸಿದನು. ಅರಣ್ಯಪರ್ವವನ್ನು ಸ್ವಲ್ಪಮಟ್ಟಿಗೆ ಭಾಷಾಂತರಿಸಿದ್ದರಿಂದ ನನ್ನಯ ಭಟ್ಟನಿಗೆ ಹುಚ್ಚುಹಿಡಿದು ಸತ್ತನೆಂದು ತಿಳಿದು ತಾನು ಅದನ್ನು ಬರೆದರೆ ತನಗೂ ಹಾಗೆಯೇ ಆಗುವುದೋ ಏನೋ ಎಂಬ ಭಯದಿಂದ ಈತನು ಆ ಭಾಗಕ್ಕೆ ಕೈ ಹಾಕಲಿಲ್ಲ. ಆದುದರಿಂದ ಕೆಲವುಕಾಲದ ತನಕ ಆಂಧ್ರಭಾರತವು ಪೂರ್ಣವಾಗದೆ ಕೊರತೆಯಲ್ಲಿಯೇ ಇತ್ತು. ಆ ಕಾಲದಲ್ಲಿ ಬರೆಯಲ್ಪಟ್ಟ ಕೆಲವು ಓಲೆಯಗರಿಯ ಪ್ರತಿಗಳಲ್ಲಿ ವನಪರ್ವವು ಅಸಮಾಗ್ರವಾಗಿಯೇ ಕಾಣಬರುತ್ತಿದೆ. ಈ ಕವಿಗೆ ಹಿಡಿದ ಭಯವೇ ಆಮೇಲೆ ಅರಣ್ಯಪರ್ವಶೇಷವನ್ನು ಬರೆದ ಯರ್ರಾಪ್ರೆಗಡ ಕವಿಗೆ ಹತ್ತಿ, ತಾನು ಅದನ್ನು ತೆಲುಗಿಸಲಪೇಕ್ಷೆಯಿದ್ದರೂ ತನ್ನ ಹೆಸರನ್ನಿಟ್ಟರೆ ನನ್ನಯ ಭಟ್ಟನಹಾಗೆಯೇ ತನಗೆ ಕೇಡುಮಾಡುವುದೆಂದು ಹೆದರಿ, ಉಳಿದ ಭಾಗವನ್ನು ರಾಜರಾಜನರೇಂದ್ರನಿಗೆ ಅಂಕಿತಮಾಡಿ, ನನ್ನಯ ಭಟ್ಟನಹೆಸರಿ ನಿಂದಲೇ ವಿರಚಿಸಿದನು. ಈತನೂವನಪರ್ವದಲ್ಲಿ ಅರ್ಧಕ್ಕಿಂತಲೂ ಹೆಚ್ಚು ಭಾಗವನ್ನು ತೆಲುಗಿಸಿರುವನು. ಈತನ ಕವಿತಾಶೈಲಿಯು ಮೃದುವಾಗಿಯೂ ಮಧುರವಾಗಿಯೂ ಇರುವುದು. ಈಗಲೂ ಭಾರತವನ್ನು ಓದತಕ್ಕವರು

ಅರಣ್ಯಪರ್ವದಲ್ಲಿ ಸ್ವಲ್ಪ ಭಾಗವನ್ನು ಬಿಟ್ಟು ಪಾರಯಣಮಾಡುವ ಅಭ್ಯಾಸವನ್ನಿಟ್ಟುಕೊಂಡೇ ಇರುವರು. ಈ ಯರ್ರಾಪ್ರೆಗಡ ಕವಿಗೆ ಪ್ರಬಂಧ ಪರಮೇಶ್ವರನೆಂಬ ಬಿರಿದು ಇದ್ದಿತು.

ರಂಗನಾಥನೆಂಬ ಕವಿಯು ರಾಮಾಯಣವನ್ನು ದ್ವಿಪದಕಾವ್ಯವಾಗಿ ವಿರಚಿಸಿದನು. ಕೃಷ್ಣಾಮಂಡಲದಮುನ ಮೂರುಸಂಸ್ಥಾನಕ್ಕೆ ಪ್ರಭುವಾದ ವಿಠ್ಠಲರಾಜಪುತ್ರನಾದ ಬುಕ್ಕರಾಜನಿಗೆ ಈ ಕೃತಿಯು ಅಂಕಿತವಾಗಿಮಾಡಲ್ಪಟ್ಟಿದ್ದರೂ ಇದಕ್ಕೆ ಬುಕ್ಕರಾಮಾಯಣವೆಂದು ಯಾರೂ ಹೆಸರಿಸದೆ ರಂಗನಾಥರಾಮಾಯಣವೆಂತಲೇ ರೂಢಿಯಾಗಿ ಹೇಳುವರು. ಭಾಸ್ಕರನೆಂಬ ಕವಿಯೊಬ್ಬನು ರಾಮಾಯಣವನ್ನು ಪದ್ಯಕಾವ್ಯವಾಗಿ ತೆಲುಗಿಸಿದನು. ಬಮ್ಮೆರ ಪೋತನನೆಂಬ ಕವಿಯು ಭಾಗವತವನ್ನು ಭಕ್ತಿರಸಪ್ರಧಾನವಾಗಿ ಆಂಧ್ರೀಕರಿಸಿದನು. ಇನ್ನೂ ಹಲವರು ಕವೀಶ್ವರರು ಆಕಾಲದಲ್ಲಿ ಪುರಾಣದ ಕಥೆಗಳನ್ನು ತೆಲುಗಿಸಿ ಕೀರ್ತಿಯನ್ನು ಪಡೆದರು.

ಆ ಕಾಲದ ಮಹಾರಾಜರುಗಳು ಕವೀಶ್ವರರನ್ನು ಮನ್ನಿಸಿ ಆದರಣೆಯಿಂದ ಪೋಷಿಸುತ್ತಿದ್ದುದರಿಂದ ಅವರು ಪುರಾಣೇತಿಹಾಸಗಳನ್ನು ಸಂಸ್ಕೃತದಿಂದ ಆಂಧ್ರಕ್ಕೆ ಭಾಷಾಂತರಿಸುತ್ತಿದ್ದರು. ಆದುದರಿಂದ ಆಗಿನ ಕವಿಗಳು ಸಂಸ್ಕೃತಾಂಧ್ರಭಾಷೆಗಳಲ್ಲಿ ಅಸಮಾನ ಪಾಂಡಿತ್ಯವುಳ್ಳವರಾಗಿ ಕಾವ್ಯನಿರ್ಮಾಣಕೌಶಲ್ಯದಲ್ಲಿ ಹೆಸರುಗೊಂಡು ವಿಶೇಷವಾಗಿ ನೀತಿಬೋಧಕಗಳಾಗಿಯೂ ಭಕ್ತಿದಾಯಕಗಳಾಗಿಯೂ ಇರುವ ಗ್ರಂಥಗಳನ್ನು ಬರೆಯುತ್ತಾಬಂದರು. ಕೇವಲಾನಂದದಾಯಕಗಳಾದ ಕಾವ್ಯಗಳನ್ನು ತೆಲುಗಿಸಿದ ಕವಿಗಳಲ್ಲಿ ಶ್ರೀನಾಥನು ಮುಖ್ಯನು. ಈತನು ಶೃಂಗಾರನೈಷಧ, ಕಾಶೀಖಂಡ ಭೀಮಖಂಡ, ಮರುದ್ರಾಜಚರಿತ್ರೆ, ಪಂಡಿತಾರಾಧ್ಯಚರಿತ್ರೆ, ಶಾಲಿವಾಹನ ಸಪ್ತಶತಿ, ವೀಧೀನಾಟಕ ಹರಿವಿಲಾಸ ಮುಂತಾದ ಗ್ರಂಥಗಳನ್ನು ರಚಿಸಿದ್ದಾನೆ. ಇವನ ಕವಿತ್ವವು ಸಂಸ್ಕೃತ ಭೂಯಿಷ್ಟವಾಗಿಯೂ, ರಸವತ್ತಾಗಿಯೂ ಇರುವುದು. ಶೈಲಿಯು ಅಷ್ಟೇನೂ ಸುಲಭವಾದುದಲ್ಲ.

ಕೆಲವುಕಾಲ ಕಳೆದಮೇಲೆ ಕ್ರಿ. ಶ. ೧೪೦೪ ರಿಂದ ೧೪೨೨ ರ ವರಿಗೆ ವಿಜಯನಗರವನಾಳದ ಪ್ರಥಮದೇವರಾಯ ಅಥವ ಎರಡನೆಯ ಬುಕ್ಕರಾಯನ ಕಾಲದಲ್ಲಿ ಆಂಧ್ರಭಾಷೆಯು ಅಭಿವೃದ್ಧಿಯನ್ನು ಹೊಂದಿತು. ಇವನ ಕಾಲದಲ್ಲಿ ಜನ್ನಯ್ಯನೂ ಈತನ ಮಗನಾದ ಸಿದ್ದನ್ನನೂ ಮಂತ್ರಿಗಳಾಗಿದ್ದರು. ಸಿದ್ದನ್ನನೆಂಬ ಮಂತ್ರಿಗೆ ಆಂಧ್ರಭಾಷೆಯಲ್ಲಿ ಬಹಳ ಪ್ರೇಮವಿದ್ದುದರಿಂದ ಈತನು ಅನೇಕ ಗ್ರಂಥಗಳನ್ನು ಬರೆಯಿಸಿದನು. ವಿಕ್ರಮಾರ್ಕ ಚರಿತ್ರೆಯು ಇವನ ಕಾಲದಲ್ಲಿ ರಚಿತವಾಯಿತು.

ಕ್ರಿ. ಶ. ೧೯೯೯ ರಿಂದ ೧೪೯೦ ರವರಿಗೆ ವಿಜಯನಗರ ಸಾಮ್ರಾಜ್ಯವನಾಳದ ಸಾಳುವ ನರಸಿಂಹರಾಜನು ಆಂಧ್ರಭಾಷೆಯಲ್ಲಿ ಬಹಳ ಅಭಿಮಾನವುಳ್ಳವನಾಗಿ ಕವಿಗಳನ್ನಾದರಿಸುತ್ತಲಿದ್ದುದರಿಂದ ಈ ಕಾಲದಲ್ಲಿ ಭಾಷೆಯು ತುಂಬಾ ಅಭಿವೃದ್ಧಿಗೆ ಬಂತು. ಈ ಕಾಲದಲ್ಲಿ ಭಾರತೀ ತೀರ್ಥರ ಶಿಷ್ಯನಾದ ಪಿಲ್ಲಲಮರಿಪಿನ ವೀರಭದ್ರನೆಂಬ ಪ್ರಖ್ಯಾತ ಕವಿಯು ಜೈಮಿನಿಭಾರತವನ್ನು ಆಂಧ್ರಭಾಷೆಯಲ್ಲಿ ವಿರಚಿಸಿದುದಲ್ಲದೆ ಇನ್ನೂ ಕೆಲವು ಗ್ರಂಥಗಳನ್ನು ಬರೆದನು.

೧೪೯೦ ರಿಂದ ೧೫೦೯ ರ ವರಿಗೆ ವಿಜಯನಗರ ಸಾಮ್ರಾಜ್ಯವನ್ನು ಮಹಿಸಿದ್ದ ತುಳುವ ನರಸರಾಜನು ಕೂಡ ಪೂರ್ವರಾಜರಂತೆಯೇ ಭಾಷಾಭಿಮಾನಿಯಾಗಿ ಕವಿಗಳಿಂದ ಹಲವು ಗ್ರಂಥಗಳನ್ನು ಬರೆಯಿಸಿದನು. ೧೫೦೯ ರಿಂದ ೧೫೩೦ ರ ವರೆಗೆ ವಿಜಯನಗರ ಸಿಂಹಾಸನಾಧಿಷ್ಠಿತನಾಗಿ ಪೂರ್ವ ದಕ್ಷಿಣಾದಿ ದಿಗ್ವಿಜಯಗಳಲ್ಲಿ ಪ್ರಖ್ಯಾತನಾದ ಶ್ರೀಕೃಷ್ಣರಾಯನ ಕಾಲದಲ್ಲಂತು ಆಂಧ್ರಭಾಷೆಯು ಅತ್ಯುಚ್ಛ್ರಯಸ್ಥಿತಿಗೆ ಬಂತು. ಈ ಮಹನೀಯನು ಕವಿವರಹೃದಯ ಪುಂಡರೀಕಗಳಿಗೆ ಬಾಲಭಾನುವಾಗಿಯೂ, ಅಪ್ರತಿಹತಪ್ರತಾಪನಾಗಿಯೂ, ತನ್ನ ಉದ್ದಂಡ ಭುಜದಂಡವನ್ನು ಮೆರೆಯಿಸಿ ಷಟ್ಸಮುದ್ರಯುತ ಪಾಲಿಗೆ ಸಿಂಹಾವಲೋಕನದಂತೆ ರಾಜ್ಯವನ್ನಾಳುತ್ತಿ

ದ್ದಾಗ ಭಾಷಾಭಿವೃದ್ಧಿಯಾಗುವುದರಲ್ಲಿ ಅತಿಶಯವೇನಿದೆ, ಸಂಸ್ಕೃತಭಾಷೆಗೆ ಭೋಜವಿಕ್ರಮರಂತೆಯೂ, ಆಂಗ್ಲೇಯ ಭಾಷೆಗೆ ಎಲಿಜ್‌ಬೆತ್ ರಾಣಿಯಂತೆಯೂ ಆಂಧ್ರಭಾಷೆಗೆ ಈ ಕೃಷ್ಣರಾಯನು ಪೋಷಕನಾಗಿದ್ದುದರಿಂದ ಈತನಿಗೆ ಆಂಧ್ರಭೋಜನೆಂಬ ಸುಪ್ರಸಿದ್ಧನಾಮವು ಬಂತು. ಈತನು ಸ್ವತಃ ಮದಾಲಸಾಚರಿತ್ರೆ, ಸತ್ಯಾಪರಿಣಯ, ಸಕಲ ಕಥಾಸಾರಸಂಗ್ರಹ, ಜ್ಞಾನಚಿಂತಾಮಣಿ, ರಸಮಂಜರಿ, ವಿಷ್ಣುಚಿತ್ತೀಯಿಯ ಮೊದಲಾದ ಹಲವು ಗ್ರಂಥಗಳನ್ನು ವಿರಚಿಸಿದನು. ಈತನ ಸಭೆಯಲ್ಲಿ ಇದ್ದ ಅಷ್ಟದಿಗ್ಗಜಗಳೆಂಬ ಕವಿಗಳು:—ಅಲ್ಲಸಾನಿಪೆದ್ದನ್ನ, ನಂದಿತಿಮ್ಮನ್ನ, ರಾಮಭದ್ರ, ಧೂರ್ಜಟಿ, ಮಲ್ಲನ್ನ, ಸೂರನ್ನ ರಾಮ ರಾಜಭೂಷಣ, ತೆನ್ನಾಲರಾಮಕೃಷ್ಣ ಇವರೇ.

ಈ ಎಂಟುಮಂದಿಯಲ್ಲಿ ಆಂಧ್ರಕವಿತಾಪಿತಾಮಹನೆಂಗು ಹೆಸರುಗೊಂಡ ಅಲ್ಲನಾಸಿಪೆದ್ದನ್ನನೇ ಬಹುಪ್ರಸಿದ್ಧನು. ಮಹಾರಾಜನು ಈತನನ್ನು ಬಹಳವಾಗಿ ಪ್ರೀತಿಸುತ್ತಿದ್ದನು ಪ್ರಸಿದ್ಧವಾದ ಮನುಚರಿತ್ರೆಯು ಇವನ ಕಾವ್ಯಗಳಲ್ಲಿ ಮುಖ್ಯವಾದುದು. ನಂದಿತಿಮ್ಮಣ್ಣನೆಂಬುವನಿಗೆ ಮುಕ್ಕುತಿಮ್ಮನ್ನನೆಂಬ ಹೆಸರು ಉಂಟು ಈತನು ಪಾರಿಜಾತಾಪಹರಣವೆಂಬ ಕಾವ್ಯವನ್ನು ವಿರಚಿಸಿದನು. ಈತನ ಶೈಲಿಯು ಅತಿ ಮಧುರವೆಂಬುವುದಕ್ಕೆ " ಮುಕ್ಕುತಿಮ್ಮನಾರ್ಯ ಮುದ್ದುಪಲುಕು " ಎಂಬ ವಾಕ್ಯವೇ ಹೆಸರುಗೊಂಡಿದೆ (೩) ರಾಮಭದ್ರ—ಈತನು ಸಕಲ ಕಥಾಸಾರಸಂಗ್ರಹ, ರಾಮಾಭ್ಯುದಯ ಮೊದಲಾದ ಕಾವ್ಯಗಳನ್ನು ರಚಿಸಿರವನು. (೪) ಧೂರ್ಜಟಿ—ಈತನು ಕಾಳಹಸ್ತಿ ಮಾಹಾತ್ಮ್ಯವನ್ನು ರಚಿಸಿದನು. (೫) ಮಲ್ಲನ್ನ—ಈತನು ರಾಜಶೇಖರಚರಿತ್ರವೆಂಬ ಕಾವ್ಯವನ್ನು ಸಾಂಗವಾಗಿ ವಿರಚಿಸಿದನು. (೬) ಪಿಂಗಳಿಸೂರನ್ನ—ಈತನು ರಾಘುವ ಪಾಂಡವೀಯ ಪ್ರಭಾವತೀಪ್ರದ್ಯುಮ್ನ. ಕಳಾಪೂರ್ಣೋದಯ ಎಂಬ ಕಾವ್ಯತ್ರಯ

ವನ್ನು ವಿರಚಿಸಿದನು. ಪ್ರೌಢಕಾವ್ಯರಚನೆಯಲ್ಲಿ ಈತನ ಪಾಂಡಿತ್ಯವು ಸರ್ವತೋಮುಖವಾಗಿತ್ತು (೭) ರಾಮರಾಜಭೂಷಣನು—ಭಟ್ಟುಮೂರ್ತಿಯೆಂಬುದು ಇವನ ವಾಸ್ತವವಾದ ಹೆಸರು. ರಾಮರಾಜರ ಆಸ್ಥಾನದಲ್ಲಿದ್ದುದರಿಂದ ಇವನಿಗೆ ಈ ಬಿರುದು ನಾಮ ಬಂತೆಂದು ಹೇಳುವರು. ವಿಖ್ಯಾತವಾದ ವಸುಚರಿತ್ರೆಯನ್ನು ಬರೆದವನು ಇವನೇ. ಈ ಕಾವ್ಯವು ಆಂಧ್ರಗ್ರಂಥಗಳಲ್ಲಿ ಅಗ್ರಗಣ್ಯವೆನಿಸಿಕೊಂಡಿದೆ. ಈ ಕವಿಯೇ ಹರಿಶ್ಚಂದ್ರನಳೋಪಾಖ್ಯಾನವೆಂಬ ದ್ವ್ಯರ್ಥಕಾವ್ಯವನ್ನೂ, ನರಸಭೂಪಾಲೀಯವೆಂಬ ಅಲಂಕಾರಗ್ರಂಥವನ್ನೂ ಬರೆದಿರುವನು. (೮) ತೆನ್ನಾಲರಾಮಲಿಂಗ—ಈತನು ವಿಕಟಕವಿಯೆಂದು ಹೆಸರುಗೊಂಡ ರಾಮಕೃಷ್ಣನು. ಇವನು ಪಾಂಡುರಂಗ ಮಹಾತ್ಮ್ಯವನ್ನು ರಚಿಸಿರುವನು.

ಕೃಷ್ಣರಾಯನು ವಿಜಯನಗರದಲ್ಲಿ ಹೊಸದೇವಾಲಯಗಳನ್ನೂ ಅರಮನೆಗಳನ್ನೂ, ಕಾಲುವೆಗಳನ್ನೂ ನಿರ್ಮಿಸಿ, ಹಂಪೇವಿರೂಪಾಕ್ಷದಲ್ಲಿನ ಹಂಪಾಪತಿದೇವಾಲಯಕ್ಕೆ ಒಂದು ಗೋಪುರವನ್ನು ಕಟ್ಟಿಸಿದನು. ಪೂರ್ವದಿಗ್ವಿಜಯ ಯಾತ್ರೆಯಾದ ತರುವಾಯ ಕೃಷ್ಣಸ್ವಾಮಿಯ ದೇವಾಲಯವೆಂಬ ಹೊಸಗುಡಿಯನ್ನು ಕಟ್ಟಿಸಿದನು. ಅದೇ ವರುಷದಲ್ಲಿ ಹಜಾರರಾಮಸ್ವಾಮಿಯ ದೇವಾಲಯವೊಂದನ್ನು ಕಟ್ಟಿಸಿದನು. ದೇವಾಲಯಗಳಲ್ಲೆಲ್ಲಾ ಅತ್ಯುತ್ತಮವೆನಿಸಿಕೊಂಡ ಕೆತ್ತನೆಯಕೆಲಸದಲ್ಲಿ ಹೆಸರುಗೊಂಡು ಶಿಲ್ಪಶಾಸ್ತ್ರನೈಪುಣ್ಯವನ್ನೂ ಪ್ರಕಟಿಸುವ ವಿಠ್ಠಲಸ್ವಾಮಿಯ ದೇವಾಲಯವೊಂದನ್ನು ಕಟ್ಟಿಸಲಾರಂಭಿಸಿದನು ಈತನ ಈಚೆಗೆ ಬಂದ ದೊರೆಗಳು ಇದನ್ನು ಅಭಿವೃದ್ಧಿ ಮಾಡಿದರು ೧೫೨೮ ರಲ್ಲಿ ಉಗ್ರನರಸಿಂಹನೆಂದಂದು ವಿಗ್ರಹವನ್ನು ಶಿಲೆಯಲ್ಲಿ ಕೆತ್ತಿಸಿದನು ಈ ವಿಗ್ರಹವು ಬಲುದೊಡ್ಡದಾಗಿ ನೋಟಕರಿಗೆ ಭಯಂಕರವಾಗಿದೆ. ಈ ಪುಸ್ತಕದ ಉತ್ತರ ಭಾಗದಲ್ಲಿ ಈ ದೇವಾಲಯದ ಮತ್ತು ಇತರ ದೇವಾಲಯಗಳ ವಿಗ್ರಹಗಳು, ಬುರುಜುಗಳು ಪ್ರಾಕಾರ

ಗಳು ಮುಂತಾದವುಗಳ ಪ್ರಕೃತಸ್ಥಿತಿಯನ್ನು ವಾಚಕರು ಸುಲಭವಾಗಿ ತಿಳಿಯ ಬಹುದು. ಕೃಷ್ಣರಾಯರು ತಮ್ಮ ತಾಯಿಯಾದ ನಾಂಗಲಾಂಬಿಕೆಯ ಹೆಸರಿನಲ್ಲಿ ನಾಗಲಾ ಪುರವೆಂಬ ಸುಂದರವಾದ ಪಟ್ಟಣವನ್ನು ಕಟ್ಟಿಸಿದರು.

೧೫೨೦ ರಲ್ಲಿ ವಿಜಯನಗರವನ್ನು ನೋಡಲಿಕ್ಕೆ ಬಂದಿದ್ದ ಪೋರ್ಚು ಗೀಸ್ ನೊಬ್ಬನೂ, ಆತನ ಹಿಂದೆ ಬಂದಿದ್ದ ಪೆಯಿಕ್ ಎಂಬುವನೂ ವಿಜ ಯನಗರವನ್ನು ಹಲವಿಧವಾಗಿ ಬಣ್ಣಿಸಿರುವರು.

“ ಈತನರಾಜ್ಯದಲ್ಲಿ ಒಂಭೈನೂರು ಮೈಲುಗಳ ಸಮುದ್ರತೀರವಿ ರುವುದು. ಈ ರಾಜನು ಯುದ್ಧ ಮಾಡುವುದಕ್ಕಾಗಿ ಹತ್ತುಲಕ್ಷ ಸೈನ್ಯಗ ಳನ್ನು ಎಲ್ಲಿಬೇಕಾದರೆ ಅಲ್ಲಿ ಸಿದ್ಧವಾಗಿರುವಂತೆ ಮಾಡಿಕೊಂಡಿದ್ದಾನೆ. ಈ ಸೇನೆಯಲ್ಲಿ ಅಂಜುಪುರುಕಿಯು ಒಬ್ಬನಾದರೂ ಇಲ್ಲ. ಎಂಟುಸಾವಿರ ಆನೆ ಗಳನ್ನೂ ಐನೂರು ಕುದುರೆಗಳನ್ನೂ ಸಿದ್ಧವಾಗಿಟ್ಟುಕೊಂಡು, ನಗರದಲ್ಲಿನ ಹುಟ್ಟುವಳಿಯನ್ನು ಅದಕ್ಕಾಗಿ ವೆಚ್ಚಮಾಡುತ್ತಿರುವನು ” ಆಂಧ್ರ ಕವಿವ ರ್ಯರ ಹೃದಯ ಕಮಲಗಳಿಗೆ ಬಾಲಾರ್ಕನಾಗಿಯೂ ಸಂಸ್ಕೃತಾಂಧ್ರವಿದ್ಯಾ ಭೋಜನಾಗಿಯೂ, ಮನುಚರಿತ್ರಾದಿ ಉತ್ತಮ ಗ್ರಂಥಗಳಿಗೆ ಪತಿಯಾ ಗಿಯೂ, ತನ್ನ ಉದ್ದಂಡ ಭುಜಾದಂಡವು ಮೆರೆಯಲು ತುರುಷ್ಕರ ಪಾಲಿನ ಸಿಂಹಾವಲೋಕನನಾಗಿ ರಾಜ್ಯವನ್ನಾಳುವವನಾಗಿಯೂ, ಸಮರವಿಜಯನಾ ಗಿಯೂ, ಆಂಧ್ರದೇಶಕ್ಕೂ ಆಂಧ್ರರಾಜರಿಗೂ ಆಂಧ್ರಭಾಷೆಗೂ ಒಪ್ಪವಿಟ್ಟವ ನಾಗಿಯೂ ಇದ್ದ ಶ್ರೀಕೃಷ್ಣ ದೇವಮಹಾರಾಜನು ೧೫೩೦ ನೆಯ ಇಸವಿ ಯಲ್ಲಿಕೀರ್ತಿಶೇಷನಾದನು.

ಈ ಮಹನೀಯನು ಅಸ್ತಮಿಸಿದತರುವಾಯ ಈತನಿಗೆ ಪುತ್ರಸಂತಾನ ವಿಲ್ಲದ್ದರಿಂದ ಈತನ ಸಹೋದರನಾದ ಅಚ್ಯುತರಾಯನು ವಿಜಯನಗದ ಸಿಂಹಾಸನವನ್ನು ಹತ್ತಿ ೧೫೩೦ ರಿಂದ ೧೫೪೨ ರ ತನಕ ಆಳಿದನು, ದುರ್ಬಲ ನಾದ ಈತನು ವಿಷಯಾಸಕ್ತನಾಗಿ ಅಂತಃಪುರವನ್ನು ಬಿಟ್ಟು ಹೊರಕ್ಕೆ ಹೊರಡದೆಯೇ ಇದ್ದುದರಿಂದ ಪ್ರಜಾನುರಾಗಕ್ಕೆ ದೂರನಾಗಿದ್ದನು.

ಅಚ್ಯುತರಾಯನ ತರುವಾಯ ಇವನ ಸಹೋದರನಾದ ಸದಾಶಿವ ರಾಯನು ರಾಜ್ಯಾರೂಢನಾದನು. ಈತನೂ ಪರಾಕ್ರಮ ಹೀನನಾಗಿದ್ದುದರಿಂದ ಹೆಸರಿಗೆಮಾತ್ರ ಇವನು ರಾಜನಾಗಿದ್ದರೂ ಕೃಷ್ಣರಾಯನ ಅಳಿಯ ರಾಮರಾಜನೇ ರಾಜ್ಯಪರಿಪಾಲನೆ ಮಾಡುತಿದ್ದುದರಿಂದ ಕೊನೆಗೆ ಇವನೇ ಅರಸನಾದನು.

ಈ ರಾಮರಾಜನಿಗೂ ಬಹಮನೀ ಧೊರೆಗಳಿಗೂ ವಿರೋಧವು ಹೆಚ್ಚಿ ಹಲವು ಯುದ್ಧಗಳಾದುವು. ವಿಭಾಗಗಳಾಗಿ ಒಡೆದು ಹೋಗಿದ್ದ ಭಾಮಿನೀ ರಾಜ್ಯಗಳ ಪ್ರಭುಗಳೆಲ್ಲರೂ ಏಕೀಭವಿಸಿ ೧೫೬೫ ರಲ್ಲಿ ದಂಡೆತ್ತಿ ಬಂದರು. ಭಾಮಿನೀ ವಿಜಯನಗರ ರಾಜ್ಯಗಳಿಗೆ ತಾಳೀಕೋಟೆಯ ಹತ್ತಿರ ಘೋರ ವಾದ ಯುದ್ಧ ನಡೆದು ರಾಮರಾಜನು ಹತನಾದನು; ಹಿಂದುಗಳು ಸೋತು ಹೋದರು. ಹೀಗೆ ಸೋತುಹೋದ ಸೈನಿಕರು ವಿಜಯನಗರಕ್ಕೆ ಹೋಗಿ ತಮ್ಮ ಭಾರ್ಯಾ ಪುತ್ರಾದಿಗಳನ್ನೂ ಸಾಧ್ಯವಾದಷ್ಟು ಧನಧಾನ್ಯಗಳನ್ನು ತೆಗೆದುಕೊಂಡು ಪಟ್ಟಣವನ್ನು ಬಿಟ್ಟು ಓಡಿಹೋದರು. ಈ ಯುದ್ಧ ಜರುಗಿದ ಮೂರನೆಯದಿನ ಮಹಮ್ಮದೀಯ ಸೈನಿಕರು ಹೋಗಿ ವಿಜಯ ನಗರವನ್ನು ಧ್ವಂಸಮಾಡಿ ಘೋರಕೃತ್ಯಗಳನ್ನು ನಡಿಸಿ, ಕೊಳ್ಳೆ ಹೊಡೆದುಕೊಂಡು ಹೋದರು. ಸುತ್ತಮುತ್ತಲೂ ಇದ್ದವರು ಲೂಟಿ ಮಾಡಿಕೊಂಡು ಪಟ್ಟಣವನ್ನು ಹಾಳುಮಾಡಿದರು. ಉಳಿದ ಪುರವಾಸಿಗಳು ಆ ಊರುಬಿಟ್ಟು ತಮಗೆ ಅನುಕೂಲವಿದ್ದ ಕಡೆಗಳಿಗೆ ಓಡಿಹೋದರು. ವಿಜಯ ನಗರವು ವಿಜನಸ್ಥಾನ್ಯ ವಾಯಿತು.

ಆಹಾ! ಎಷ್ಟೋ ವೈಭವದಿಂದ ಜೊಳೆಯುತ್ತಿದ್ದ ಈಪಟ್ಟಣವು ಸ್ವಲ ಕಾಲದಲ್ಲಿಯೇ ಯಾವಗತಿಗೆ ಬಂತು ? "ಜಾತಸ್ಯಮರಣಂಧ್ರುವಂ" ಎಂಬ ವಾಕ್ಯವು ಸುಳ್ಳಲ್ಲ. ಮುಂದೆ ಈ ಶಿಥಿಲ ವಿಜಯನಗರದ ಪ್ರತಿಬಂದು ಸ್ಥಳ ವನ್ನೂ ಸಮಗ್ರವಾಗಿ ನೋಡೋಣ.

ವಿಜಯನಗರವನ್ನಾಳಿದ ಅರಸರ ಪಟ್ಟಿ (ಮೈಸೂರು ಗೆಜಟಿಯರ್.)

| | | | |
|---|---|---|---|
| ೧ನೇ ಹರಿಹರರಾಯ (ಹಕ್ಕರಾಯ) ಕ್ರಿ. ಶ. | | | ೧೩೩೬–೧೩೫೦ |
| ೧ ನೇ ಬುಕ್ಕರಾಯ | ... | ... | ೧೩೫೦–೧೩೭೯ |
| ೨ ನೇ ಹರಿಹರರಾಯ | ... | ... | ೧೩೭೯– ೧೪೦೫ |
| ೧ ನೇ ದೇವರಾಯ (೨ ನೇ ಬುಕ್ಕರಾಯ) | | | ೧೪೦೬– ೧೪೧೫ |
| ೧ ನೇ ವಿಜಯರಾಯ | ... | ... | ೧೪೧೬ — ೧೪೧೭ |
| ೨ ನೇ ದೇವರಾಯ | .. | ... | ೧೪೧೭ — ೧೪೪೬ |
| ಮಲ್ಲಿಕಾರ್ಜುನ (೨ ನೇ ವಿಜಯರಾಯ) | | | ೧೪೪೬– ೧೪೬೭ |
| ವಿರೂಪಾಕ್ಷರಾಯ | ... | ... | ೧೪೬೮–೧೪೭೯ |
| ಸಾಳುವ ನರಸಿಂಹರಾಯ | ... | ... | ೧೪೭೯–೧೪೮೭ |
| ಇಮ್ಮಡಿ ನರಸಿಂಹರಾಯ | ... | ... | ೧೪೮೮–೧೫೦೮ |
| ಕೃಷ್ಣರಾಯ | ... | ... | ೧೬೦೮–೧೫೨೯ |
| ಅಚ್ಯುತರಾಯ | ... | ... | ೧೫೩೦–೧೫೪೨ |
| ಸದಾಶಿವರಾಯ (ರಾಮರಾಜ ೧೫೬೫ ರ ತನಕ, ತಿರುಮಲರಾಯ) | ... | | ೧೫೬೬ ರಿಂದ ೧೫೭೪ |
| ೧ ನೇ ಶ್ರೀರಂಗರಾಯ | ... | ... | ೧೫೭೪–೧೫೮೫ |
| ೧ ನೇ ವೆಂಕಟಪತಿರಾಯ | ... | ... | ೧೫೮೫–೧೬೧೪ |
| ರಾಮದೇವ | ... | ... | ೧೬೧೫–೧೬೨೫ |
| ೨ ನೇ ವೆಂಕಟಪತಿರಾಯ | ... | ... | ೧೬೨೬ -೧೬೩೯ |
| ೨ ನೇ ಶ್ರೀರಂಗರಾಯ | ... | ... | ೧೬೩೯– ೧೬೬೪ |

ಈ ಕಾಲಮಾನದ ಪಟ್ಟೀಗೂ, ಈ ಪುಸ್ತಕದಲ್ಲಿನ ವಿವರಣೆಗೂ ಸ್ವಲ್ಪ ಹೆಚ್ಚು ಕಡಿಮೆ ಯಿರಬಹುದು. ಶಾಸನಗಳ ಆಧಾರದಿಂದ ವಿವರಿಸಿರುವ ಈ ಪಟ್ಟಿಯು ಬಹುಮಟ್ಟಿಗೆ ವಾಸ್ತವವೆಂದು ನಂಬಬಹುದು.

# ಜೀರ್ಣ ವಿಜಯನಗರಾದರ್ಶ

## ಉತ್ತರಭಾಗ.

ಈ ವಿಜಯನಗರವು ಪೂರ್ವಕಾಲದಲ್ಲಿ ವಿದೇಶೀಯರಿಂದ ಹೇಗೆ ಅಭಿವರ್ಣಿಸಲ್ಪಟ್ಟಿತೋ ಆ ವಿಷಯವನ್ನು ಸ್ವಲ್ಪಮಟ್ಟಿಗೆ ತಿಳಿಸಿ, ಪ್ರಕೃತದಲ್ಲಿ ನೋಟಕರಿಗೆ ಕಾಣಬರುವ ಸ್ಥಿತಿಯನ್ನು ತರುವಾಯ ಬರೆಯುವುದು ಉತ್ತಮವೆಂದು ತಿಳಿದು ಹಾಗೆಯೇ ತಿಳಿಸಲಾಗುವುದು:

ಕ್ರಿ. ಶ. ೧೪೨೦ ರಲ್ಲಿ ಈ ದೇಶಕ್ಕೆ ಬಂದು ವಿಜಯನಗರವನ್ನು ನೋಡಿದ "ನಿಕೋಲೋಡೆಯ ಕೊಂಟೆ" ಎಂಬ ಇಟಲೀ ದೇಶಿಯನೊಬ್ಬನು ಈ ನಗರದ ವೈಭವವನ್ನು ಲ್ಯಾಟಿನ್ ಭಾಷೆಯಲ್ಲಿ ಹೀಗೆ ಅಭಿವರ್ಣಿಸಿರುವನು

ವಿಜಯನಗರ ಎಂಬ ದೊಡ್ಡಪಟ್ಟಣವು ಬಹು ನಿಡಿದಾಗಿರುವ ಪರ್ವತಗಳ ಹತ್ತಿರ ಕಟ್ಟಲ್ಪಟ್ಟಿದೆ, ಆ ಪಟ್ಟಣದ ಸುತ್ತಳತೆ ಇಪ್ಪತ್ತು ಮೈಲುಗಳಿವೆ. ಆ ಪಟ್ಟಣದಲ್ಲಿ ಆಯುಧಗಳನ್ನು ಧರಿಸಲು ಸಮರ್ಥರಾದವರು ತೊಂಬತ್ತು ಸಾವಿರ ಭಟರಿದ್ದಾರೆ. ಮತ್ತು ಆ ಪ್ರಾಂತಗಳಲ್ಲಿ ವಾಸಮಾಡುತ್ತಿರುವ ಜನರು ತಮ್ಮ ಇಷ್ಟಾನುಸಾರ ಬಹು ಭಾರ್ಯೆಯರನ್ನು ಪರಿಗ್ರಹಿಸುತ್ತಿರುವರು, ಆವರು ಜೀವಯಾತ್ರೆಯನ್ನು ಮುಗಿಸಿದ ತಮ್ಮ ಪತಿಯೊಂದಿಗೆ ಸುಡಲ್ಪಡುತ್ತಿರುವರು, ಅವರ ದೊರೆಯು ಹಿಂದೂಸ್ಥಾನದಲ್ಲಿರುವ ಉಳಿದ ರಾಜರಿಗಿಂತ ತುಂಬಾ ಬಲಿಷ್ಠನು. ಆತನಿಗೆ ಹನ್ನೆರಡು ಸಾವಿರಮಂದಿ ಹೆಂಡತಿಯರಿರುವರು. ಅವರಲ್ಲಿ ನಾಲ್ಕು ಸಾವಿರಮಂದಿ ದೊರೆಯು ಎಲ್ಲಿಗೆ ಹೋಗುವನೋ ಅಲ್ಲಿಗೆ ಕಾಲುನಡೆಯಿಂದ ನಡೆದು ಬರುವರು ಇನ್ನು ನಾಲ್ಕು ಸಾವಿರ ಸ್ತ್ರೀಯರು ಸುಂದರಾಲಂಕಾರ ಭೂಷಿತೆಯರಾಗಿ ಕುದರೆಗಳಮೇಲೆ ಕೂತುಕೊಂಡು ಹಿಂದೆ ಬರುತ್ತಿರುವರು. ಎರಡು ಮೂರು ಸಾವಿರ

ಪತ್ನಿಯರು ಆತನು ಮೃತನಾದ ಅವನ ಶವದೊಂದಿಗೆ ಅಗ್ನಿಪ್ರವೇಶ ನಿಶ್ಚಯಿಸಿಕೊಂಡಿದ್ದಾರೆ.

ಸಂವತ್ಸರದಲ್ಲಿ ಒಂದಾನೊಂದುಕಾಲದಲ್ಲಿ ತಮ್ಮ ಮನೆದೇವತೆಯಾಗಿ ಪೂಜಿಸುವ ವಿಗ್ರಹವನ್ನು ಎರಡು ರಥಗಳ ಮಧ್ಯದಲ್ಲಿಟ್ಟು ಪಟ್ಟಣದ ಬೀದಿಗಳಲ್ಲಿ ಮೆರೆವಣಿಗೆ ಮಾಡುವರು. ಹರೆಯದ ಹುಡುಗಿಯರು ದಿವ್ಯವಸ್ತ್ರಾಲಂಕಾರಭೂಷಿತೆಯರಾಗಿ ದೇವರನ್ನು ಕುರಿತು ಹಾಡುಗಳನ್ನು ಹಾಡುತ್ತಾ ಹಿಂಬಾಲಿಸಿ ಬರುವರು. ಅನೇಕರು ಭಕ್ತ್ಯಾವೇಶಪರವಶರಾಗಿ ದೇವರ ರಥಚಕ್ರಗಳ ಕೆಳಗೆ ಬಿದ್ದು ಮೃತಿಹೊಂದಿದರೆ ಭಗವಂತನು ಮೋಕ್ಷವನ್ನು ಕೊಡುವನೆಂಬ ನಂಬುಗೆಯಿಂದ ಆಮೇರೆಗೆ ಮಾಡಿ ಪ್ರಾಣಗಳನ್ನು ಕಳೆದುಕೊಳ್ಳುವರು. ಮತ್ತೆ ಕೆಲವರು ಕೊರಳಿಗೆ ಉರುಲುಹಾಕಿಕೊಂಡು ರಥಕ್ಕೆ ಕಟ್ಟಿಕೊಂಡು ಬಾಧೆಪಡುತ್ತ ಪ್ರಾಣಗಳನ್ನು ಬಿಡುವರು. ಆ ಜನರು ವರ್ಷಕ್ಕೆ ಮೂರು ದೊಡ್ಡಹಬ್ಬಗಳನ್ನಾಚರಿಸುವರು. ಅವುಗಳಲ್ಲಿ ಒಂದು ಹಬ್ಬದದಿನ ಆಬಾಲವೃದ್ಧರಾದ ಸ್ತ್ರೀಪುರುಷರೂ ನದಿಗಳಲ್ಲಿಯೂ ಸಮುದ್ರಗಳಲ್ಲಿಯೂ ಸ್ನಾನಗಳನ್ನು ಮಾಡಿ, ನೂತನವಸ್ತ್ರಗಳನ್ನು ಧರಿಸಿ, ಶುಚಿವ್ರತರಾಗಿ ಭಜನೆಗಳನ್ನೂ, ನರ್ತನಗಳನ್ನೂ, ಔತನಗಳನ್ನೂ ಮಾಡುತ್ತ ಮೂರುರಾತ್ರಿಗಳನ್ನು ಕಳೆಯುವರು. ಮತ್ತೊಂದು ಹಬ್ಬದದಿನ ದೇವಾಲಯಗಳ ಒಳಗೂ, ಹೊರಗೂ, ದೀಪಾರಾಧನೆಗಳನ್ನು ಮಾಡುತ್ತಿರುವರು. ಮೂರನೇ ಹಬ್ಬವು ನವರಾತ್ರಿಯತನಕ ಜರುಗಿಸಲ್ಪಡುವುದು. ಆ ದಿನಗಳಲ್ಲಿ ಬೀದಿಗಳಲ್ಲಿ ಕಂಭಗಳನ್ನು ನಿಲ್ಲಿಸಿ ಅವುಗಳ ಕೊನೆಗೆ ವಿಧವಿಧ ವರ್ಣದ ವಸ್ತ್ರಗಳನ್ನೂ ಜರೀಬಟ್ಟೆಗಳನ್ನೂ ಕಟ್ಟುವರು. ಮತ್ತು ಒಂದೊಂದುದಿನ ಸಮಸ್ತ ಭೂತಗಳನ್ನೂ ಸಮದೃಷ್ಟಿಯಿಂದ ನೋಡುವ ಒಬ್ಬೊಬ್ಬ ಭಕ್ತವರ್ಯನನ್ನು ಆ ಕಂಭಗಳ ತುದಿಯಲ್ಲಿ ಕುಳ್ಳಿರಿಸಿ, ಅವನನ್ನು ನಾನಾ ವಿಧವಾದ ಹಣ್ಣುಗಳಿಂದ ಹೊಡೆಯುತ್ತಿರುವರು. ಆ ಪೆಟ್ಟುಗಳನ್ನು ಅವರು

ತುಂಬಾ ಸ್ಯೆರಣೆಯಿಂದ ಸಹಿಸಿಕೊಂಡಿರುವರು. ಈ ಮೂರು ಹಬ್ಬಗಳಲ್ಲದೆ ಮತ್ತೊಂದು ಹಬ್ಬವು ಮೂರು ರಾತ್ರಿಗಳು ಆಚರಿಸಲ್ಪಡುವುದು. ಆ ದಿನಗಳಲ್ಲಿ ವಸಂತವೆಂಬ ಹೆಸರಿನಿಂದ ಅರಿಸಿನದ ನೀರನ್ನು ರಾಜಮಾರ್ಗಗಳಲ್ಲಿ ನಡೆಯುವ ಜನರಮೇಲೆ ಚೆಲ್ಲುತ್ತಿರುವರು.

ಎಂದು ಬರೆದಿರುವನು. ಈ ನಿಕೋಲೋಡೆಯು ಕೊಂಟೆ ವಿದೇಶೀಯನಾದುದರಿಂದ ರಾಣಿಗಳ ಪರಿಚಾರಿಕೆಯರನ್ನು ಕೂಡ ರಾಜಭಾರ್ಯೆಯರೆಂದು ಊಹಿಸಿ ತಪ್ಪು ತಿಳವಳಿಕೆಯಿಂದ ಹನ್ನೆರಡುಸಾವಿರ ಪತ್ನಿಯರಿರುವರೆಂದು ಬರೆದಿರಬಹುದು. ಆತನು ತಿಳಿಸಿರುವ ನಾಲ್ಕು ಹಬ್ಬಗಳು ಯಾವುವೆಂದರೆ—(೧) ಯುಗಾದಿಹಬ್ಬ, (೨) ದೀವಳಿಗೆ, (೩) ಮಹಾನವಮಿಹಬ್ಬ, (೪) ಹೋಳಿಹಬ್ಬ ವಿಜಯನಗರವು ವಜ್ರಗಳಿಗೂ ಪ್ರಸಿದ್ಧವಾಗಿರುತ್ತದೆಂದು ಆತನು ತಿಳಿಸಿದ್ದಾನೆ.

ತರುವಾಯ ೧೪೪೩ ನೇ ವರುಷದಲ್ಲಿ "ಅಬ್ದುಲ್‌ರಜಾಕ್" ಎಂಬಾತನು ವಿಜಯನಗರವನ್ನು ನೋಡಲಿಕ್ಕೆ ಬಂದು ಆ ನಗರವನ್ನು ಹೀಗೆ ವರ್ಣಿಸಿರುವನು.

"೧೪೪೩ ನೇ ಇಸವಿ ಏಪ್ರಿಲ್ ತಿಂಗಳ ಕೊನೆಯಲ್ಲಿ ವಿಜಯನಗರವನ್ನು ಪ್ರವೇಶಿಸಿದೆವು ನಮ್ಮನ್ನು ಕರೆದೊಯ್ಯುವದಕ್ಕಾಗಿ ಪರಿವಾರ ಜನರು ನಮಗೆ ಎದುರಾಗಿ ಬಂದು ನಮ್ಮನ್ನೊಡಗೊಂಡು ಹೋದರು. ನಮ್ಮ ವಾಸಕ್ಕಾಗಿ ರಾಜನು ಸುಂದರವಾದ ಅರಮನೆಯನ್ನು ಕೊಡಿಸಿದನು. ಆತನ ರಾಷ್ಟ್ರವು ಕೃಷ್ಣಾನದಿಯಿಂದ ಕನ್ಯಾಕುಮಾರಿಯ ತನಕ ವ್ಯಾಪಿಸಿದೆ ಆ ರಾಜಧಾನಿಯಲ್ಲಿ ಪರ್ವತಗಳನ್ನು ಹೋಲುತ್ತಾ ವಿಕಾರವಾದ ಆಕಾರವನ್ನುಳ್ಳ ಸಾವಿರ ಆನೆಗಳಿರುವುವು. ಇವರಲ್ಲಿ ಹನ್ನೊಂದುಲಕ್ಷ ಸ್ಯೆನ್ಯವಿರುವುದು. ಈ ಕಾಲದಲ್ಲಿ ಹಿಂದೂಸ್ಥಾನದಲ್ಲಿ ಈತನಂತೆ ನಿರಂಕುಶಾಧಿಕಾರವುಳ್ಳ ಮತ್ತೊಬ್ಬ ರಾಜನು ಯಾವನೂ ಕಾಣಿಸಲಿಲ್ಲ. ವಿಜಯ

ನಗರದಂತಹ ದೊಡ್ಡ ಪಟ್ಟಣವನ್ನು ಇದುವರೆಗೆ ನಾನು ಎಲ್ಲಿಯೂ ಕಣ್ಣು ಗಳಿಂದ ನೋಡಲಿಲ್ಲ. ಪ್ರಪಂಚದಲ್ಲಿ ಆ ನಗರವನ್ನು ಹೋಲುವ ಮತ್ತೊಂದು ಪಟ್ಟಣವಿರುವುದೆಂಬುದನ್ನು ನನ್ನ ಕಿವಿಗಳಿಂದ ಇದುವರೆಗೆ ಕೇಳಲಿಲ್ಲ. ಸಪ್ತಪ್ರಾಕಾರಗಳಿಂದ ಸುತ್ತಲ್ಪಟ್ಟ ಏಳು ದುರ್ಗಗಳಿಂದ ಸುರಕ್ಷಿತವಾಗಿ ಆ ನಗರವು ಕಂಗೊಳಿಸುತ್ತಲಿದೆ. ಮೊದಲನೆಯ ದುರ್ಗದ ಸುತ್ತಲೂ ಎತ್ತರವಾಗಿರುವ ಕಲ್ಲುಗಳು ಕುದುರೆಗಳಾಗಲಿ, ಭಟರಾಗಲಿ ಪ್ರವೇಶಿಸುವುದಕ್ಕೆ ಅವಕಾಶವಿಲ್ಲದಹಾಗೆ ಭೂಮಿಯಲ್ಲಿ ಅರ್ಧದವರೆಗೆ ನೆಡಲ್ಪಟ್ಟಿದೆ. ಉತ್ತರ ಭಾಗದಲ್ಲಿರುವ ಏಳನೇ ದುರ್ಗವೇ ಮಹಾರಾಜರು ವಾಸಮಾಡುವ ಅಂತಃಪುರ ಮಂದಿರವಾಗಿದೆ. ಮೊದಲನೆಯ ದುರ್ಗದ ದಕ್ಷಿಣದ ಕೊನೆಯ ಮೊದಲುಗೊಂಡು ಉತ್ತರದ ಕೊನೆಯತನಕ ಇರುವ ದೂರ ಎಂಟುಮೈಲುಗಳಾಗಿವೆ. ಮೊದಲನೆಯ ದುರ್ಗ ಮೊದಲು ಮೂರನೆಯ ದುರ್ಗದತನಕ ಇರುವ ಪ್ರದೇಶವೆಲ್ಲವೂ ಸಾಗುವಳಿ ಮಾಡಲ್ಪಟ್ಟ ಹೊಲಗಳಿಂದಲೂ, ಗೃಹಗಳಿಂದಲೂ, ಉದ್ಯಾನವನಗಳಿಂದಲೂ, ಫಲವೃಕ್ಷಗಳಿಂದಲೂ ತುಂಬಿವೆ. ಮೂರನೆಯ ದುರ್ಗ ಮೊದಲುಗೊಂಡು, ಏಳನೆಯದುರ್ಗದತನಕ ಇರುವ ಪ್ರದೇಶವೆಲ್ಲವೂ ಅಸಂಖ್ಯಾತಗಳಾದ ಜನಸಂಘಗಳಿಂದ ತುಂಬಿ ಅಂಗಡಿಗಳಿಂದಲೊಪ್ಪುತ್ತಿವೆ ಅರಮನೆಗೆ ಸಮೀಪವಾಗಿ ನಾಲ್ಕು ಬೀದಿಗಳು ಒಂದಕ್ಕೊಂದು ಎದುರಾಗಿ ಸಾಲುಗೊಂಡಿವೆ. ಉತ್ತರದಿಕ್ಕಿನಲ್ಲಿ ರಾಜಮಂದಿರದದ್ವಾರಮಂಟಪವಿರುವುದು.

ಪ್ರತಿ ಬೀದಿಯಲ್ಲಿಯೂ ಅಂದವಾದ ತಳರುಗಳಿಂದ ಕೂಡಿದ ಉನ್ನತಗಳಾದ ಕಮಾನುಗಳು ನಿರ್ಮಿಸಲ್ಪಟ್ಟಿವೆ. ಎಲ್ಲವುಗಳಗಿಂತಲೂ, ರಾಯರ ಆಸ್ಥಾನಮಂಟಪವು ಅತ್ಯುನ್ನತವಾಗಿದೆ. ಬೀದಿಗಳು ವಿಶಾಲವಾಗಿಯೂ, ದೀರ್ಘವಾಗಿಯೂ, ರಮಣೀಯವಾಗಿಯೂ ಇವೆ. ಎಲ್ಲಾಕಡೆಯಲ್ಲಿಯೂ, ಗುಲಾಬಿಹೂವುಗಳು ಮಾರಲ್ಪಡುತ್ತವೆ. ಅಲ್ಲಿನ ಪ್ರಜೆಗಳು ಗುಲಾಬಿ

ಹೂವುಗಳನ್ನು ಆಹಾರಕ್ಕಿಂತಲೂ ಆವಶ್ಯಕವಾದವುಗಳೆಂದು ಭಾವಿಸುತ್ತಾರೆ. ಮುತ್ತುಗಳು, ಕೆಂಪುಗಳು, ನೀಲಗಳು, ವಜ್ರಗಳು ಮೊದಲಾದವು ಬಹಿರಂಗವಾಗಿ ಅಂಗಡಿಗಳಲ್ಲಿ ವಿಕ್ರಯಿಸಲ್ಪಡುತ್ತವೆ. ಈ ಪ್ರದೇಶಗಳಲ್ಲಿಯೂ ರಾಜಾಂತಃಪುರಪ್ರದೇಶಗಳಲ್ಲಿಯೂ, ನಯವಾಗಿ ಹಾಲುಗಾರೆ ಮಾಡಲ್ಪಟ್ಟ ಕಲ್ಲಿನ ಕೊಳಾಯಿಗಳ ಮೂಲಕ ಹಲವು ಕಾಲುವೆಗಳು ಜಲಪೂರ್ಣವಾಗಿ ಪ್ರವಹಿಸುತ್ತಲಿವೆ. ರಾಯರ ಅರಮನೆಯ ದ್ವಾರಮಂಟಪಕ್ಕೆ ಎಡಭಾಗದಲ್ಲಿ ರಾಜನಗರಿಯಂತೆ ಇರುವ " ದಿವಾನ್ ಖಾನಾ " ಎಂಬ ಮಂದಿರವಿದೆ. ಅದಕ್ಕೆ ಎದುರಾಗಿ ಒಂದು ಸಭಾಭವನವಿದೆ. ಆ ಸಭಾಭವನದ ಕೊನೆಯಲ್ಲಿ ಚೋಬ್‌ದಾರರು ನಿಂತುಕೊಂಡು ಇರುವರು. ಆ ಸಭಾಮಂಟಪದ ಮಧ್ಯಭಾಗದಲ್ಲಿ ದಿವಾನನು ಕುಳಿತುಕೊಳ್ಳುವ ಪೀಠವಿದೆ. ಅಲ್ಲಿ ದಿವಾನನು ಅಥವಾ ದಂಡನಾಯಕನು ಕುಳಿತುಕೊಂಡು ಪ್ರಜೆಗಳ ಬಿನ್ನಹಗಳನ್ನು ವಿಮರ್ಶಿಸುತ್ತಲಿರುವನು. ಆತನ ತೀರ್ಪಿನಮೇಲೆ ಅಪ್ಪೀಲೇ ಇಲ್ಲ. ಕೆಲಸವನ್ನು ಮುಗಿಸಿದಮೇಲೆ ದಂಡನಾಯಕನು ಸಪ್ತದ್ವಾರಗಳನ್ನು ದಾಂಟಿ ಅಂತಃಪುರವನ್ನು ಪ್ರವೇಶಿಸಿ, ರಾಜನಿಗೆ ಎಲ್ಲವನ್ನೂ ವಿಜ್ಞಾಪಿಸುವನು. ರಾಜಮಂದಿರದ ಹಿಂದುಗಡೆ ದಂಡನಾಯಕನ ಮನೆ ಇರುವುದು. ಆ ಮನೆಯ ಎಡಪಾರ್ಶ್ವದಲ್ಲಿ ನಾಣ್ಯಗಳನ್ನು ಮುದ್ರಿಸುವ ಟಂಕಸಾಲೆ ಇದೆ. ದಿವಾನಖಾನೆಗೆ ಎದುರಾಗಿ ಆನೆಗಳನ್ನು ಕಟ್ಟುವ ಕಟ್ಟಡ ಉಂಟು. ಅದರಲ್ಲಿ ಒಂದೊಂದು ಕೋಣೆಯಂತೆ ಏರ್ಪಾಡು ಮಾಡಲ್ಪಟ್ಟಿದೆ. ನಾಣ್ಯಗಳನ್ನು ಮುದ್ರಿಸುವ ಟಂಕಸಾಲೆಗೆ ಎದುರಾಗಿ ನಗರಪಾಲಕ (ಟವುನ್ ಮೇಜಸ್ಟ್ರೇಟ್) ನ ಮನೆ ಇರುವುದು. ಆತನ ಕೈಕೆಳಗೆ ಹನ್ನೆರಡುಸಾವಿರ ಭಟರಿದ್ದಾರೆ. ಟಂಕಸಾಲೆಯ ಹಿಂದುಗಡೆ ಹದಿನೈದು ಗಜಗಳ ಅಗಲವುಳ್ಳ ಒಂದು ಚಿಕ್ಕ ಬೀದಿ ಇರುವುದು. ಆ ಬೀದಿಯ ಎರಡುಕಡೆಗಳಲ್ಲಿಯೂ ಮನೆಗಳೂ ಮುಖ್ಯಮಂಟಪಗಳೂ ಕಟ್ಟಲ್ಪಟ್ಟವೆ, ಅವುಗಳ ಎದುರಿಗೆ

ಸೊಗಸಾದ ಕಲ್ಲುಗಳಿಂದ ಕಟ್ಟಲ್ಪಟ್ಟ ಉನ್ನತಾಸನಗಳಿರುವುವು. ಆಯಾ ಕೊಟ್ಟಡಿಗಳ ಗೋಡೆಗಳಮೇಲೆ ಸಿಂಹಗಳು, ಹುಲಿಗಳು, ಚಿರತೆಗಳು ಮೊದಲಾದ ಕ್ರೂರಮೃಗಗಳ ಆಕಾರಗಳು ಚಿತ್ರಿಸಲ್ಪಟ್ಟವೆ. ಅಲ್ಲಿರುವ ಉನ್ನತಾಸನಗಳು ರತ್ನಾಭರಣಾಲಂಕೃತೆಯರಾದ ವೇಶ್ಯಾಂಗನಾಮಣಿಯರಿಂದ ಅಧಿಷ್ಠಿಸಲ್ಪಟ್ಟವೆ. ಒಂದುದಿನ ನನ್ನನ್ನು ನೋಡುವುದಕ್ಕಾಗಿ ರಾಯರ ಅಂತಃಪುರದಿಂದ ಕಳುಹಿಸಲ್ಪಟ್ಟ ಕೆಲವರು ದೂತರು ಬಂದು ನನ್ನನ್ನು ಆ ದಿನವೇ ರಾಯರ ಆಸ್ಥಾನಕ್ಕೆ ಕರೆದೊಯ್ದರು. ರಾಜಕುಮಾರನು (ಪ್ರೌಢದೇವರಾಯನು) ಸಭಾಮಂಟಪದಲ್ಲಿ ರಾಜಕಾರ್ಯಧುರಂಧರರಾದ ಮಂತ್ರಿ ಶಿಖಾಮಣಿಗಳು ತನ್ನ ಸುತ್ತಲೂ ಓಲೈಸುತ್ತಿರಲು ರತ್ನಸಿಂಹಾಸನದಲ್ಲಿ ಮಂಡಿಸಿದ್ದನು. ಆತನಿಗೆ ಎರಡು ಕಡೆಗಳಲ್ಲಿಯೂ ಜನರಗುಂಪು ವೃತ್ತಾಕಾರವಾಗಿ ನಿಲ್ಲಿಸಲ್ಪಟ್ಟಿತು. ರಾಯರು ಪಟ್ಟುಪೀತಾಂಬರಗಳನ್ನು ಧರಿಸಿದ್ದರು. ತೆಳುವಾಗಿಯೂ, ನಿಡಿದಾಗಿಯೂ ಇರುವ ದೇಹವುಳ್ಳವನಾಗಿ ಕಪ್ಪು ಬಿಳುಪುಅಲ್ಲದ ಶ್ಯಾಮಲವರ್ಣವನ್ನು ಹೋಲುವ ರೂಪುಳ್ಳವನಾಗಿರುವನು. ಅವನ ಕೆನ್ನೆಗಳು ಮೃದುವಾಗಿಯೂ ತೆಳುವಾಗಿಯೂ ಇವೆ. ಆತನ ಗಡ್ಡದಲ್ಲಿ ಕೂದಲುಗಳಿಲ್ಲ. ಆತನ ದೃಷ್ಟಿಯು ಮನೋಹರವಾಗಿದೆ. ಆತನಿಗೆ ೨೦೦ ಮಂದಿ ಹೆಂಡತಿಯರೂ ಬಂಗಾರದವರೂ ಇರುವರೆಂದು ತಿಳಿಯಬಂತು. ಮಹಾನವಮಿಯ ಹಬ್ಬದಲ್ಲಿ ರಾಯನು (ಪ್ರೌಢದೇವರಾಯರು) ತನ್ನ ದೇಶದಲ್ಲಿದ್ದುಕೊಂಡು ತನಗೆ ಕಪ್ಪವನ್ನು ಕಟ್ಟುತ್ತಿರುವ ಸೇನಾಪತಿಗಳನ್ನೂ ಪ್ರಭುಗಳನ್ನೂ ತನ್ನ ಆಸ್ಥಾನಕ್ಕೆ ಬರಮಾಡಿಕೊಂಡು ದರ್ಬಾರು ನಡಿಸುತ್ತಾನೆ. ಅವರು ಬಹಳ ಮನೋಹರಗಳಾದ ಹೌದಾಗಳಿಂದ ಅಲಂಕರಿಸಲ್ಪಟ್ಟ ಸಾವಿರ ಆನೆಗಳನ್ನು ತಮ್ಮ ಸಂಗಡ ತರುತ್ತಾರೆ.

ಆದಿನ ಪಟ್ಟಣವೆಲ್ಲವೂ ಬಹು ಶೃಂಗಾರವಾಗಿ ಅಲಂಕರಿಸಲ್ಪಡುತ್ತದೆ. ಆನೆಗಳೆಲ್ಲವೂ ಒಂದುಕಡೆ ಸೇರಿ ಸಮುದ್ರದ ಅಲೆಗಳಂತೆ ಕಾಣಬ

ರುತ್ತಿರುವುವು. ಅಲ್ಲಿ ನಾಲ್ಕೈದು ಅಂತರಗಳನ್ನುಳ್ಳ ಚಪ್ಪರ (ಪಂದಲ') ಗಳು ನಿರ್ಮಿಸಲ್ಪಡುತ್ತವೆ. ಈ ಮೈದಾನಕ್ಕೆ ದೂರವಾಗಿ ಒಂಭತ್ತು ಚಪ್ಪರಗಳಿಂದ ಕೂಡಿದ ಒಂದು ಅರಮನೆಯು ನಿರ್ಮಿಸಲ್ಪಟ್ಟಿದೆ. ಅಂತಃಪುರಕ್ಕೂ ಚಪ್ಪರಗಳಿಗೂ ನಡುವೆ ನಾಟಕದವರೂ ಹಾಡುವವರೂ ಕಥಾಪುರಾಣಗಳನ್ನು ಹೇಳುವವರೂ ಇರುತ್ತಾರೆ. ರಾಜನ ಎದುರಿಗೆ ಇರುವ ತೆರೆಗೆ ಆಚೆ ಯೌವನಸ್ತ್ರೀಯರು ಸುಂದರವಸ್ತ್ರಾಲಂಕಾರಭೂಷಿತೆಯರಾಗಿ ನಾಟ್ಯವನ್ನಾಡುತ್ತಿರುವರು. ಮೂರು ದಿನಗಳು ಈ ವಿಧವಾಗಿ ಆಟಗಳಿಂದಲೂ, ಹಾಡುಗಳಿಂದಲೂ, ವಿನೋದಗಳಿಂದಲೂ ಕಳೆಯಲ್ಪಟ್ಟವು. ಮೂರನೆಯ ದಿನ ನನಗೆ ಮರಳಿ ಮರಳಿ ಮಹಾರಾಜನ ದರ್ಶನವು ಲಭಿಸಿತು. ತುಂಬ ವಿಶಾಲವಾದ ಸಿಂಹಾಸನವು ಸುವರ್ಣದಿಂದ ಮಾಡಲ್ಪಟ್ಟ ಅಮೌಲ್ಯಗಳಾದ ರತ್ನಗಳು ಕೆತ್ತಲ್ಪಟ್ಟವೆ, ಸಿಂಹಾಸನದ ಎದುರಿಗೆ ಚದರವಾಗಿರುವ ತಿವಾಸಿಯೊಂದಿದೆ. ಅದರ ಕೊನೆಗಳಲ್ಲಿ ಮೂರುವರಸೆಗಳಾಗಿ ಮುತ್ತುಗಳು ಕಟ್ಟಲ್ಪಟ್ಟವೆ. ರಾಜನು ಆ ಮೂರು ದಿನಗಳೂ ಆ ತಿವಾಸಿ (ಮೆತ್ತೆ) ಯಮೇಲೆ ಕುಳಿತುಕೊಂಡಿರುವನು. ಆ ಮಂದಿರದ ಗೋಡೆಗಳೂ, ಮೇಲು ಹೊದಿಕೆಯೂ, ಮಣಿಗಳಿಂದ ಹೊದಿಸಲ್ಪಟ್ಟ ಚಿನ್ನದ ಹಲಗೆಗಳಿಂದ ಆವರಿಸಲ್ಪಟ್ಟಿದೆ. ಆ ಹಲಗೆಗಳು ಬಂಗಾರದ ಮೊಳೆಗಳಿಂದ ಬಿಗಿಸಲ್ಪಟ್ಟವೆ."

ಈರೀತಿಯಾಗಿ ವಿದೇಶೀಯರಿಂದ ವರ್ಣಿಸಲ್ಪಟ್ಟ ವಿಜಯನಗರವು ೧೫-೧೬ ನೆಯ ಶತಮಾನಗಳಲ್ಲಿ ತುಂಬಾ ಔನ್ನತ್ಯವನ್ನು ಹೊಂದಿತ್ತೆಂದು ಹೇಳುವುದಕ್ಕೆ ಸ್ವಲ್ಪವಾದರೂ ಸಂಶಯಗೊಳ್ಳಬಹುದೆ ?

ಪ್ರಾಚೀನಕಾಲದಲ್ಲಿ ಇಷ್ಟು ಪ್ರಾಭವ, ವೈಭವಗಳಿಂದ ಒಪ್ಪುತ್ತಿದ್ದು ಈಗ "ಹಂಪೆಯ ವಿನಾಶ" ಎಂಬ ಪ್ರಸಿದ್ಧಿಯಿಂದ ಅನ್ಯದೇಶೀಯರನ್ನು ಕೂಡ ಆಕರ್ಷಿಸುವಂತಹ ಜೀರ್ಣವಿಜಯನಗರವನ್ನೂ ಅದರಲ್ಲಿನ ಪ್ರಕೃತಸ್ಥಿತಿಯನ್ನೂ ಕುರಿತು ನಾವು ಈಗ ಮುಖ್ಯವಾಗಿ ತಿಳಿದು

ಕೊಳ್ಳಬೇಕಾಗಿದೆ. ಅಲ್ಲಿ ಈಗ ಪೂರ್ವಕಾಲದಲ್ಲಿದ್ದ ಕಟ್ಟಡ ಮುಂತಾದವುಗಳು ಮೊದಲಿನಂತೆ ಇಲ್ಲವಾದರೂ ಪೂರ್ವಚಾತುರ್ಯವನ್ನು ತೋರಿಸುವ ಸಪ್ತಪ್ರಾಕಾರಗಳೂ ಅನೇಕ ದೇವಾಲಯುಗಳೂ ಗಣನಾತೀತಗಳಾದ ಮಂದಿರಗಳೂ ಶಿಥಿಲಗಳಾಗಿ ಬಿದ್ದಿವೆ.

ಈಗಿನ ದರೋಜ, ಮಲಪನಗುಡಿ, ಕಮಲಾಪುರ, ಹಂಪೆ ಮೊದಲಾದುವುಗಳೆಲ್ಲವೂ ಪೂರ್ವದ ವಿಜಯನಗರದೊಳಗಿನವೇ, ಹೊಸಪೇಟೆಗೆ ಸಮೀಪದಲ್ಲಿಯೇ ಆಗಿನ ನಾಶನಸ್ಥಳಗಳು ಕಾಣಬರುವುವು. ಇದು ಬಳ್ಳಾರಿಗೆ ೩೬ ಮೈಲುಗಳ ದೂರದಲ್ಲಿದೆ ಇಲ್ಲಿಂದ (ಹೊಸಪೇಟೆಯಿಂ) ಈಶಾನ್ಯದಿಕ್ಕಿಗೆ ಹೋಗುವ ಮಾರ್ಗವನ್ನು ಹಿಡಿದು ಒಂದೂವರೆಮೈಲು ದೂರ ನಡೆದರೆ ಮಾರ್ಗಕ್ಕೆ ಬಲಗಡೆ ಒಂದು ದೊಡ್ಡ ದೇವಾಲಯವು ಕಾಣಬರುವುದು

ಇದು ಕೃಷ್ಣದೇವರಾಯರಿಂದ ಕಟ್ಟಿಸಲ್ಪಟ್ಟ ಅನಂತಶಯನದೇವಾಲಯ. ಇದರ ಸಿಂಹದ್ವಾರವು ಉತ್ತರಾಭಿಮುಖವಾಗಿದೆ. ಇದರ ಪ್ರಾಕಾರದ ಗೋಡೆ ಶಿಥಿಲವಾಗಿ ಆ ಶಿಲೆಗಳು ಅಲ್ಲಿ ವಾಸಮಾಡುವ ಪ್ರಜೆಗಳ ಮನೆಗಳನ್ನಲಂಕರಿಸಿವೆ. ಈ ದೇವಾಲಯವು ಸ್ವಲ್ಪಮಟ್ಟಿಗೆ ಶಿಥಿಲರೂಪವನ್ನು ಹೊಂದಿದ್ದರೂ ಬ್ರಿಟಿಷ್ ಸರ್ಕಾರದವರು ಅಲ್ಲಲ್ಲಿ ಸ್ವಲ್ಪ ಕಾಮಗಾರಿ ಮಾಡಿಸಿದ್ದಾರೆ. ಈ ಆಲಯವು ವಿಗ್ರಹಶೂನ್ಯವಾಗಿದೆ ಇಲ್ಲಿನ ವಿಗ್ರಹವು ಈಗ ಹೂವಿನಹಡಗಲಿ ತಾಲ್ಲೂಕು ಛೋಳಲುಗ್ರಾಮದಲ್ಲಿರುತ್ತದೆಂದು ಬ್ರಹ್ಮಶ್ರೀ ಚಿತ್ತವಾಡಿ ಹನುಮಂತಗೌಡರವರು ಬರೆದಿರುವರು. ಈ ದೇವಾಲಯದಿಂದ ರಾಜಮಂದಿರದ ಬಾಗಿಲತನಕ ದೊಡ್ಡಮಾರ್ಗವೂ, ಅದರ ಉಭಯಪಾರ್ಶ್ವಗಳಲ್ಲಿಯೂ ವೃಕ್ಷಗಳೂ, ಅಂಗಡಿಗಳೂ ಇದ್ದುವೆಂದು ಚರಿತ್ರೆಯಲ್ಲಿ ಹೇಳಲ್ಪಟ್ಟಿರುವುದೇ ಹೊರತು ಅದರ ಗುರುತುಗಳು ಈಗ ಯಾವುವೂ ಕಾಣಬಾರವು. ಆ ಕಟ್ಟಡಗಳೆಲ್ಲವೂ ನೆಲಸಮನಾಗಿ ಹೋಗಿರಬಹುದು. ಆದರೂ ದಾರಿಯಲ್ಲಿ ಅಲ್ಲಲ್ಲಿ ವಲಯಾಕಾರವಾಗಿ ಗೋಪುರ

ಗಳಿಂದ ಕೂಡಿದ ಕೆಲವು ಹಾಳುಬಿದ್ದ ಗುಡಿಗಳಿವೆ. ಆ ಗುಡಿಗಳನ್ನು ದೂರ ದಿಂದಲೇ ನೋಡಬಹುದು. ಈ ಅನಂತಶಯನಾಲಯದ ಆವರಣದಲ್ಲಿ ಕೆಲ ವರು ಗೊಲ್ಲರು ಒಂದು ಹಳ್ಳಿಯನ್ನು ಮಾಡಿಕೊಂಡು ಅದಕ್ಕೆ "ಅಂದನ ಗುಡಿ" ಎಂದು ಹೆಸರಿಟ್ಟುಕೊಂಡು ಅಲ್ಲಿ ವಾಸಮಾಡಿಕೊಂಡಿದ್ದಾರೆ.

ಇದೇ ಮಾರ್ಗವಾಗಿ ಪೂರ್ವದಿಕ್ಕಿಗೆ ಇನ್ನು ಸ್ವಲ್ಪ ದೂರ ಹೋದರೆ ಹೊಸಪೇಟೆಗೆ ಮೂರೂವರೆ ಮೈಲು ದೂರದಲ್ಲಿ "ಮಲ್ಪನಗುಡಿ" ಎಂಬ ಒಂದು ಗ್ರಾಮವು ದಾರಿಯಹತ್ತಿರವೇ ಸಿಕ್ಕುವುದು ಈ ಊರು ಸೇರು ವುದಕ್ಕೆ ಮುಂಚೆಯೇ ಒಂದು ಫರ್ಲಾಂಗ್ ಈಚೆಗೆ ಮಾರ್ಗದ ಎಡಗಡೆ ಇರುವ ಹೊಲದಲ್ಲಿ ಗುಂಡಾಗಿರುವ ಒಂದು ಭಾವಿ ಇರುವುದು. ಇದು ಇಳಿ ಯುವ ಭಾವಿ. ಇದರ ಒಳಭಾಗದ ಸುತ್ತಲೂ ಕೈ ಶಾಲೆ ಇದ್ದು ಎಂಟು ಕಮಾನುಗಳುಳ್ಳದಾಗಿ ಕಟ್ಟಲ್ಪಟ್ಟಿದೆ. ಈ ಕೈಸಾಲೆಯೊಳಕ್ಕೆ ಹೋಗುವು ದಕ್ಕೆ ಹಂತಗಳಿರುವುವು. ಇದು ಪುರಾತನಕಟ್ಟಡವಾದರೂ ನೋಡುತ್ತಾ ನೋಡುತ್ತಾ ಕಣ್ಣುಗಳಿಗೆ ಸೊಬಗನ್ನು ಬೀರುವುದು. ಇದರಲ್ಲಿನ ನೀರು ಬಹುಶೀತಲವಾಗಿರುವುದರಿಂದ ದೇಹದ ಬಳಲಿಕೆಯನ್ನು ತೀರಿಸಿ ಆರೋಗ್ಯ ವನ್ನುಂಟುಮಾಡತಕ್ಕದ್ದಾಗಿರುವುದು.

ಮಲ್ಪನಗುಡಿ ಗ್ರಾಮಕ್ಕೆ ಪೂರ್ವದಿಕ್ಕಿನಲ್ಲಿ ಒಂದು ಹೊಲದಲ್ಲಿ ಮಲಗಿಸಿರುವ ಒಂದು ಕಲ್ಲಿನಮೇಲೆ ವಿಜಯನಗರದ ಅರಸನಾದ ದೇವರಾ ಯನು ೧೪೧೦ ನೇ ಇಸವಿಯಲ್ಲಿ ದಾನಮಾಡಿದ ಶಾಸನವೊಂದಿರುವುದೆಂದು ಬರೆಯಲ್ಪಟ್ಟಿದೆ, ಆದರೆ ಎಲ್ಲಲ್ಲಿ ನೋಡಿದರೂ ಇದು ಕಾಣಬಂದಿಲ್ಲವಾ ದುದರಿಂದ ನೆಲದಲ್ಲಿ ಹೂತುಹೋಗಿರಬಹುದೆಂದು ಸಂಶಯವುಂಟಾಗಿರು ವುದು. ಮುಂದೆ ಯಾತ್ರಿಕರಿಗೆ ದೊರೆತರೆ ಅದರ ನಿಜವಾದ ಸ್ಥಾನವನ್ನು ತಿಳಿಯಬಹುದು.

ಮಲ್ಪನ ಗುಡಿಯನ್ನು ದಾಟಿ ಮತ್ತೆರಡು ಮೈಲುಗಳ ದೂರ ಹೋ ದರೆ ಅಲ್ಲಿ ಧಾರಿಯು ಎರಡಾಗಿ ಸೀಳಿ ಒಂದು ಮೂಢಲಿಗೆ ಕಮಲಾಪುರಕ್ಕೆ

ಮತ್ತೊಂದು ಈಶಾನ್ಯಕ್ಕೆ ಹಂಪೆಗೂ ಹೋಗುವುದು. ಇಲ್ಲಿ ಬಂದು ಸಾಯುರು ಕಟ್ಟೆಯೂ, ಗ್ರಾಮದ ಮಾರ್ಗಗಳನ್ನು ತಿಳಿಸುವ ಮರದ ಕೈ ಕಂಭವೂ ಇರುವುವು. ಪೂರ್ವದಿಕ್ಕಿನ ದಾರಿಯಲ್ಲಿಯೇ ಹೋದರೆ ಕಮಲಾಪುರವನ್ನು ಸೇರಬಹುದು.

· ಕಮಲಾಪ್ಪುರದಿಂದ ಹೊಸಪೇಟೆಗೆ ಏಳು ಮೈಲಿಗಳ ದೂರವಿರುವುದು. ಈ ಕಮಲಾಪುರದಲ್ಲಿ ಪ್ರಯಾಣಿಕರು ಇಳಿಯುವುದಕ್ಕೆ ಬಂದು ಸತ್ರ ವಿರುವುದು. ಇದು ಪೂರ್ವಕಾಲದಲ್ಲಿ ಬಂದು ಪ್ರಾಚೀನ ಮಂಟಪವಾಗಿತ್ತು. ಬಳ್ಳಾರಿಯಲ್ಲಿ ಕಲೆಕ್ಟರಾಗಿ ಇದ್ದ ಮಾನ್ರೊ ಸಾಹೇಬರು ಈ ಮಂಟಪವನ್ನು ಸತ್ರವಾಗಿ ಮಾರ್ಪಡಿಸಿ ಲೋಕಲ್ ಬೋರ್ಡಿನವರ ವಶಕ್ಕೆ ಕೊಟ್ಟರು. ಮತ್ತು ಈ ಗ್ರಾಮದಲ್ಲಿ ಬಂದು ಪೋಸ್ಟ್ ಆಫೀಸೂ, ಬಂದು ಪೋಲೀಸ್ ಸ್ಟೇಷನೂ ಇರುವುವು. ಇಲ್ಲಿಯ ಭಾಷೆ ಕನಡ. ಜೀರ್ಣವಿಜಯನಗರವನ್ನು ನೋಡಲಪೇಕ್ಷಿಸುವವರು ಈ ಸತ್ರವನ್ನು ಬಿಡದಿಮನೆಯಾಗಿ ಮಾಡಿಕೊಂಡರೆ ಮುಂದೆ ಹೇಳುವ ನಾಶನಸ್ಥಳಗಳನ್ನು ನೋಡಲು ಅನುಕೂಲವಾಗಿರುವುದು.

ಸತ್ರದಿಂದ ಉತ್ತರದಿಕ್ಕಿಗೆ ಊರಹೊರಗೆ ಹೊರಟು ಅಲ್ಲಿಂದ ಪೂರ್ವದಿಕ್ಕಿಗೆ ಸುಮಾರು ಬಂದುವರೆಮೈಲು ದೂರ ಹೋದರೆ ಅಲ್ಲಿ ಪಟ್ಟಾಭಿರಾಮಸ್ವಾಮಿಯ ದೇವಾಲಯವು ಕಾಣಬರುವುದು. ಇದರ ಸಿಂಹದ್ವಾರವು ಪೂರ್ವಾಭಿಮುಖವಾಗಿರುವುದು. ಈ ದೇವಾಲಯವು ಬಹು ದೊಡ್ಡದಾಗಿಯೂ, ಉಳಿದ ದೇವಾಲಯಗಳಂತೆ ಶಿಲಾನಿರ್ಮಿತಪ್ರಾಕಾರವುಳ್ಳದ್ದಾಗಿಯೂ, ವಿಗ್ರಹಹೀನವಾಗಿಯೂ ಇದೆ. ಪ್ರಾಕಾರದೊಳಗೆ ಆಳವಾಗಿ ನೀರಿಲ್ಲದ ಹಾಳುಬಾವಿಯೊಂದಿರುವುದು. ಗರ್ಭಗೃಹಕ್ಕೆ ದಕ್ಷಿಣದಲ್ಲಿ ಬಂದು ಮಂಟಪವಿರುವುದು. ಇದರಲ್ಲಿ ಬಂದೊಂದು ಸ್ತಂಭವೂ 10—12 ಚಿಕ್ಕ ಸ್ತಂಭಗಳು ಬಂದೇ ಶಿಲೆಯಲ್ಲಿ ಕೆತ್ತಲ್ಪಟ್ಟಿವೆ. ಈ ಆಲ

ಯದ ಸಿಂಹದ್ವಾರದ ಮೇಲೆ ಸಾಮಾನ್ಯ ಮನುಷ್ಯನು ಕಲ್ಲೆಸೆಯಲಾರದಷ್ಟು ಉನ್ನತವಾಗಿರುವ ಗೋಪುರವೊಂದಿರುವುದು. ಇದು ಸ್ವಲ್ಪಮಟ್ಟಿಗೆ ಶಿಥಿಲವಾಗಿರುವುದು.

ಈ ಗುಡಿಗೆ ಸ್ವಲ್ಪ ದೂರದಲ್ಲಿ ಮಾರ್ಗಕ್ಕೆ ಎಡಗಡೆ ಸುತ್ತಲೂ ಮಂಟಪಗಳುಳ್ಳ ಒಂದು ಕೊಳವಿರುವುದು. ಈಗ ಇದರಲ್ಲಿ ನೀರು ಇಲ್ಲ. ಪೂರ್ವಕಾಲದಲ್ಲಿ ಕಮಲಾಪುರದ ಹತ್ತಿರವಿರುವ ಕೆರೆಯಿಂದ ನೀರನ್ನು ತರುತ್ತಿರಬಹುದು. ಇನ್ನೂ ಪೂರ್ವದಿಕ್ಕಿಗೆ ಹೋದರೆ ಹಾಳುಬಿದ್ದಿರುವ ಗುಡಿಗಳು ಅನೇಕವಾಗಿರುವುವು. ಅವುಗಳೆಲ್ಲವನ್ನೂ ನೋಡಿದಮೇಲೆ ಕಮಲಾಪುರದಿಂದ ಬಿಡದಿಗೆ ಹಿಂದಿರುಗಬಹುದು.

ಸತ್ರದಿಂದ ಉತ್ತರಕ್ಕೆ ಡಿ, ಪಿ, ಡಬ್ಲ್ಯೂ ಇನ್ಸ್ಪೆಕ್ಟರ್ ಬಂಗಲೆಯು ಇದೆ. ಮುಂದುಗಡೆ ಹೋಗುವ ಸೊಟ್ಟೆಯಾದ ಮಾರ್ಗದ ಮೂಲಕ "ಹಾಳು ಪಟ್ಟಣ" ಎಂದು ಈಗ ಕರೆಯಲ್ಪಡುವ ನಗರಮಧ್ಯಕ್ಕೆ ಹೋಗಬಹುದು.

ಮಾರ್ಗಕ್ಕೆ ಬಲಪಾರ್ಶ್ವದಲ್ಲಿ ಸುಮಾರು 200 ಗಜಗಳ ದೂರದಲ್ಲಿ ಚಂದ್ರಶೇಖರಮಠವೆಂಬ ಒಂದು ಆಲಯವನ್ನು ಕಾಣಲಾಗುವುದು. ಇದರ ಸಿಂಹದ್ವಾರವು ಪೂರ್ವಾಭಿಮುಖವಾಗಿರುವುದು ಸುತ್ತಲೂ ಇರುವ ಪ್ರಾಕಾರದ ಗೋಡೆ ಶಿಥಿಲರೂಪವನ್ನು ಹೊಂದಿದೆ ; ಗರ್ಭಗೃಹಕ್ಕೆ ದಕ್ಷಿಣ ಕಡೆ ಪ್ರಾಕಾರದ ಎರಡು ಮೂಲೆಗಳಲ್ಲಿಯೂ, ಶಿಥಿಲಗಳಾದ ಎರಡು ಮಂಟಪಗಳಿರುವುವು. ಸಿಂಹದ್ವಾರದ ಗೋಪುರವಿದ್ದರೂ ಅದು ಅಷ್ಟು ಎತ್ತರವಾಗಿಲ್ಲ. ಇದರಲ್ಲಿ ವಿಶೇಷವಾದುದಾಗಲಿ ರಮ್ಯವಾದುದಾಗಲೀ ಯಾವುದೂ ಇಲ್ಲದುದರಿಂದ ಪರರಾಜರು ಅದನ್ನು ಹಾಳುಮಾಡದೆ ಬಿಟ್ಟುಬಿಟ್ಟರು. ಆದಕಾರಣ ಇದು ಯಥಾಸ್ಥಿತಿಯಲ್ಲಿದೆ. ಇದೂ ವಿಗ್ರಹಹೀನವಾದುದು

ಇಲ್ಲಿಂದ ಮೊದಲಿನ ಮಾರ್ಗದ ಮೂಲಕ ಪಶ್ಚಿಮಾಭಿಮುಖವಾಗಿ ಸ್ವಲ್ಪದೂರ ಹೋದರೆ ಅಂತಃಪುರದ ಸ್ನಾನಗೃಹವನ್ನು ನೋಡಬಹುದು.

ಇದರ ಸುತ್ತಲೂ ಒಳಭಾಗದಲ್ಲಿ ಪ್ರತಿಒಂದು ಕಡೆಗೂ ಐದೈದರಂತೆ ಕಮಾನುಗಳುಳ್ಳ ಕೈಸಾಲೆಗಳುಳ್ಳದಾಗಿ, ಮಧ್ಯಭಾಗದಲ್ಲಿ ಸುಮಾರು ಏಳು ಅಡಿಗಳ ಆಳವೂ, ಸ್ವಲ್ಪಹೆಚ್ಚು ಕಡಿಮೆ 30 ಅಡಿಗಳ ಉದ್ದವೂ, ಅಷ್ಟೇಅಗಲವೂ ಉಳ್ಳದಾಗಿ ಸುತ್ತಲೂ ತಳಭಾಗದಲ್ಲಿಯೂ ಗಚ್ಚಿಹಾಕಲ್ಪಟ್ಟಿರುವ ಚಚ್ಚೌಕವಾದ ಹಳ್ಳವೊಂದಿರುವುದು. ಈ ಹಳ್ಳದೊಳಕ್ಕೆ ಇಳಿಯುವುದಕ್ಕೆ ಉತ್ತರದಿಕ್ಕಿನಲ್ಲಿ ಮೆಟ್ಟಲುಗಳಿರುವುವು. ತಿಟ್ಟನಮೇಲೆ ತುಂಗಭದ್ರಾನದಿಯಿಂದ ನೀರನ್ನು ತೆಗೆದುಕೊಂಡುಬರುವ "ದೋರಿ" ಎಂಬ ಕಾಲುವೆಯು ಈ ಭವನಕ್ಕೆ ಪೂರ್ವದಿಕ್ಕಿನಲ್ಲಿದೆ. ಆ ಕಾಲುವೆ ಅಲ್ಲಲ್ಲಿ ಶಿಥಿಲವಾಗಿದೆ. ಆ ಮಂದಿರಕ್ಕೆ ನಾಲ್ಕು ದಿಕ್ಕುಗಳಲ್ಲಿಯೂ ನಾಲ್ಕು ದ್ವಾರಗಳಿರುವುವು.

ಈ ಸ್ನಾನಗೃಹದ ಹತ್ತಿರ ತ್ರಿಭುಜಾಕಾರವಾಗಿ ಎರಡು ಮಾರ್ಗಗಳು ಬೇರೆಯುತ್ತವೆ. ಅವುಗಳಲ್ಲಿ ಒಂದು ಮೊದಲು ಸ್ವಲ್ಪ ಮಟ್ಟಿಗೆ ಪಶ್ಚಿಮಕ್ಕೂ, ತರುವಾಯ ಉತ್ತರಕ್ಕೂ ತಿರುಗಿ ಹಂಪೆಯೊಳಗಣ ಮುಖ್ಯ ದೇವಾಲಯವಾದ ಶ್ರೀವಿರೂಪಾಕ್ಷ ದೇವಾಲಯಕ್ಕೆ ಹೋಗುವುದು. ಎರಡನೆಯದು ಪಶ್ಚಿಮೋತ್ತರವಾಗಿ ಹೊರಡುವುದು.

ಎರಡನೆಯ ಮಾರ್ಗದಮೂಲಕ ಸುಮಾರು ಎರಡು ಫರ್ಲಾಂಗುಗಳ ದೂರ ಹೋದರೆ ದಾರಿಗೆ ಎಡಪಾರ್ಶ್ವದಲ್ಲಿ ಸುಮಾರು ಎಂಟು ಅಡಿಗಳ ಆಳವೂ ಅರ್ಧ ಫರ್ಲಾಂಗಿನ ಉದ್ದವೂ ಮೂವತ್ತು ಗಜಗಳ ಅಗಲವೂ ಉಳ್ಳದ್ದಾಗಿ, ಆಯಾಕಾರವಾಗಿ ಮೊದಲು ನೋಡಲ್ಪಟ್ಟ ಸ್ನಾನಗೃಹದ ಹಳ್ಳದಂತೆಯೇ ಗಚ್ಚಿಮಾಡಲ್ಪಟ್ಟ ಹಳ್ಳ ಒಂದಿರುವುದು. ತುಂಗಭದ್ರಾನದಿಯಿಂದ ನೀರನ್ನು ತೆಗೆದುಕೊಂಡು ಬರುವ "ಮೋರಿ" ಎಂಬ ಕಾಲುವೆಯು ಈ ಹಳ್ಳಕ್ಕೆ ಅನತಿದೂರದಲ್ಲಿಯೇ ಭೂಮಟ್ಟಕ್ಕೆ ಸುಮಾರು ಹತ್ತಡಿಗಳ ಎತ್ತರದಮೇಲೆ ಸ್ವಲ್ಪಪಶ್ಚಿಮವಾಗಿ ಹೋಗುತ್ತಿರುವುದು. ಈ ಹಳ್ಳಕ್ಕೆ ಇದು ಉತ್ತರದಿಕ್ಕಿನಲ್ಲಿರುವುದು. ಆ ಕಾಲುವೆಯಿಂದ ಈ ಹಳ್ಳಕ್ಕೆ

ನೀರನ್ನು ತರುವುದಕ್ಕಾಗಿ ಮತ್ತೆರಡುಕಾಲುವೆಗಳನ್ನು ಈ ಹಳ್ಳಕ್ಕೆ ತಂದಿರುವರು. ಈ ಉಪಕಾಲುವೆಗಳೆಲ್ಲವೂ ಶಿಥಿಲರೂಪವಾಗಿಯೇ ಇವೆ. ಈ ಹಳ್ಳಕ್ಕೆ ಇಂತಹ ಕಾಲುವೆಗಳನ್ನು ತಂದಿರುವುದು ನೋಡಿದರೆ ಇದು ಸ್ನಾನದ ಹಳ್ಳವಾಗಿ ಇರಬಹುದೆಂದು ಊಹಿಸಲಾಗುವುದು. ಇದಕ್ಕೆ ಅನತಿ ದೂರದಲ್ಲಿಯೇ "ಮಹಾನವಮಿಯ ದಿಬ್ಬ" ಎಂದೆನಿಸುವ ವಿಜಯದಶಮಿಯ ಸಿಂಹಾಸನ ಬಂದಿರುವುದು. ಇದು ಸುತ್ತಲೂ ಕಲ್ಲುಕಟ್ಟಡದಿಂದ ಮಾಡಿದ ದೊಡ್ಡಮಣ್ಣಿನ ಗುಡ್ಡೆ. ಆ ಕಾಲದಲ್ಲಿ ರಾಜರು ದಸರಾಹಬ್ಬದ ದಿನಗಳಲ್ಲಿ ಅದರಮೇಲೆ ಕುಳಿತು ಅರಣ್ಯಮೃಗವಿನೋದಗಳನ್ನೂ, ಜಟ್ಟಿಕಾಳಗಗಳನ್ನೂ, ಮಲ್ಲಯುದ್ಧಗಳನ್ನೂ ನೋಡುತ್ತಿರುವರು.

ಅದರಮೇಲೆ ಪೂರ್ವಭಾಗದಲ್ಲಿ ಅರ್ಧದೂರ ಕೆಳಭಾಗದ ತನಕ ಇಳಿಯುವದಕ್ಕೆ ಎರಡು ಕಡೆಗಳಲ್ಲಿಯೂ ಮಾರ್ಗಗಳಿರುವುವು. ಅದರ ಕೆಳಭಾಗದಲ್ಲಿ ಗೋಡೆಯೊಂದಿಗೆ ಕೂಡಿದ ಬಂಡೆಯಲ್ಲಿ ಐದು ವಿಗ್ರಹಗಳಿರುವುವು ಅಲ್ಲಿ ಕೆಲವರು ಪಾಮರರು ಆ ವಿಗ್ರಹಗಳನ್ನು ಪಂಚಪಾಂಡವರೆಂದು ಭಾವಿಸಿ ಇಂದಿಗೂ ಪೂಜೆಮಾಡುತ್ತಿರುವರು. ಈ ದಿಬ್ಬದ ಪಾರ್ಶ್ವದ ಕಲ್ಲುಗಳ ಮೇಲೆ ಕುದುರೆಗಳೂ, ಆನೆಗಳೂ, ಒಂಟೆಗಳೂ, ಹುಲಿಗಳೂ, ಬೇಟೆಗಾರರು, ಹುಲ್ಲೆಗಳನ್ನು ತರುಬುವ ಬೇಟೆನಾಯಿಗಳು, ಆಟಗಾತಿಯರು ಮೊದಲಾದ ಚಿತ್ರಗಳು ಕೆತ್ತಲ್ಪಟ್ಟಿರುವುವು.

ಈಗ್ಗೆ ನಾಲ್ಕು ವರುಷಗಳ ಹಿಂದೆ ಈ ದಿಬ್ಬದೊಳಕ್ಕೆ ಹೊರಡುವುದಕ್ಕೆ ಎಲ್ಲಿಯಾದರೂ, ದ್ವಾರವಿದೆಯೋ ಏನೋ ನೋಡಬೇಕೆಂದು ಆ ತಿಟ್ಟಿನ ನಾಲ್ಕು ಪಾರ್ಶ್ವಗಳಲ್ಲಿಯೂ ಸುಮಾರು ಹತ್ತು ಅಡಿಗಳ ಆಳದ ತನಕ ಅಗೆದು ನೋಡಿದರೆಂತಲೂ, ಆಗ ಕೂಲಿಯವರಲ್ಲಿ ಕೆಲವರು ಅಲ್ಲಿ ಮಡಿದದ್ದರಿಂದಲೂ, ದ್ವಾರವೂ ಎಲ್ಲಿಯೂ ಕಾಣಬಾರದ್ದರಿಂದಲೂ, ಆ ಪ್ರಯತ್ನವನ್ನು ಬಿಟ್ಟು, ಆ ಹಳ್ಳವನ್ನು, ಮರಳಿ ಹೂತುಬಿಟ್ಟರೆಂತಲೂ

ತಿಳಿಯಬಂದಿದೆ. ಇದರ ಸುತ್ತಲೂ ಒಂದು ಪ್ರಾಕಾರದ ಗೋಡೆಯಿದ್ದು ಈಗ ಅದೆಲ್ಲವೂ ಶಿಥಿಲವಾಗಿ ಉತ್ತರದಿಕ್ಕಿನ ಗೋಡೆ ಮಾತ್ರ ನಿಂತಿದೆ. ಈ ದಿಬ್ಬದ ಮೇಲಕ್ಕೆ ಹತ್ತುವುದಕ್ಕೆ ಪಶ್ಚಿಮದಿಕ್ಕಿನಲ್ಲಿ ಮೆಟ್ಟಲುಗಳಿವೆ.

ಈ ಸಿಂಹಾಸನದ ಪ್ರಾಕಾರದ ಗೋಡೆಗೆ ಉತ್ತರಪಾರ್ಶ್ವದಲ್ಲಿ ಒಂದು ದೊಡ್ಡ ಕಲ್ಲುಬಾಗಿಲು ಆನಿಸಲ್ಪಟ್ಟಿದೆ. ಇದು ಏಕಶಿಲಾಮಯ ವಾಗಿದೆ. ಇದು ಸುಮಾರು ಹತ್ತು ಅಡಿಗಳ ಎತ್ತರವೂ ಎಂಟು ಅಡಿಗಳ ಮಂದವೂ ಉಳ್ಳದ್ದು. ಇದಕ್ಕೆ ಸಾಮಾನ್ಯವಾದ ಮರದ ಬಾಗಿಲಂತೆಯೇ ಹಿಂಭಾಗದಲ್ಲಿ ಅಗುಳಹಾಕುವ ಎರಡು ತೂಬುಗಳಿರುವುವು.

ಇಲ್ಲಿಂದ ಈಶಾನ್ಯಕ್ಕೆ ಸುಮಾರು ಅರ್ಧ ಮೈಲು ದೂರ ಹೋದರೆ ಅಲ್ಲಿ ರಂಗಸ್ವಾಮಿಯ ದೇವಾಲಯವನ್ನು ನೋಡಲಾಗುವುದು. ಇದು ಪೂರ್ವಾಭಿ ಮುಖವಾಗಿರುವುದು. ಇದು ಬಹುಮಟ್ಟಿಗೆ ಶಿಥಿಲವಾಗಿದೆ. ಎಲ್ಲಾ ದೇಗುಲಗಳಂತೆ ಇದಕ್ಕೂ ಅಲ್ಲಲ್ಲಿ ರಿಪೇರಿ ಮಾಡಲ್ಪಟ್ಟಿದೆ. ಅರ್ಧ ಭಾಗದವರೆಗೆ ಹೂತುಹೋಗಿದ್ದುದರಿಂದ ಈಚೆಗೆ ಈ ಹೂಳುಮಣ್ಣನ್ನು ತೆಗೆದುಹಾಕಿಸಿದ್ದಾರೆ. ಇದರಲ್ಲಿ ನೋಡತಕ್ಕ ವಿಶೇಷಾಂಶಗಳು ಯಾವುವೂ ಇಲ್ಲ.

ಈ ಆಲಯಕ್ಕೆ ದಕ್ಷಿಣಪಾರ್ಶ್ವದಲ್ಲಿ ಒಂದು ಮಂಟಪವಿರುವುದು. ಅಲ್ಲಿ ಸುಮಾರು ಹನ್ನೆರಡು ಅಂಗುಲಗಳ ಉದ್ದವಿರುವ ಆಂಜನೇಯ ಸ್ವಾಮಿಯ ಶಿಲಾವಿಗ್ರಹ ಒಂದಿರುವುದು. ಈ ವಿಗ್ರಹದ ಎದುರಿಗೆ ಅಂದರೆ ಆವರಣದ ದಕ್ಷಿಣಗೋಡೆಯ ಒಳಭಾಗದಲ್ಲಿ ಸುಮಾರು ಆರು ಅಡಿಗಳ ಉದ್ದವೂ, ಎರಡಡಿಗಳ ಅಗಲವೂ, ಇರುವ ಬಂಡೆಯಮೇಲೆ ಹಳೆಗನ್ನಡದ ಅಕ್ಷರಗಳಲ್ಲಿ ಈ ಶಾಸನವು ಕೆತ್ತಲ್ಪಟ್ಟಿರುವುದು.

"ಶಾಲೀವಾಹನಶಕೆ ೧೪೬೭ ನೇ ವಿಶ್ವಾವಸು ಸಂವತ್ಸರದ ಚೈತ್ರ ಶುದ್ಧ ತದಿಗೆ ಗುರುವಾರದದಿನ ರಾಜಾಧಿರಾಜಪರಮೇಶ್ವರ ಶ್ರೀ ವೀರಪ್ರತಾಪ

ಶ್ರೀ ವೀರಸದಾಶಿವನು ವಿದ್ಯಾನಗರದಲ್ಲಿ ರತ್ನಸಿಂಹಾಸನಾರೂಢನಾಗಿ ರಾಜ್ಯವನಾಳುತ್ತಿರುವಲ್ಲಿ ಶ್ರೀಮನ್ಮಹಾಮಂಡಲೇಶ್ವರ ಮಾಧವರಾಯನು ಮಲ್ಲಿರಾಜನ ಮೊಮ್ಮಗನಾದ ವಲ್ಲಭರಾಜನ ಮಗ ತಿಮ್ಮರಾಜಪ್ರಭುವು ವಿದ್ಯಾನಗರದ ದೊಡ್ಡ ಅಂಗಡಿಬೀದಿಯ ಮೈಲಸಂತೆಗೆ ಪಶ್ಚಿಮದಲ್ಲಿರುವ ಮಾಧವದೇವರಿಗೆ ರಂಗಮಂಟಪದ ವೈಶಾಲ್ಯ 25 ಅಂಕಣಗಳು ನಿತ್ಯೋತ್ಸವಗಳಲ್ಲಿ ನೃತ್ತಗೀತವಾದ್ಯಾದಿ ವೈಭವಗಳಿಗೆ ಯೋಗ್ಯವಾಗಿಯೂ ಆ ಚಂದ್ರಾರ್ಕಸ್ಥಾಯಿಯಾಗಿಯೂ ತಮ್ಮ ತಂದೆ ವಲ್ಲಭರಾಜರಿಗೂ ತಮ್ಮ ತಾಯಿ ವೆಂಗಳಮ್ಮನವರಿಗೂ ಪುಣ್ಯವುಂಟಾಗುವಂತೆ ಸಮರ್ಪಿಸಿದನು. "ಮಂಗಳಂ ಮಹಾ ಶ್ರೀರಸ್ತು" ಎಂದಿದೆ.

ಈ ರಂಗಸ್ವಾಮಿಯ ದೇವಾಲಯಕ್ಕೆ ಉತ್ತರದಲ್ಲಿ ಸ್ವಲ್ಪದೂರ ಹೋದರೆ ಮುಂದೆ ಒಂದು ಕೋಟೆಯಗೋಡೆ ಕಾಣಬರುವುದು. ಈ ಕೋಟೆಯ ದಿಡ್ಡಿಬಾಗಿಲಲ್ಲಿ ಪ್ರವೇಶಿಸಿ ರಾಜಾಂತಃಪುರಾವರಣವನ್ನು ಸೇರಲಾಗುವುದು.

ಈ ಅಂತಃಪುರಾವರಣದಲ್ಲಿ, "ಸಭಾಭವನ," ಎಂಬ ಎರಡಂತಸ್ತುಗಳ ಕಟ್ಟಡವಿರುವುದು. ಇದರಲ್ಲೆಲ್ಲಾ ಕಮಾನುಗಳು ಕಟ್ಟಲ್ಪಟ್ಟು ಬಹು ರಮಣೀಯವಾಗಿಕಟ್ಟಲ್ಪಟ್ಟಿರುವುದು. ಇದರ ಉತ್ತರ ಪಾರ್ಶ್ವದಲ್ಲಿ ಮೇಲಿನ ಅಂತಸ್ತಿಗೆ ಹತ್ತುವುದಕ್ಕೆ ಹಂತಗಳಿರುವುವು. ಮೇಲಿನ ಅಂತಸ್ತು ಕೂಡ ಕೆಳಗಿನಹಾಗೆಯೇ ಕಮಾನುಗಳುಹಾಕಿ ಕಟ್ಟಲ್ಪಟ್ಟಿದೆ. ಇದು ಕಟ್ಟಲ್ಪಟ್ಟು 500 ವರುಷಗಳಾಗಿದ್ದರೂ ಇಂದಿಗೂ ಸ್ವಲ್ಪವಾದರೂ ಮುಕ್ಕಾಗದೆ ಪೂರ್ವದ ಚಾತುರ್ಯವನ್ನೇ ಮೆರೆಯಿಸುತ್ತಾ ಅಚ್ಚಳಿಯದೆ ಇದೆ.

ಈ ಸಭಾಭವನಕ್ಕೆ ಪಶ್ಚಿಮಭಾಗದಲ್ಲಿ ಗೋಡೆ ಇಲ್ಲದೆ ಎತ್ತರವಾಗಿರುವ ತಳಹದಿಯೊಂದಿದೆ. ಇದು ರಾಜಾಂತಃಪುರುವಾಗಿ ಇದ್ದಿರಬಹುದು.

ಈ ತಳಹದಿಗೆ ಈಶಾನ್ಯದಲ್ಲಿ "ಜನಾನಾ" ಎಂಬ ಕಟ್ಟಡವಿದೆ. ಇದರ ಒಳಭಾಗದಲ್ಲಿ ಸುತ್ತಲೂ ಕಮಾನುಗಳು ಕಟ್ಟಲ್ಪಟ್ಟಿವೆ. ಇದು ಆಯಾಕೃತಿಯಾಗಿದೆ. ಈ ಪ್ರಾಕಾರದಲ್ಲಿ ಇನ್ನೂ ಎಷ್ಟೋ ಅರಮನೆಗಳು ಇದ್ದಂತೆ ಅಲ್ಲಿ ಬಿದ್ದಿರುವ ಕಲ್ಲುಗಳರಾಶಿಯಿಂದ ತಿಳಿದುಕೊಳ್ಳಬಹುದು.

ಈ ಅಂತಃಪುರ ಪ್ರಾಕಾರಕ್ಕೆ ಹೊರಗಡೆ ರಾಜನನಗರ, ಟಂಕಸಾಲೆ, ಸೇನಾಪತಿಗಳ ಮತ್ತು ಸಾಮಂತರಾಜರ ಸೌಧಗಳೂ, ಮನೋಜ್ಞಗಳಾದ ಮನೆಗಳು ಇದ್ದವಂತೆ! ಅವುಗಳ ಮಧ್ಯದಲ್ಲಿರುವ ಚಾವಡಿಗೆ ಮಹಡಿಯೂ, ಮೇಲಕ್ಕೆ ಹೋಗಲು ಮೆಟ್ಟಲುಗಳೂ ಇರುವುವು. ಇದು ಬಹುಶಃ ಪಟ್ಟದಾನೆಯನ್ನು ನಿಲ್ಲಿಸುವಸ್ಥಳವಾಗಿರಬಹುದು.

ಈ ಗಜಶಾಲೆಯ ಹತ್ತಿರವೇ ಪಶ್ಚಿಮದಿಕ್ಕಿನಲ್ಲಿ ನಾಟ್ಯಶಾಲೆ ಇರುವುದು. ಮುಂಭಾಗದಲ್ಲಿ ಎರಡು ಕಡೆಗಳಲ್ಲಿಯೂ ಎರಡುದೊಡ್ಡ ಜಗುಲಿಗಳಿರುವುವು. ಪ್ರತಿ ಜಗುಲಿಯಮೇಲೆಯೂ ಐದರಂತೆ ಹತ್ತುಕಂಭಗಳುಳ್ಳ ಪಡಸಾಲೆ ಇರುವುದು. ಒಳಗಡೆಕೂಡ ನಾಲ್ಕು ಕಡೆಗಳಲ್ಲಿಯೂ ಜಗಲಿಯಂತಹ ದಿಣ್ಣೆಗಳಿರುವುವು. ಅವುಗಳಲ್ಲಿಕೂಡ ಮುಂಭಾಗದಹಾಗೆಯೇ ಕಮಾನುಗಳುಳ್ಳ ಪಡಸಾಲೆ ಇರುವುದು. ಮಧ್ಯದಲ್ಲಿ ಚಚ್ಚೌಕವಾಗಿ ಹಳ್ಳದಪ್ರದೇಶವಿರುವುದು. ಬಹುಶಃ ಈ ಸ್ಥಳದಲ್ಲಿ ಜಟ್ಟಿಗಳೂ, ಮಲ್ಲರೂ ಮಲ್ಲಯುದ್ಧವನ್ನು ಮಾಡುತ್ತಿದ್ದರೆ ಸುತ್ತಲೂ ಇರುವ ವಸಾರೆಯಲ್ಲಿ ರಾಜರು ಕುಳಿತು ನೋಡಲು ಅನುಕೂಲವಾಗಿರಬಹುದು.

ಈ ನಾಟ್ಯಶಾಲೆಗೆ ಉತ್ತರಕಡೆ ಎರಡು ಫರ್ಲಾಂಗುಗಳದೂರದಲ್ಲಿ ಚಿಕ್ಕ ಬೆಟ್ಟದಸಾಲೊಂದಿರುವುದು. ಈ ಬೆಟ್ಟಸಾಲಿನಮೇಲೆ ಅಲ್ಲಲ್ಲಿ ಅನೇಕ ಕಟ್ಟಡಗಳೂ ಗುಹೆಗಳೂ ಇರುವುವು. ಈಬೆಟ್ಟದ ಸಾಲನ್ನು ಹತ್ತಿದರೆ ಅಲ್ಲಿ ಒಂದು ಕೊಠಡಿಯಂತಹ ದೊಡ್ಡಗವಿ ಇರುವುದು; ಅದು ಋಷ್ಯಾಶ್ರಮವಾಗಿರಬಹುದೆಂದು ತೋರುತ್ತದೆ.

ಈ ಪರ್ವತರಾಶಿಗೆ ದಕ್ಷಿಣಪಾರ್ಶ್ವದ ಕೆಳಭಾಗದಲ್ಲಿ ಉದ್ದಕ್ಕೂ ಹಸುರುಹುಲ್ಲಿನಿಂದಲೂ, ಅಲ್ಲಲ್ಲಿ ನಾನಾವಿಧಗಳಾದ ಲತೆಗಳು, ವಿವಿಧ ವರ್ಣಗಳುಳ್ಳ ಹೂಗಳು, ಅರಳಿರುವುದರಿಂದಲೂ, ಅಲ್ಲಿನ ಭೂಮಿಯು ರತ್ನಕಂಬಳಿಯನ್ನು ಹಾಸಿದಹಾಗೆ ಕಣ್ಣುಗಳಿಗೆ ಹಬ್ಬವನ್ನುಂಟುಮಾಡು ತ್ತಿರುವುದು. ಇದಕ್ಕೆ ಮುಂದಿನ (ದಕ್ಷಿಣ) ಭಾಗದಲ್ಲಿನ ಭೂಮಿಯು ದೊಡ್ಡಮರಗಳಿಗೆನೆಲೆಯಾಗದಿದ್ದರೂ ಅಲ್ಲಲ್ಲಿ ವಿವಿಧಜಾತಿಗಳ ಸಣ್ಣಗಿಡ ಗಳೂ ಪೊದರುಗಳಂತೆ ಹೆಣೆದುಕೊಂಡಿರುವ ಲತಾನಿಕುಂಜಗಳೂ ನೇತ್ರ ಪರ್ವವನ್ನೊಡರಿಸುತ್ತಿರುವುವು. ಮೃದುಮಧುರವಾಗಿ ದನಿಗೆಯ್ವ ಪಕ್ಷಿಗಳು ಆವೃಕ್ಷಗಳಮೇಲೆ ಕುಳಿತುಕೊಂಡು ಇಂಪಾಗಿ ಗಾನಮಾಡುತ್ತಾ ಶ್ರವಣ ರಂಧ್ರಗಳಿಗೆ ಛಾತನವನ್ನು ಮಾಡುತ್ತಿರುವುವು. ಕೀರಶಾರಿಕಾದಿ ಪಕ್ಷಿಗಳ ಸವಿನುಡಿಗಳು ಶ್ರೋತ್ರರಸಾಯನವಾಗಿ ಕೇಳಬರುತ್ತ ಗುಡ್ಡವನ್ನು ಹತ್ತಿ ದ್ದರಿಂದ ಉಂಟಾದ ಪರಿಶ್ರಮವನ್ನು ತೋರದಂತೆಮಾಡುವುವು. ಇಂತಹ ಸೊಬಗಿನಿಂದ ಮೆರೆಯುವ ಈ ಭುವನವು ಶರಭ, ಸಿಂಹ, ಶಾರ್ದೂಲಾದಿ ಕ್ರೂರಮೃಗಗಳ, ಸಂಚಾರಕ್ಕೆ ತಕ್ಕದ್ದಲ್ಲದೆ ಇದ್ದರೂ, ಸುಂದರ ವಿಶಾಲ ಚಂಚಲಲೋಚನಗಳುಳ್ಳ ಹುಲ್ಲೆಗಳು, ಮೊಲಗಳು, ಮರ್ಕಟ, ಮಾರ್ಜಾ ಲಾದಿ ಸಾಧಾರಣಮೃಗಸಮೂಹಗಳು ಇವುಗಳಿಗೆ ಸ್ಥಾನವಾಗಿರುವುದೆಂದು ಹೇಳಲು ಅಡ್ಡಿಯಿಲ್ಲ. ಈ ವನದ ದಕಿಣಭಾಗದಲ್ಲಿ ತುಂಗಭದ್ರಾನದಿಯು ಸಣ್ಣದಾಗಿ ಪಶ್ಚಿಮದಿಂದ ಪೂರ್ವಕ್ಕೆ ಪ್ರವಹಿಸುತ್ತಲಿರುವುದು. ಈ ಪ್ರವಾ ಹಕ್ಕೆ ಮುಂದುಗಡೆ ಬತ್ತದಗದ್ದೆಗಳು ಸಮೃದ್ಧಿಯಾಗಿ ಬೆಳೆದಿರುವುವು. ಅವುಗಳಲ್ಲಿ ಸುವರ್ಣಛಾಯೆಯುಳ್ಳ ಕೆಲವು ಬತ್ತದಗದ್ದೆಗಳಲ್ಲಿನ ಪೈರು ಗಳು ಹೊರಲಾರದಷ್ಟು ಧಾನ್ಯದಕಾಳುಗಳನ್ನುಳ್ಳ ತೆನೆಗಳನ್ನು ತಳೆದು ವಿದ್ಯಾ, ವಿನಯಸಂಪನ್ನರಾದ ಸಜ್ಜನರತೆರದಿಂದ ವಸುಂಧರೆಗೆ ತಮ್ಮ ತಲೆ ಗಳನ್ನು ಸೋಕುವಂತೆ ಕಾಣಬರುವುವು. ಅವುಗಳಲ್ಲಿ ಕೆಲವು ಜಳ್ಳು

ಕಾಳುಗಳುಳ್ಳವಾಗಿ ಮಂಗವರ್ಣವುಳ್ಳ ತೆನೆಗಳಿಂದಕೂಡಿದ ಪೈರುಗಳು ವಿದ್ಯಾವಿಹೀನರಾದ ದುರ್ಜನರ ತೆರದಿಂದ ತಮ್ಮ ಲೋಪಗಳನ್ನು ತಿಳಿಯದೆ ಡಾಂಭಿಕದಿಂದ ತಲೆಎತ್ತಿ ತಮ್ಮ ಬೆಳ್ತನವನ್ನೆಲ್ಲರಿಗೂ ತೋರಿಸುತ್ತಿರುವುವು. ಮತ್ತು ಅಲ್ಲಿನ ಜಲಪ್ರವಾಹಗಳೂ, ಬಾಳೆ, ಮತ್ತು ಕಬ್ಬಿನತೋಟಗಳೂ, ಅತಿಶಯುವಾಗಿ ಬೆಳೆದು ನೇತ್ರಾನಂದವನ್ನುಂಟುಮಾಡುತ್ತಾ ಅಲ್ಲಿಂದ ಬೀಸುವ ಮಂದಮಾರುತವೂ ಮನಸ್ಸಿಗೆ ತುಂಬ ಉಲ್ಲಾಸವನ್ನುಂಟು ಮಾಡುತ್ತಿರುವುವು. ಆಹಾ! ನಗರ ಶೋಭನೆಯು ಹೆಚ್ಚಿ, ಎಲ್ಲಿ ನೋಡಿ ದರೂ ಲತಾಕುಂಜಗಳೂ, ಪುಷ್ಪೋದ್ಯಾನಗಳೂ, ದ್ರಾಕ್ಷಿ ತಾಂಬೂಲಾದಿ ತೋಟಗಳೂ, ಸಮೃದ್ಧಿಯಾಗಿ ಬೆಳೆದು, ವಿವಿಧಕುಸುಮ ಪರಿಮಳ ಭಾರ ವನ್ನು ವಹಿಸಿ, ವಾಯುವು ತನ್ನ ಗಂಧವಹನಾಮವನ್ನು ಸಾರ್ಥಕಗೊಳಿಸು ವಂತೆ ಬೀಸುತ್ತಿದ್ದಾಗ ಪ್ರಾಚೀನಕಾಲದಲ್ಲಿ ಪ್ರಜೆಗಳು ಎಷ್ಟು ಆನಂದವನ್ನು ಹೊಂದುತ್ತಿದ್ದರೊ ಬಣ್ಣಿಸಲಾರೆವು? ಆವನವು ಅತ್ಯಂತ ಮನೋಹರ ವಾಗಿ ಫಲಭಾರದಿಂದ ಬಾಗಿ ಭೂಮಿಯನ್ನು ಸ್ಪೃಶಿಸುತ್ತಾ ಹೊಸ ಪೂಗಳ ಕಾಂತಿಯುಳ್ಳ ತರುಗಳಿಂದ ಸೇವಿತವಾಗಿರುವುವು. ಅಲ್ಲಿನ ದೇವಾಲಯ ಗಳು ದಿನದಿನವೂ ಭಗವನ್ನಾಮಗಳನ್ನು ಭಜಿಸುವ ಭಕ್ತರನೆಲೆಯಾಗಿ ಅನು ದಿನವೂ ನೃತ್ತ ಗೀತ ವಾದ್ಯಾದ ವೈಭವಗಳಿಗೆ ಯೋಗ್ಯವಾಗಿ ಮೆರೆಯುತ್ತಿ ರುವ ಆ ಪುಣ್ಯಭೂಮಿಯು ಭೂತಳ ಸ್ವರ್ಗವಾಗಿರುವುದೆಂದು ಹೇಳಲಿಕ್ಕೆ ಲೇಶವಾದರೂ ಸಂದೇಹ ವುಂಟೆ ?

ಇದು ಋಷ್ಯಾಶ್ರಮವಾಗಿರಬಹುದೆಂದು ಹೇಳುವುದಕ್ಕೆ ಮೇಲೆ ಹೇಳಲ್ಪಟ್ಟ ಪರ್ವತಭಾಗವನ್ನು "ಮಾತಂಗಪರ್ವತ" ಎಂದು ಕರೆಯುತ್ತಿರು ವುದೇ ಕಾರಣವಾಗಿ ತಿಳಿಯಬಹುದು. ಮತ್ತು ಇದಕ್ಕೆ ಹತ್ತಿರಇರುವ ಬೆಟ್ಟ ಸಾಲುಗಳಿಗೆ "ಮಾಲ್ಯವಂತ, ಋಶ್ಯಮೂಕ, ಅಂಜನ," ಎಂಬ ಹೆಸರುಗಳಿರು ವುವು ಈ ಮಾತಂಗನ ಬೆಟ್ಟದ ಮೇಲೆ ಒಂದು ದೇವಾಲಯುವಿರುವುದು.

ಅದಕ್ಕೆ "ಮಾತಂಗನ ಗುಡಿ" ಎನ್ನುವರು. ಇದರ ಪ್ರಾಕಾರದ್ವಾರವು ದಕ್ಷಿಣಾಭಿಮುಖವಾಗಿರುವುದು. ಇದಿರಲ್ಲಿ ಅನೇಕ ಮಂಟಪಗಳಿರುವುವು. ಅವುಗಳಲ್ಲಿ ಗರ್ಭಾಲಯವು ಮಾತ್ರ ಉತ್ತರಾಭಿಮುಖವಾಗಿರುವುದು. ಇದರಲ್ಲಿ ಶ್ರೀ ರಾಮಸ್ವಾಮಿಯ ವಿಗ್ರಹವು ಇರುವುದು. ಈ ಆಲಯದಲ್ಲಿ ಈಗ್ಗೂ ಬೈರಾಗಿಗಳು ವಾಸಮಾಡುತ್ತಾ ಆ ವಿಗ್ರಹಕ್ಕೆ ನಿತ್ಯವೂ ಅರ್ಚನೆ ಮಾಡುತ್ತಿರುವರು.

ರಾಮಲಕ್ಷ್ಮಣರು ವಾಲಿವಧಾನಂತರ ಸುಗ್ರೀವನಿಗೆ ಕಿಷ್ಕಿಂಧಾರಾಜ್ಯ ಪಟ್ಟಾಭಿಷೇಕಮಾಡಿದತರುವಾಯ ಆಷಾಢಮಾಸವು ಬಂದುದರಿಂದಲೂ, ಆ ನಾಲ್ಕುತಿಂಗಳುಗಳು ಗಾಳಿಮಳೆಗಳ ಕಾಲವಾದುದರಿಂದಲೂ ಶತ್ರುಗಳ ಮೇಲೆ ದಂಡೆತ್ತಿಹೋಗುವುದು ತರವಲ್ಲವೆಂದೆಣಿಸಿ, ಸುಗ್ರೀವನ ಬರುವಿಕೆ ಗಾಗಿ ಕಾರ್ತೀಕಮಾಸದವರೆಗೆ ಅವರು ಈ ಪರ್ವತದಮೇಲೆಯೇ ಸೀತಾ ವಿಯೋಗ ದುಃಖದಿಂದ ವಾಸವಾಗಿದ್ದರೆಂದು ತಿಳಿಯಬರುವುದು. ಈ ದೇವಾಲಯದ ಹಿಂದುಗಡೆ ಬೆಟ್ಟದ ಉತ್ತರದಿಕ್ಕಿನಲ್ಲಿ ಕೂಡ ಕೆಳಕ್ಕೆ ಇಳಿಯು ವುದಕ್ಕೆ ಮೆಟ್ಟಿಲುಗಳಿರುವುವು. ಈ ಪಂತಗಳನ್ನಿಳಿಯುವಾಗ ಕೋಣೆಗಳಂ ತಹ ದೊಡ್ಡ ಗುಹೆಗಳು ಕಾಣಲಾಗುವುವು.

ಈ ಪ್ರಕಾರ ಮಾತಂಗದೇವಾಲಯದಿಂದ ಕೆಳಕ್ಕಿಳಿದು, ತುಂಗ ಭದ್ರಾನದಿಯ ಕಾಲುವೆಯನ್ನು ದಾಟಿ, ಬತ್ತದ ಗದ್ದೆಗಳನಡುವೆ ನಡೆದರೆ ಹತ್ತಿರದಲ್ಲಿಯೇ ಒಂದು ದೊಡ್ಡ ಗುಡಿಯನ್ನು ಸೇರಬಹುದು. ಬೆಟ್ಟದಿಂದ ಇಳಿಯುವಾಗಲೇ ಈ ದೇವಾಲಯವು ಕಾಣಬರುವುದು. ಇದರ ಸಿಂಹ ದ್ವಾರವು ಉತ್ತರಾಭಿಮುಖವಾಗಿರುವುದು. ಇದಕ್ಕೆದುರಾಗಿ ಐದಾರು ಫರ್ಲಾಂಗುಗಳ ಉದ್ದಕ್ಕೂ ದೊಡ್ಡ ಬೀದಿಯೊಂದಿರುವುದು. ಆ ವೀಧಿಯ ಉದ್ದಕ್ಕೂ ಇಕ್ಕಡೆಗಳಲ್ಲಿಯೂ ಅಂಗಡಿಗಳನ್ನಿಡುವುದಕ್ಕೆ ತಕ್ಕ ಚಾವಡಿ ಗಳಿರುವುವು. ಈ ಅಂಗಡೀಬೀದಿಯಲ್ಲಿ ಆ ಕಾಲದಲ್ಲಿ ಮುತ್ತುಗಳೂ,

ನವರತ್ನಗಳೂ, ವಿವಿಧಫಲಗಳೂ ಮಾರಲ್ಪಡುತ್ತಿದ್ದವಂತೆ! ಈಗ ಆ ಅಂಗಡೀ ಮನೆಗಳು ಹಾಳುಬಿದ್ದು ಹೋಗಿರುವುದಲ್ಲದೆ ಮಧ್ಯದಲ್ಲಿರುವ ರಸ್ತೆಯು ವ್ಯವಸಾಯಕ್ಕೆ ಉಪಯೋಗಿಸಲ್ಪಟ್ಟಿದೆ ತರುವಾಯ ಅಲ್ಲಿಂದ ಹಿಂದಿರುಗಿ, ಕಮಲಾಪುರದ ಸತ್ರಕ್ಕೆ ಬಂದು ಅಲ್ಲಿ ಆದಿನವೆಲ್ಲಾ ವಿಶ್ರಮಿಸಿ ಕೊಳ್ಳಲಾಗುವುದು

ಮರುದಿನ ಅರುಣೋದಯದಲ್ಲಿಯೇ ಎದ್ದು ಉದಯರಾಗರಕ್ತಿಮೆಯ ಸೊಬಗನೀಕ್ಷಿಸುತ್ತಾ, ಪ್ರಭಾತಾರೋಗ್ಯವಾಯುವನ್ನಾಘ್ರಾಣಿಸುತ್ತಾ ಉತ್ತರಾಭಿಮುಖರಾಗಿ ಮುಂದಿನಮಾರ್ಗದಲ್ಲಿಯೇ ಪ್ರಯಾಣ ಮಾಡಿ, ವಿಜಯದಶಮಿಯ ಸಿಂಹಾಸನವನ್ನು ದಾಟಿ ಉತ್ತರದಿಕ್ಕಿನಲ್ಲಿ ರಾಜಾಂತಃ ಪುರಾವರಣಕ್ಕೆ ಹೋಗುವ ಮಾರ್ಗವನ್ನುಬಿಟ್ಟು ಪಶ್ಚಿಮೋತ್ತರವಾಗಿ ಹೋಗುವದಾರಿಯಲ್ಲಿಯೇ ನಡೆದರೆ ಮಹಾನವಮಿಯ ದಿಬ್ಬಕ್ಕೆ ಅನತಿದೂರದಲ್ಲಿಯೇ ಸ್ವಲ್ಪ ಹೆಚ್ಚು ಕಡಿಮೆ ನಾಲ್ವತೆಂಟುಅಡಿಗಳ ಉದ್ದವೂ, ಮೂರು ಅಡಿಗಳ ಅಗಲವೂ, ಎರಡಡಿಗಳ ಎತ್ತರವೂ ಆಗಿ ಗಂಡಶಿಲೆಯನ್ನು ಕೊರೆದು ಮಾಡಲ್ಪಟ್ಟ ತೊಟ್ಟಿಯೊಂದು ಅಲ್ಲಿನ ಮೈದಾನಕ್ಕೆ ಅತು ಕೊಂಡಿರುವುದನ್ನು ನೋಡಲಾಗುವುದು ಇದರ ಒಂದುಕಡೆ ಕೆಳಭಾಗದಲ್ಲಿ ತೂಬಿನಂತೆ ವಲಯಾಕಾರವಾಗಿರುವ ರಂಧ್ರವಿರುವುದು. ಆ ಕಾಲದಲ್ಲಿ ಈ ತೊಟ್ಟಿಯಲ್ಲಿ ಹಾಲುತುಂಬಿ ಆನೆಯ ಮರಿಗಳಿಗೆ ಕುಡಿಸುತ್ತಲಿದ್ದರಂತೆ!

ಇದನ್ನು ಬಿಟ್ಟು ಮುಂದೆ ಸ್ವಲ್ಪದೂರ ಹೋದರೆ ಮಾರ್ಗಕ್ಕೆ ಎಡ ಪಾರ್ಶ್ವದಲ್ಲಿ ಹಜಾರ ರಾಮಚಂದ್ರಾಲಯವು ಕಾಣಿಸುವುದು. ಈ ದೇವಾಲಯವು ಉಳಿದ ಆಲಯಗಳಹಾಗೆ ಅಷ್ಟುದೊಡ್ಡದಾಗಿಲ್ಲ ಉಳಿದ ಗುಡಿಗಳಂತೆ ಇದರಲ್ಲಿಯೂ, ವಿಗ್ರಹ ಹೀನವಾಗಿರುವುದು. ಇದರ ಸಿಂಹದ್ವಾರವು ಪೂರ್ವಾಭಿಮುಖವಾಗಿರುವುದು. ಈ ಆಲಯದೊಳಕ್ಕೆ ಪ್ರವೇಶಿಸಿದ ಕೂಡಲೇ ಭಕ್ತಿಯೂ, ಗೌರವಾಶ್ಚರ್ಯಗಳೂ ಉಂಟಾಗುವುವು. ಏತಕ್ಕೆಂದರೆ

ಇದರಲ್ಲಿನಗೋಡೆಗಳಮೇಲೆ ನಾನಾವಿಧಗಳಾದ ವಿಗ್ರಹಗಳನ್ನು ಕೆತ್ತಿರುವುದರಿಂದ, ಇದರಲ್ಲಿ ಅಲ್ಲಲ್ಲಿ ಹಳೆಗನ್ನಡದ ಅಕ್ಷರಗಳಲ್ಲಿ ಬರೆದಿರುವ ಶಾಸನಗಳನ್ನು ನೋಡಲಾಗುವುದು. ಗರ್ಭಗೃಹಕ್ಕೆ ಹತ್ತಿಕೊಂಡು ಮುಂದೆ ಇರುವ ಮಂಟಪದಲ್ಲಿ ಕಂಬ ಸ್ತಂಬಗಳಮೇಲೆ ಭಕ್ತಿಯನ್ನುಂಟುಮಾಡುವ ಅನೇಕ ವಿಗ್ರಹಗಳು ಅತಿ ಮೃದುವಾಗಿ ಕೆತ್ತಲ್ಪಟ್ಟು, ಪೂರ್ವಕಾಲದ ಶಿಲ್ಪೌನ್ನತ್ಯವನ್ನು ತಿಳಿಸುವುದರಿಂದ ಇದನ್ನು ನೋಡಿ ಅಚ್ಚರಿಗೊಳ್ಳದವರಿಲ್ಲ. ಗರ್ಭಾಲಯದ ಉತ್ತರಭಾಗದಲ್ಲಿ ಒಂದು ದೊಡ್ಡ ಮಂಟಪವಿರುವುದು. ದಕ್ಷಿಣಾಭಿಮುಖವಾದ ಇದರ ದ್ವಾರಕ್ಕೆ ಬಲಗಡೆಯ ಗೋಡೆಯಮೇಲೆ "ಶಾಲೀವಾಹನಶಕೆ ೧೪೩೫ ನೇ ಶ್ರೀಮುಖಸಂವತ್ಸರ ಚೈತ್ರ ಶುದ್ಧ ಪಂಚಮಿಯದಿನ ಈ ಆಲಯವು ಶ್ರೀ ಕೃಷ್ಣರಾಯರಿಂದ ಕಟ್ಟಿಸಲ್ಪಟ್ಟಿದೆ" ಎಂದು ಸ್ಥಿರಪಡಿಸುವ ಶಾಸನ ಒಂದಿರುವುದು. ಈ ಮಂಟಪದಲ್ಲಿ ರಾಮಾಯಣದ ಕಥಾವಿಶೇಷಗಳನ್ನು ತಿಳಿಸುವುವುಗಳಾಗಿ ಕಡು ಮನೋಹರಗಳಾದ ವಿಗ್ರಹಗಳು ಗೋಡೆಗಳಲ್ಲಿ ಕೆತ್ತಲ್ಪಟ್ಟವೆ. ಹಜಾರವೆಂದರೆ ಪ್ರಾಂಗಣ ರಾಜಪ್ರಾಸಾದಾವರಣಗಳಿರುವುದರಿಂದ ಇದಕ್ಕೆ ಆಹೆಸರು ಬಂದಿರಬಹುದು.

ಈ ದೇವಾಲಯವನ್ನು ಬಿಟ್ಟು ಇನ್ನೂ ಕೆಲವು ಅಡಿಗಳದೂರ ಮುಂದಕ್ಕೆ ಹೋದರೆ ಅಲ್ಲಿ ಒಂದು ಕಟ್ಟಡ ಕಾಣಬರುವುದು. ಇದನ್ನು ಅಲ್ಲಿನಜನರು "ನೆಲಮಾಳಿಗೆ" ಎಂದು ಹೇಳುವರು ಅದಕ್ಕೆ ಇದು ಎಡಪಾರ್ಶ್ವದಲ್ಲಿರುವುದು ಇದು ಭೂಮಟ್ಟಕ್ಕೆ ಸಮಾನವಾಗಿರುವುದರಿಂದ ಹತ್ತಿರಕ್ಕೆ ಹೋಗಿ ನೋಡಿದಹೊರತು ಪ್ರೇಕ್ಷಕರಿಗೆ ಇದು ಕಾಣಬಾರದು. ಇದು ಪೂರ್ತಿಯಾಗಿ ಭೂಮಿಯಲ್ಲಿ ಹೂಳಲ್ಪಟ್ಟಿರುವುದರಿಂದ ಅದರ ದ್ವಾರವನ್ನು ಇದುವರೆಗೂ ಕಂಡುಹಿಡಿಯಲಿಕ್ಕೆ ಆಗದೆ ಮೇಲುಭಾಗದಲ್ಲಿ ಒಂದು ಕಡೆ ಕೆಳಕ್ಕೆ ಇಳಿಯುವುದಕ್ಕಾಗಿ ಒಂದು ಕಡಂಗು ತೆಗೆದಿರುವರು,

ಇದರ ಒಳಭಾಗದಲ್ಲೆಲ್ಲಾ ಇಬ್ಬರುಮನುಷ್ಯರು ಧಾರಾಳವಾಗಿ ನಡೆದು ಹೋಗತಕ್ಕಷ್ಟು ಅಗಲವಾದ ಮಾಳಿಗೆಯಂತಹ ಸಂದು ಸೊಟ್ಟಾಬಟ್ಟೆಯಾಗಿ ಹೋಗುತ್ತಿರುವುದು. ಇದನ್ನು ಏತಕ್ಕೆ ಹೀಗೆ ನಿರ್ಮಿಸಿದರೋ ಗೊತ್ತಾಗುವುದಿಲ್ಲ.

ಇದರ ಸಮೀಪದಲ್ಲಿಯೇ ಗೋಡೆ ಇಲ್ಲದ ಕಲ್ಲಿನ ತಳಹದಿಯೊಂದು ಕಾಣಬರುವುದು. ಇದು ನೆಲಮಟ್ಟಕ್ಕಿಂತ ಅತ್ಯುನ್ನತವಾಗಿ ನಾಲ್ಕುಕಡೆಗೂ ಚಚ್ಚೌಕವಾಗಿದೆ ಇದೇ ಮಾದರಿಯ ತಳಹದಿಗಳು ಅದರ ಸುತ್ತಲು ಅನೇಕವಾಗಿರುವುವು. ಇದರ ಮುಂದುಗಡೆ ಪೂರ್ವಭಾಗದಲ್ಲಿರುವ ತಳಹದಿಯು ಸ್ತಂಭಸಹಿತವಾಗಿದೆ. ಮತ್ತೆ ಕೆಲವು ತಳಹದಿಗಳು ಮೇಲಕ್ಕೆ ಕಾಣಬಾರದೆ ನೆಲದಲ್ಲಿಯೇ ಹೂತುಹೋಗಿವೆ. ಪೂರ್ವಕಾಲದಲ್ಲಿ ಇವು ಕಡುಗಣನಾತೀತಗಳಾಗಿ, ದೊಡ್ಡಕೇರಿಯಾಗಿ ಮನೆಗಳಿಂದ ತುಂಬಿ ಬಹುರಮ್ಯಗಳಾಗಿರಬಹುದೆಂದು ತೋರುವುದು.

ಇಲ್ಲಿಂದಮುಂದಕ್ಕೆ ಸ್ವಲ್ಪದೂರ ಹೋದರೆ ಅಲ್ಲಿ ಪಾತಾಳೇಶ್ವರನ ದೇವಾಲಯವು ಕಾಣಬರುವುದು. ಇದು ಇರುವುದೆಂಬಸಂಗತಿ ಈಗ್ಗೆ ಎರಡುವರುಷಗಳ ಕೆಳಗೆ ಕಂಡುಹಿಡಿಯಲ್ಪಟ್ಟಿತು. ತತ್ಪೂರ್ವ ಇದು ಹೂತುಹೋಗಿ ಪ್ರಜೆಗಳಿಗೆ ಅಗೋಚರವಾಗಿ ವ್ಯವಸಾಯಮಾಡಲ್ಪಟ್ಟ ಸ್ಥಾನವಾಗಿತ್ತು ಈ ಆಲಯವು ನೆಲಮಟ್ಟಕ್ಕೆ ೫-೬ ಗಜಗಳ ಆಳದಲ್ಲಿದೆ ಇದರಲ್ಲಿ ಅಲ್ಲಲ್ಲಿ ನೀರೂರುತ್ತಿರುವುವರಿಂದ ಸುತ್ತಲೂ ಒಂದು ಕಾಲುವೆಯನ್ನು ಅಗೆಯಿಸಿ ನೀರನ್ನು ಹೊರಕ್ಕೆ ಹೋಗುವಂತೆ ಮಾಡಿರುವರು. ಈ ದೇವಾಲಯವು ಪೂರ್ವಾಭಿಮುಖವಾಗಿ ವಿಗ್ರಹ ಹೀನವಾಗಿರುವುದು. ಇದರಲ್ಲಿ ಒಂದು ನಂದಿವಿಗ್ರಹ ವಿರುವುದಾದರೂ ಇದನ್ನು ಯಾರೋ ಭಿನ್ನಮಾಡಿರುವರು. ಇಲ್ಲಿಂದ ಸ್ವಲ್ಪದೂರ ಪಶ್ಚಿಮದಿಕ್ಕಿಗೆ ಹೊರಟು ಎದುರಿಗೆ ಬರುವರಸ್ತೆಯೊಂದಿಗೆ ಉತ್ತರದಿಕ್ಕಿಗೆ ಹೊರಡಬಹುದು.

ಈ ಆಲಕ್ಕೆ ಸುಮಾರು ಒಂದುಮೈಲುದೂರದಲ್ಲಿ ಉದ್ದಾನ ವೀರಭದ್ರಾಲಯುವು ಉತ್ತರಾಭಿ ಮುಖವಾಗಿರುವುದು. ಆ ದೇವರಿಗೆ ಇಂದಿಗೂ ಪೂಜೆಗಳು ಜರುಗುತ್ತಿರುವುವು. ಇದರ ಸಮೀಪದಲ್ಲಿಯೇ ಪೂರ್ವಾಭಿಮುಖವಾಗಿ ಚಂಡೀಶ್ವರನ ದೇವಾಲಯುವಿರುವುದು. ಇದು ವಿಗ್ರಹಶೂನ್ಯವಾಗಿ ಪಶುಪಕ್ಷ್ಯಾದಿಗಳಿಗೆ ನಿವಾಸ ಭೂಮಿಯಾಗಿರುವುದು.

ಇಲ್ಲಿಂದ ಸುಮಾರು ಮೂರು ಫರ್ಲಾಂಗುಗಳ ದೂರಹೋದರೆ ದಾರಿಗೆ ಎಡಗಡೆ ಪೂರ್ವಾಭಿ ಮುಖವಾಗಿ ಆದಿಶೇಷ ಸಹಿತವಾದ "ಉಗ್ರನರಸಿಂಹ,, ನೆಂಬ ಶಿಲಾವಿಗ್ರಹ ವೊಂದಿರುವುದು, ಈ ವಿಗ್ರಹದ ಶಿರಸ್ಸಿನ ಮೇಲೆ ಆದಿಶೇಷನ ಹೆಡೆಗಳು ಆವರಿಸಿಕೊಂಡಿವೆ. ಈವಿಗ್ರಹವು ಒಬ್ಬ ಬ್ರಾಹ್ಮಣನಿಂದ ಕೆತ್ತಲ್ಪಟ್ಟಿತಂತೆ! ಇದರ ಮುಗನ್ನು ಯಾರೋ ಒಡೆದುಬಿಟ್ಟಿದ್ದರೂ ನೋಡುವುದಕ್ಕೆ ಬಹಳ ಭಯಂಕರವಾಗಿ ಉಗ್ರರಸವೇ ಮೂರ್ತೀಭವಿಸಿದೆಯೋ ಎಂಬಂತೆ ತೋರುವುದು, ಕ್ರೂರಾತ್ಮರು ಯಾರೋ ಆದಿಶೇಷನತಲೆಯನ್ನೂ, ಉಗ್ರನರಸಿಂಹ ಸ್ವಾಮಿಯ ಮೂಗನ್ನೂ, ಕೈಗಳನ್ನೂ, ಎದೆಯನ್ನೂ, ಕಡಿದು ಹಾಕಿರುವರು. ಇದು ಸುಮಾರು ಇಪ್ಪತ್ತೈದು ಅಡಿ ಎತ್ತರವಿರುವ ಏಕ ಶಿಲಾಮಯ ವಿಗ್ರಹವು, ಇದರತುದಿಯಲ್ಲಿ ಒಂದು ಶಾಸನವು ಕೆತ್ತಲ್ಪಟ್ಟಿರುವುದು, ಈ ವಿಗ್ರಹದ ಇರ್ಕಡೆಗಳಲ್ಲಿಯೂ ಕೆಳಕ್ಕೆ ಬಿದ್ದಿರುವ ಕಲ್ಲುಗಳ ರಾಶಿಯನ್ನು ಪರೀಕ್ಷಿಸಿ ನೋಡಿದರೆ ಇದರ ವಕ್ಷಸ್ಥಳದಲ್ಲಿ ಲಕ್ಷ್ಮೀದೇವಿ ಇದ್ದಂತೆ ತಿಳಿಯ ಬರುವುದು.

ಈ ವಿಗ್ರಹದ ಪ್ರಾಕಾರಕ್ಕೆ ಅನತಿದೂರದಲ್ಲಿಯೇ ಉತ್ತರ ಪಾರ್ಶ್ವದಲ್ಲಿ ಸುಮಾರು ಹತ್ತು ಅಡಿಗಳ ಎತ್ತರದದೊಡ್ಡ ಲಿಂಗವಿರುವ ದೇವಾಲಯವೊಂದಿರುವುದು, ಇದರಲ್ಲಿ ಯಾವಾಗಲೂ ನೀರು ನಿಂತಿರುವುದರಿಂದ ಅನಾರೋಗ್ಯವಾಗಿರುವುದು.

ಈ ನರಸಿಂಹಸ್ವಾಮಿಯ ದೇವಾಲಯುವನ್ನು ಬಿಟ್ಟು ಸುಮಾರು ನೂರು ಗಜಗಳ ದೂರಹೋದರೆ ಅಲ್ಲಿ ಕೃಷ್ಣಸ್ವಾಮಿಯ ದೇವಾಲಯ

ವಿರುವುದು, ಇದು ಈಗ ಹಾಳುಬಿದ್ದು ಹೋಗಿರುವುದು. ಈ ಗುಡಿಯಲ್ಲಿ ಅನೇಕ ಶಾಸನ ಗಳಿರುವುವು, ಪ್ರಾಕಾರಕ್ಕೆ ನಾಲ್ಕು ಬಾಗಿಲುಗಳಿರುವುವು, ಇದು ದೊಡ್ಡದೊಡ್ಡ ಕಲ್ಲುಗಳಿಂದ ಸ್ವಲ್ಪ ಒರಟಾಗಿ ಕಟ್ಟಲ್ಪಟ್ಟಿದೆ ಗರ್ಭ ಗೃಹದ ಮೇಲುಭಾಗದಲ್ಲಿರುವ ಗೋಪುರದಲ್ಲಿ ಶ್ರೀ ಕೃಷ್ಣಮೂರ್ತಿಯ ಚರ್ಯೆಗಳನ್ನು ತಿಳಿಸುವ ವಿಗ್ರಹಗಳಿರುವುವು, ಇದಕ್ಕೆದುರಾಗಿ (ಪೂರ್ವದಿಕ್ಕಿನಲ್ಲಿ) ದೊಡ್ಡ ವೀಥಿಯೊಂದಿರುವುದು ಈ ವೀಥಿಯು ಉದ್ದಕ್ಕೂ ಪಡಸಾಲೆ ಗಳಿರುವುವು, ಮಧ್ಯದಲ್ಲಿರುವ ಮಾರ್ಗವು ವ್ಯವಸಾಯಕ್ಕೆ ಉಪಯೋಗಿಸ ಲ್ಪಡುತ್ತಿರುವುದು.

ಈ ಆಲಯಕ್ಕೆ ಪಶ್ಚಿಮೋತ್ತರದಲ್ಲಿ (ವಾಯುವ್ಯದಲ್ಲಿ) ಗಣೇಶನ ಆಲಯ ವಿರುವುದು. ಇದರ ಸುತ್ತಲೂ ಗೋಡೆಗಳೇ ಇಲ್ಲದೆ ಇಪ್ಪತ್ತೆಂಟು ಸ್ತಂಭಗಳಮೇಲೆ ಕಟ್ಟಲ್ಪಟ್ಟಿರುವುದು ಇದರಲ್ಲಿ ಸ್ವಲ್ಪ ಹೆಚ್ಚುಕಡಿಮೆ ಹದಿನಾರು ಅಡಿಗಳ ಉದ್ದವಿರುವ ವಿಘ್ನೇಶ್ವರನ ವಿಗ್ರಹವಿರುವುದು, ದುಷ್ಟರುಯಾರೋ, ಈ ವಿಗ್ರಹದ ಎಡಗೈಯನ್ನೂ ಸುಂಡಿಲವನ್ನೂ ಕಡಿದು ಹಾಕಿರುವರು.

ಈ ವಿಗ್ರಹಕ್ಕೆ ಈಶಾನ್ಯ ದಿಕ್ಕಿನಲ್ಲಿ ಮತ್ತೊಂದು ವಿಘ್ನೇಶ್ವರಾಲಯ ವಿರುವುದು, ಇದು ಉನ್ನತ ಪ್ರದೇಶದಲ್ಲಿರುವುದು. ಇದೂಕೂಡ ಮೇಲೆಹೇ ಳಲ್ಪಟ್ಟ ವಿಗ್ರಹದಷ್ಟೇ ಇರುವುದು ಇದು ಶಿಥಿಲವಾಗದೆಯೂ, ಪೂಜೆಯಿಲ್ಲ ದೆಯೂ, ವಿಶೇಷವಾಗಿ ಕಪಟದ ಹಕ್ಕಿಗಳ ಹಿಕ್ಕೆಯ ದುರ್ಗಂಧದಿಂದ ಅನಾ ರೋಗ್ಯಕರವಾಗಿಯೂ ಇದೆ, ಈ ದೇವಾಲಯದ ಉತ್ತರದಲ್ಲಿ ಜೈನಾಲಯ ಗಳು ಕೆಲವಿರುವುವು, ಈ ಜೈನಾಲಯಗಳ ಸಮೀಪದಲ್ಲಿಯೇ ಉತ್ತರ ಭಾಗದಲ್ಲಿ ಪಂಪಾಪತಿಯಾದ ಶ್ರೀ ವಿರುಪಾಕ್ಷ ಸ್ವಾಮಿಯ ಆಲಯವಿರು ವುದು, ಶ್ರೀ ಹೇಮ ಕೂಟಾದ್ರಿಯಲ್ಲಿ ತುಂಗಭದ್ರಾ ತೀರದಲ್ಲಿ ಪಂಪಾದೇವಿಯು ಶ್ರೀ ವಿರುಪಾಕ್ಷ ಸ್ವಾಮಿಯನ್ನು ಕುರಿತು ತಪಸ್ಸುಮಾಡಿ ಅವನ

ಅನುಗ್ರಹವನ್ನು ಹೊಂದಿ, ಆತನನ್ನೇ ಪತಿಯಾಗಿ ಸ್ವೀಕರಿಸಿದಳಂತೆ; ಆವಿರೂಪಾಕ್ಷೇಶ್ವರನ ಆಲಯವು ಕೃಷ್ಣದೇವರಾಯನ ಕಾಲಕ್ಕಿಂತ ಪೂರ್ವಕಾಲದ್ದು, ಗುಡಿಯು ಪೂರ್ವಾಭಿಮುಖವಾಗಿದೆ, ಇದು ದೊಡ್ಡದಾಗಿಯೂ ಎರಡು ಗೋಪುರ ಗಳುಳ್ಳದ್ದಾಗಿಯೂ ಇದೆ. ಸಿಂಹದ್ವಾರದ ಮೇಲಿರುವ ಗೋಪುರವು ಬಹಳ ಎತ್ತರ ವಾಗಿಯೂ, ಏಳು ಅಂತಸ್ತುಗಳನ್ನುಳ್ಳದ್ದಾಗಿಯೂ, ಒಳಗಡೆ ಟೊಳ್ಳಾಗಿಯೂ ಇದೆ. ಇದರ ಮೇಲಕ್ಕೆ ಹತ್ತುವುದಕ್ಕೆ ಎರಡು ಕಡೆಯಲ್ಲಿಯೂ ಮೆಟ್ಟಲುಗಳಿವೆ, ಇದಕ್ಕೆ "ಗಾಳಿಯ ಗೋಪುರ" ಎಂದು ಹೆಸರು, ಇದು ಶ್ರೀ ಕೃಷ್ಣದೇವರಾಯರ ಸಹಾಯದಿಂದ "ವಿಠ್ಠಪ್ಪಯ್ಯ" ಎಂಬ ಘನಶಿಲ್ಪಿಯಿಂದ ನಿರ್ಮಿಸಲ್ಪಟ್ಟದ್ದು. ಪಾಶ್ಚಾತ್ಯರಾದ ಇಂಜನೀಯರುಗಳು ಕೂಡ ಇದರ ಶಿಲ್ಪವಿದ್ಯಾನೈಪುಣ್ಯವನ್ನು ಬಹಳವಾಗಿ ಕೊಂಡಾಡುತ್ತಿರುವರು. ಎರಡನೆಯ ಗೋಪುರವನ್ನು "ರಾಯರ ಗೋಪುರ" ಎಂದೆನ್ನುವರು, ಇದು ಗಾಳಿಯ ಗೋಪುರಕ್ಕಿಂತಲೂ ಸಣ್ಣದು, ಇದರ ಮೇಲಕ್ಕೆ ಹತ್ತುವುದಕ್ಕೆ ಸುಲಭವಾದ ಮಾರ್ಗವಿರುವುದು ಈ ಗೋಪುರವು ಜನಕಗಿರಿ ರಾಜನಿಂದ ನಿರ್ಮಿಸಲ್ಪಟ್ಟದ್ದು. ಈ ಗುಡಿಗೆ ಎರಡು ಪ್ರಾಕಾರಗಳೂ ಮಧ್ಯದಲ್ಲಿ ಗೋಡೆಯೂ ಇರುವುವು, ಹಿಂದಿನ ಪ್ರಾಕಾರದ ನಡುವೆ ತುಂಗಭದ್ರಾ ನದಿಯ ಕಾಲುವೆ ಪ್ರವಹಿಸುತ್ತಿರುವುದು. ಇದರಲ್ಲಿ ಯಾವಾಗಲೂ ನೀರು ಹರಿಯುತ್ತಿರುವುದು, ಒಳಗಿನ ಪ್ರಾಕಾರದಲ್ಲಿ ಗರ್ಭಗೃಹವೂ, ಇತರ ಆಲಯಗಳೂ ಇರುವುವು, ಈ ಆಲಯದಲ್ಲಿ ವಿಗ್ರಹವಿರುವುದು, ಇದಕ್ಕೆ ಈಗಲೂ ಚೆನ್ನಾಗಿ ಪೂಜೆ ನಡೆಯುತ್ತಿರುವುದು ಯಾತ್ರಿಕರು ಈಗ ಆಗ ಎನ್ನದೆ ಯಾವಾಗಲೂ ಶಕಟಾರೂಢರಾಗಿ ಈ ಪುಣ್ಯಕ್ಷೇತ್ರವನ್ನು ನೋಡಲಿಕ್ಕೆ ಬಂದು ಬಹುಭಕ್ತಿಯಿಂದ ಈ ವಿರೂಪಾಕ್ಷನನ್ನು ದರ್ಶನಮಾಡಿಕೊಂಡು ಪೂಜೆಯನ್ನು ಸಮರ್ಪಿಸಿ ಹೋಗುತ್ತಿರುವರು. ರಥೋತ್ಸವ ಕಾಲಗಳಲ್ಲಿಯೂ ಲೆಕ್ಕಿಸಲಾರದಷ್ಟು ಪ್ರಜೆಗಳು ಇಲ್ಲಿ ಕಿಕ್ಕಿರಿದು ಸಂತೋಷ

ಭರಿತರಾಗಿ ಪರಿಪೂರ್ಣ ಭಕ್ತಿಯಿಂದ ಪೂಜಾದಿಗಳನ್ನು ಸಮರ್ಪಿಸಿ ವೈಭವವನ್ನು ಮೆರೆಯಿಸುವರು. ಈ ದೇವಾಲಯಕ್ಕೆ ಎದುರಾಗಿಯೇ ತೇರು ನಡೆಯಲು ಅನುಕೂಲವಾದ ವಿಶಾಲರಮಣೀಯವಾದ ವೀಧಿಯೊಂದಿರುವುದು. ಇದಕ್ಕೆ ಎರಡುಕಡೆಗಳಲ್ಲಿಯೂ ಅಚ್ಯುತಸ್ವಾಮಿಯ ದೇವಾಲಯಕ್ಕೆ ಎದುರಾಗಿರುವಹಾಗೆ ಕೈಸಾಲೆಗಳಿರುವುವು. ಉತ್ತರಪ್ರಾಕಾರದಲ್ಲಿ ಪ್ರಸಿದ್ಧತೀರ್ಥವಾದ ತುಂಗಭದ್ರೆಗೆ ಹೋಗುವ ಮಾರ್ಗವಿರುವುದು.

ಶ್ರೀ ವಿರೂಪಾಕ್ಷೇಶ್ವರ ದೇವಾಲಯದಿಂದ ಪೂರ್ವಕ್ಕೆ ಸುಮಾರು ಆರು ಫರ್ಲಾಂಗುಗಳ ದೂರಾ ನಡೆದುಹೋದರೆ ಶ್ರೀ ಕೋದಂಡರಾಮಸ್ವಾಮಿಯ ದೇವಾಲಯವು ಸಿಕ್ಕುವುದು. ಇದು ಉತ್ತರಾಭಿಮುಖವಾಗಿರುವುದು. ಇದರಲ್ಲಿರುವ ಶ್ರೀ ಸೀತಾ ರಾಮ ಲಕ್ಷ್ಮಣ ವಿಗ್ರಹಗಳು ಅತಿಮನೋಜ್ಞಗಳಾಗಿರುವುವು. ಶ್ರೀ ರಾಮ ಲಕ್ಷ್ಮಣರು ಧನುರ್ಬಾಣಪಾಣಿಗಳಾಗಿ ಸೀತೆಯೊಂದಿಗೆ ನಿಂತಿರುವ ವಿಗ್ರಹಗಳು. ಪೂಜಾಯೋಗ್ಯಗಳಾದ ಈ ವಿಗ್ರಹಗಳನ್ನು ನೋಡುವ ಜನರಿಗೆ ಕೂಡಲೇ ಭಯ ಭಕ್ತಿ ವಿನಯ ಸಂಭ್ರಮಗಳು ಉದ್ಭವಿಸುವುದಲ್ಲದೆ ರಾಮನ ಕಲ್ಯಾಣಗುಣಗಣಗಳು ಅಸದೃಶಗಳೆಂತಲೂ, ಅಗಣ್ಯಗಳೆಂತಲೂ ಸೀತೆಯ ಪತಿಭಕ್ತಿಯು ಅಪ್ರತಿಮವಾದುದೆಂತಲೂ, ರಾಮ ಲಕ್ಷ್ಮಣರ ಸೌಭ್ರಾತ್ರವು ಸರ್ವಜನ ಸ್ತುತಿಪಾತ್ರವೆಂತಲೂ ಸ್ಫೂರ್ತಿಸದೆ ಇರದು. ಈ ಸೀತಾ ರಾಮ ಲಕ್ಷ್ಮಣರಿಗೆ ಈಗಲೂ ನಿರಾತಂಕವಾಗಿ ಪೂಜೆಗಳು ಜರುಗುತ್ತಿರುವುವು.

ಇಲ್ಲಿಯೇ ಚಕ್ರತೀರ್ಥವೆಂದು ಕರೆಯಲ್ಪಡುವ ತುಂಗಭದ್ರೆಯು ಪ್ರವಹಿಸುತ್ತಿರುವುದು. ಇಲ್ಲಿರುವ ಬಂಡೆಗಳಮೇಲೆ ಅನೇಕ ವಿಗ್ರಹಗಳೂ ಆ ವಿಗ್ರಹಗಳಿಗೆ ನಮಸ್ಕರಿಸುವ ಭಕ್ತರ ವಿಗ್ರಹಗಳೂ ಕೆತ್ತಲ್ಪಟ್ಟಿರುವುವು. ಇಲ್ಲಿ ತುಂಗಭದ್ರಾ ನದಿಯು ಚಕ್ರಾಕಾರವಾಗಿ ಪ್ರವಹಿಸುತ್ತಿರುವುದರಿಂದ ಇಲ್ಲಿಯ ಜಲಕ್ಕೆ ಚಕ್ರತೀರ್ಥವೆಂಬ ಹೆಸರು ಬಂದಿದೆ.

ಇಲ್ಲಿಂದ ಪೂರ್ವದಿಕ್ಕಿಗೆ ಸುಮಾರು ಆರು ಫರ್ಲಾಂಗುಗಳ ದೂರಾ ಹೋದರೆ ಗುಡ್ಡದಮೇಲೆ ಇರುವ ಶ್ರೀ ವಿಠ್ಠಲಸ್ವಾಮಿಯ ದೇವಾಲಯವು ಕಾಣಬರುವುದು. ಇದು ಶ್ರೀ ವಿದ್ಯಾನಗರದ ಪೂರ್ವದಿಕ್ಕಿನಲ್ಲಿ ತುಂಗಭದ್ರಾ ನದಿಯ ಓರೆಯಲ್ಲಿ ಕಟ್ಟಲ್ಪಟ್ಟಿರುವುದು. ಈ ದೇವಾಲಯವು ಒಬ್ಬ ರಾಜನ ಕಾಲದಲ್ಲಿಯೇ ಕಟ್ಟಲ್ಪಟ್ಟುದಲ್ಲ. ಕೃಷ್ಣದೇವರಾಜರು ವಿಷ್ಣುಭಕ್ತಿ ಪರಾಯಣರಾಗಿ ಇದನ್ನು ಕಟ್ಟಿಸಲಾರಂಭಿಸಿದರೆಂದು ಹೇಳುತ್ತಾರೆ. ಈ ದೇವಾಲಯದ ಸಿಂಹದ್ವಾರವು ಪೂರ್ವಾಭಿಮುಖವಾಗಿರುವುದು. ಗರ್ಭಾಲಯದ ಎರಡು ಪಾರ್ಶ್ವಗಳಲ್ಲಿಯೂ ಇರುವ ಮಂಟಪಗಳ ಶಿಲ್ಪಕಳಾನೈಪುಣ್ಯವನ್ನು ಹೊಗಳಲು ಸಾವಿರ ನಾಲಿಗೆಗಳಾದರೂ ತೀರದು. ಏಕ ಶಿಲಾಮಯವಾಗಿ ಒಂದೊಂದು ಕಲ್ಲು ಕಂಭದಲ್ಲಿ ಹದಿನಾರು ಕಂಭಗಳು ನಿಂಗಡಿಸಲ್ಪಟ್ಟು ಅವುಗಳಲ್ಲಿ ನಾನಾವಿಧವಾದ ವಿಗ್ರಹಗಳು ಸಹಿತ ಕೆತ್ತಲ್ಪಟ್ಟಿರುವುವು ದೇವಾಲಯದ ಛಾವಣಿಕೂಡ ಶಿಲಾಮಯವಾಗಿ, ಅದರಲ್ಲಿನ ಶಿಲ್ಪ ಕೆಲಸಗಳನ್ನು ನೋಡಿದರೆ ಆ ಕಾಲದಲ್ಲಿನ ಶಿಲ್ಪಕಳಾವಿಜ್ಞಾನದ ಔನ್ನತ್ಯವನ್ನು ಸಾರಿ ಹೇಳುವಂತಿರುವುದು. ದೇವಾಲಯದ ಹೊದಿಕೆಯ ಸೂರುಗಳಿಂದ ಮೂಲೆಗಳಲ್ಲಿ ಜೋಲಾಡುತ್ತಿರುವ ಕಲ್ಲಿನ ಸರಪಣಿಗಳಿಗೆ ದೀಪದ ಬಟ್ಟಲುಗಳನ್ನು ತಗುಲಿಸುತ್ತಿದ್ದರಂತೆ. ಈಗ ಈ ಸರಪಣಿಗಳು ಮಾತ್ರ ಕಾಣಬರುವುವು. ಆ ದೇವಾಲಯವು ಉಳಿದ ದೇವಾಲಯಗಳಂತೆಯೇ ಶಿಲಾಮಯನಿರ್ಮಿತವಾದುದು. ಕಬ್ಬಿಣವಾಗಲಿ, ಮರವಾಗಲಿ, ಮೊಳೆಗಳಾಗಲಿ ಇಲ್ಲದೆ ನಿರ್ಮಿಸಲ್ಪಟ್ಟಿರುವುದನ್ನು ನೋಡಿದ ಜನರು ಆಶ್ಚರ್ಯನಿಮಗ್ನಮಾನಸ್ಕರಾಗದೆ ಹೋಗಲಾರರು. ಚೆನ್ನಾಗಿ ಪರಿಶೀಲಿಸಿ ನೋಡಿದರೆ ಈ ಆಲಯವು ಸಂಪೂರ್ಣ ವೈಭವದಿಂದಿದ್ದಾಗ ಮಾಳಿಗೆಗೂ ಕಂಭಗಳಿಗೂ ವಿವಿಧಗಳಾದ ಬಣ್ಣಗಳನ್ನು ಬಳಿಯುತ್ತಿದ್ದಂತೆ ಗುರುತುಗಳು ಕಾಣಬರುತ್ತಿವೆ. ಇಂತಹ ಆಶ್ಚರ್ಯ ನಿರ್ಮಾಣವನ್ನು ಹೊಂದಿ, ಸುತ್ತಲೂ ದೀಪಮಾಲೆಯು ತೇಜ

ಸ್ಸನ್ನು ಪ್ರಸರಿಸುತ್ತಿರಲು, ವಾದ್ಯಘೋಷವು ನಭೋಂತರಾಳವನ್ನು ತುಂಬು ತ್ತಿರಲು ಪರಮ ವೈಭವದಿಂದ ಒಪ್ಪುತ್ತಿದ್ದ ಕಾಲದ ಸಾಯಂ ಸಮಯಗಳು ಹೇಗಿದ್ದುವೋ ಊಹಿಸಲಸಾಧ್ಯವು. ಈಗ ಈ ದೇವಾಲಯವು ವಿಗ್ರಹಹೀನ ವಾಗಿದೆ. ವಿಜಯನಗರವು ಶತ್ರುವಶವಾದಾಗ ಮಹಮ್ಮದೀಯರ ಮೂಲಕ ಹಾಳುಮಾಡಲ್ಪಟ್ಟುದಲ್ಲದೆ ಈಚೀಚೆಗೆ ನಿಕ್ಷೇಪ ದ್ರವ್ಯಗಳು ಇರುವುವೆಂಬ ಭ್ರಾಂತಿಗೊಂಡ ಬೈರಾಗಿಗಳಿಂದ ಅಲ್ಲಿರುವ ವಿಗ್ರಹಗಳೆಲ್ಲ ಪೆಳ್ಳಗಿಸಲ್ಪಟ್ಟಿ ರುವುವು. ಪೂರ್ವದ ಸ್ಥಿತಿಯನ್ನು ಊಹಿಸಿ ಪ್ರಕೃತದ ಹೀನಸ್ಥಿತಿಯನ್ನು ನೋಡಿದರೆ ಎಂತವನಿಗಾದರೂ ಮನಸ್ಸಂತಾಪ ಉಂಟಾಗದೆ ಇರದು

ಪ್ರಾಕಾರಮಧ್ಯದಲ್ಲಿ ಶಿಲಾಮಯವಾದ ಕಲ್ಲಿನ ಗಾಲಿಗಳು, ಈಚು, ಮೂಕಿಮರಗಳು. ಇವುಗಳನ್ನುಳ್ಳ ತೇರೊಂದಿರುವುದು. ಆ ರಥದ ಸುತ್ತಲೂ ಸ್ತ್ರೀಯರು ಗಿಳಿಗಳಮೇಲೆ ಕುಳಿತುಕೊಂಡು ಗಿಳಿಗಳು ಎಳೆಯುತಕ್ಕ ರಥಗಳನ್ನು ನಡಿಸುತ್ತಿರುವಂತೆ ಕೆತ್ತಲ್ಪಟ್ಟು ಮುದ್ದಿನ ಮೂಟೆಯನ್ನು ಕಟ್ಟುತ್ತಿರುವುವು. ಈ ತೇರಿಗೆ ಪೂರ್ವದಿಕ್ಕಿನಲ್ಲಿ ಕಲ್ಲಿನ ಬೃಂದಾವನವೊಂದಿರುವುದು. ಈ ದೇವಾಲಯಕ್ಕೆ ಮೂಡಣ ಭಾಗದಲ್ಲಿ ತಳವಾರನ ಕಟ್ಟೆಯೂ ಇದೆ. ಅಲ್ಲಿಂದ ಗ್ರಾಮದವರೆಗೂ ಕಲ್ಲಿನ ಚಪ್ಪಡಿ ಗಳನ್ನು ಹಾಸಿರುವ ವಿಶಾಲವಾದ ರಸ್ತೆಯೂ ಒಂದು ಮೈಲಿತನಕ ವ್ಯಾಪಿಸಿ ರುವುದು.

ಈ ದೇವಾಲಯವನ್ನು ಬಿಟ್ಟು ಪೂರ್ವಾಭಿಮುಖವಾಗಿ ತಳವಾರನ ಕಟ್ಟೆಯಿಂದ ಹೋಗಿ ನದಿಯ ಒರೆಯಲ್ಲಿಯೇ ಇರುವ ಋಷಿಗಳ ಸಮಾಧಿ ಗಳು ಒಂಭತ್ತನ್ನು ನೋಡಿ ಅವುಗಳಿಗೆ ಪೂಜಾಸತ್ಕಾರಗಳನ್ನು ಮಾಡ ಬಹುದು. ಈ ಆವರಣದ ಆಚೆ ಹೊಸದಾಗಿ ಕಟ್ಟಲ್ಪಟ್ಟ ಒಂದು ದೇವಾಲ ಯವಿರುವುದು. ಈ ಆಲಯವನ್ನು ಕುರಿತು ಒಂದು ಕಥೆಯನ್ನು ಹೇಳು ವರು.—ಆನೆಗೊಂದಿಸಂಸ್ಥಾನದ ಈಚಿನ ರಾಜರುಗಳಲ್ಲೊಬ್ಬನು ವೇಶ್ಯಾ

ಪ್ರಿಯನಾಗಿ ಅವರೊಂದಿಗೆ ಅಲ್ಲಿವಾಸಮಾಡಿಕೊಂಡಿದ್ದನಂತೆ. ಆಸ್ಥಳವನ್ನು ಬಿಟ್ಟುಹೋಗೆಂದು ಅವನಿಗೆ ಎಷ್ಟೆಷ್ಟೋ ಕನಸುಗಳು ಬಿದ್ದರೂ ಅವನು ಅವುಗಳನ್ನು ಲಕ್ಷ್ಯಮಾಡದೆ ಅಲ್ಲಿಯೇ ಇದ್ದುಬಿಟ್ಟನಂತೆ ಒಂದುದಿನ ಆ ನದಿಯು ಎರಡು ದಡಗಳಲ್ಲಿಯೂ ತುಂಬಿ ನೀರು ಹರಿಯುತ್ತಿದ್ದಾಗ ಆ ರಾಜನು ತನ್ನ ಪ್ರಿಯಾಂಗನೆಯರೊಂದಿಗೆ ಆಚೆನ ತಡಿಯಲ್ಲಿರುವ ಆನೆಗೊಂದಿಗೆ ಹೋಗುತ್ತಿರುವಾಗ ದೋಣಿಯು ಮುಳುಗಿಹೋಗಿ, ಅದರಲ್ಲಿದ್ದವರೆಲ್ಲರೂ ಜಲಸಮಾಧಿಯನ್ನು ಹೊಂದಿದರಂತೆ ?

ಇಲ್ಲಿ ತುಂಗಭದ್ರಾನದಿಯು ಸ್ವಲ್ಪ ತಿಟ್ಟನಮೇಲೆ ಪ್ರವಹಿಸುತ್ತಿರುವುದರಿಂದ ನದಿಯು ಆಳವಾಗಿಲ್ಲ. ಬೇಸಗೆಯಕಾಲದಲ್ಲಿ ಒಂದು ದಡದಿಂದ ಮತ್ತೊಂದು ದಡಕ್ಕೆ ಗಾರಾಳವಾಗಿ ಹೋಗಬಹುದು. ಈ ಭಾಗದಲ್ಲಿ ನದಿಯು ಬಂಡೆಯಮೇಲೆ ಪ್ರವಹಿಸುತ್ತಿರುವುದು. ಆ ಬಂಡೆಯಮೇಲೆ ಜಲಪ್ರವಾಹಪಾತದಿಂದ ತೋಡಲ್ಪಟ್ಟ ಬಿಲಗಳು ಅಸಂಖ್ಯಾತಗಳಾಗಿವೆ. ಈ ವಿಚಿತ್ರಗಳನ್ನು ನೋಡುತ್ತಾ ನದಿಯನ್ನುದಾಂಟ ನೈಜಾಮರ ರಾಜ್ಯದಲ್ಲಿರುವ ಆನೆಗೊಂದಿಯನ್ನು ಸೇರಬಹುದು. ಇಲ್ಲಿ ಶ್ರೀಕೃಷ್ಣದೇವರಾಯರ ಸಂತತಿಯವರಾಗಿ ಮೃದುಮಧುರಸ್ವರಗಳನ್ನುಳ್ಳ ಶ್ರೀರಾಜರಂಗದೇವರಾಯರು ಈಗ ವಾಸವಾಗಿರುವರು. ಈ ಗ್ರಾಮದಲ್ಲಿ ಶ್ರೀರಂಗನಾಥಸ್ವಾಮಿಯ ದೇವಾಲಯವಿರುವುದು. ಈ ದೇವಸ್ಥಾನದಲ್ಲಿ ದೇವರಪೂಜೆಗಳು ಕ್ರಮವಾಗಿ ಜರುಗುತ್ತಲಿರುವುವು.

ಆನೆಗೊಂದಿ ಗ್ರಾಮಕ್ಕೆ ಪೂರ್ವದಿಕ್ಕಿನಲ್ಲಿ ಸುಮಾರು ಒಂದು ಮೈಲು ದೂರದಲ್ಲಿ ಮಾರ್ಗಕ್ಕೆ ಎಡಭಾಗದಗುಡ್ಡದಲ್ಲಿ ಒಂದು ದೊಡ್ಡ ಗವಿ ಇರುವುದು. ದೀಪದ ಸಹಾಯದಿಂದ ಒಳಗೆ ಪ್ರವೇಶಿಸಿ ನೋಡಿದರೆ ಇದರಲ್ಲಿ ಎರಡು ವಿಗ್ರಹಗಳು ಕಾಣಬರುವುವು. ಅಲ್ಲಿ ವಾಲಿಯು ತಪಸ್ಸು ಮಾಡುತ್ತಿದ್ದನೆಂತಲೂ, ಆತನ ತಪಕ್ಕೆ ರಂಗನಾಥನು ಪ್ರತ್ಯಕ್ಷನಾದನೆಂತಲೂ ಒಂದು ಗಾಥೆಯುಂಟು, ಇದನ್ನು ಗವಿರಂಗ ನಾಯಕನೆಂದು ಹೇಳುವರು.

ಇಲ್ಲಿಂದ ಮೂಡಲಿಗೆ ಸುಮಾರು ಆರು ಫರ್ಲಾಂಗುಗಳ ದೂರ ಹೋದರೆ ಪಂಪಾಸರೋವರವು ಕಾಣಬರುವುದು, ಇಲ್ಲಿ ಲಕ್ಷ್ಮೀದೇವಾಲಯ ವಿರುವುದು, ಇದರ ಎದುರಿಗೆ ಸ್ವಲ್ಪ ದೂರದಲ್ಲಿ ಶೋಕಹರಣ ಮೊದಲಾದ ಗುಡ್ಡಗಳಿರುವುವು. ಇವುಗಳಲ್ಲಿನ ಸೃಷ್ಟಿ ವೈಚಿತ್ರ್ಯವು ಬಹು ದರ್ಶನೀಯವಾಗಿರುವುದು.

ಪಂಪಾ ಸರೋವರವನ್ನು ಬಿಟ್ಟು ಅಲ್ಲಿಂದ ಸಮೀಪ ಮಾರ್ಗದ ಮೂಲಕ ಹಂಪೆಗೆ ಹೋಗಿ ಅಲ್ಲಿಗೆ ಸುಮಾರು ಎರಡುವರೆ ಮೈಲುಗಳ ದೂರದಲ್ಲಿರುವ ಕಮಲಾ ಪುರಕ್ಕೆ ಹೋಗಿ ಅಲ್ಲಿನ ಸತ್ರದಲ್ಲಿ ಇಳಿದುಕೊಳ್ಳಬಹುದು.

ಆಹಾ ! ನಮ್ಮ ಪೂರ್ವಿಕರು ಮಾಡಿದ ಚಿತ್ರಕೆಲಸ ಗಳನ್ನು ನೋಡಿ ಸ್ವಲ್ಪ ಮಟ್ಟಿಗೆ ಸಂತೋಷ ಪಟ್ಟರೂ ಧನದಾಶೆಯಿಂದ ಆ ಕೆಲಸಗಳನ್ನು ನಾಶಮಾಡಿದ ಮಹಮ್ಮದೀಯರನ್ನೂ, ಹಿಂದೂ ಬೈರಾಗಿಗಳನ್ನೂ, ಎಷ್ಟು ಮಟ್ಟಿಗೆ ನಿಂದಿಸ ಬಹುದು ? ನಗರ ನಿರ್ಮಾತೃಗಳು, ಮಾಡಿಸಿದವರೂ, ಶಿಲ್ಪಿಗಳೂ, ಪ್ರಭುಗಳೂ, ಮಂತ್ರಿಗಳೂ, ಮೊದಲಾದವರೂ, ಹೇಗೆ ಕಾಲದರ್ಶನವನ್ನು ಹೊಂದಿದರೋ ಅವರ ಕೃತ್ಯಗಳು ಕೂಡ ಕಾಲಗತಿಯನ್ನು ಮೀರಲಾರದೆ ಹೋದುವಲ್ಲವೆ ?

ಆರ್ಯವರ್ಯರೇ !

ಈ ವಿಜಯನಗರವನ್ನು ನೋಡಿದ ಒಬ್ಬ ದೊಡ್ಡಮನುಷ್ಯನು ಅಲ್ಪ ಕಾಲ ಅಲ್ಲಿದ್ದು ನೋಡಿದವುಗಳನ್ನು ಸಂಗ್ರಹವಾಗಿ ಬರೆದ ವಿಷಯವಿದು. ಈ ನಗರವನ್ನು ಸಮಗ್ರವಾಗಿ ನೋಡಬೇಕೆಂದರೆ ಕೆಲವು ತಿಂಗಳಕಾಲ ಅಲ್ಲಿದ್ದಹೊರತು ತಿಳಿಯದು. ಪೂರ್ವದಲ್ಲಿ ಒಂದಾನೊಂದು ಕಾಲದಲ್ಲಿ ವಿಜಯನಗರ ಸಾಮ್ರಾಜ್ಯಲಕ್ಷ್ಮಿಗೆ ತಿಲಕ ಪ್ರಾಯವಾಗಿ ಆಂಧ್ರಭಾಷಾ ಯೋಷಾಮಣಿಯು ಯೌವನವನ್ನು ಹೊಂದಿದ ಮಂದಿರವಾಗಿ ಅಪ್ರತಿಮ ವೀರಾಗ್ರೇ

ಸರರಿಗೆ ಹುಟ್ಟಿದ ಮನೆಯೆನಿಸಿ ತುರುಷ್ಕರಾಜರ ಎದೆ ಬಿರಿಯುವಂತೆ ದಿನ ದಿನಾಭಿವೃದ್ಧಿಯನ್ನು ಹೊಂದಿ ಐಶ್ವರ್ಯ ಶೌರ್ಯ ಪ್ರಾಭವಗಳಲ್ಲಿ ಪ್ರಪಂಚ ದಲ್ಲಿ ಇದಕ್ಕೆಣೆಯಾದುದು ಮತ್ತೊಂದಿಲ್ಲವೆಂದು ಪಶ್ಚಿಮಖಂಡ ವಾಸಿಗಳಿಂ ದಲೂ ಪೂರ್ವಖಂಡ ವಾಸಿಗಳಿಂದಲೂ ಸಾವಿರ ಬಾಯಿಗಳಿಂದ ಹೊಗಳಿಕೆ ಯನ್ನು ಪಡೆದು ಶಿಲ್ಪಿಗಳ ನೈಪುಣ್ಯಕ್ಕೆ ವಿಹಾರಭೂಮಿಯಾಗಿ ಶರಣಾಗತರಿಗೆ ರಕ್ಷಕಸ್ಥಾನವಾಗಿ ಹೆಸರುಗೊಂಡ ವಿಜಯನಗರ ಸಂಸ್ಥಾನವು, ಈಗ ರೂಪ ರಹಿತವಾಗಿ, ಜನಶೂನ್ಯವಾಗಿ, ಅನಾರೋಗ್ಯ ಪ್ರದೇಶವಾಗಿ ಅರಣ್ಯವಾಗಿ ನೋಟಕರಿಗೆ ಭಯವನ್ನೂ ಮನಸ್ಸಂತಾಪವನ್ನೂ ಉಂಟುಮಾಡುತ್ತಲಿದೆ. ಆಹಾ! ಕಾಲಪ್ರಭಾವಕ್ಕೆ ಯಾರೇನು ಮಾಡಬಹುದು !!

ಸಂಪೂರ್ಣಂ